ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 10 ಸೋಮವಾರ 2024

₹4

ಸಂಪುಟ: 45 | ಸಂಚಿಕೆ: 55 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರು ಮಿತ್ರ ಸೋಮವಾರ 10 ಜೂನ್ 2024

ಪಾಕ್ ಬಗ್ಗುಬಡಿದ ಭಾರತ



ನ್ಯೂಯಾರ್ಕ್, ಜೂ.9– ಭಾರೀ ರೋಚಕತೆಯಿಂದ ಕೂಡಿದ್ದ ಲೋ ಸ್ಕೋರಿಂಗ್ ಮ್ಯಾಚ್‌ನಲ್ಲಿ ಅದ್ಭುತ ಆಟವಾಡಿದ ಭಾರತ ಪಾಕಿಸ್ತಾನದ ವಿರುದ್ಧ 6 ರನ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ಭಾರತ ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಪಾಕ್ ವಿರುದ್ಧ ಮತ್ತೊಮ್ಮೆ ಮೇಲುಗೈ ಸಾಧಿಸಿದೆ. ಅಲ್ಲದೇ 'ಎ' ಗುಂಪಿನ ಅಂಕಪಟ್ಟಿಯಲ್ಲಿ 4 ಅಂಕ ಕಲೆ ಹಾಕುವ ಮೂಲಕ ಅಗ್ರಸ್ಥಾನ ಅಲಂಕರಿಸಿದೆ.

ನ್ಯೂಯಾರ್ಕ್‌ನ ನಸ್ಸೌ ಕೌಂಟಿ ಇಂಟರ್ ನ್ಯಾಷನಲ್ ಸ್ಟೇಡಿಯಂನಲ್ಲಿ ನಡೆದ ಹೈವೋಲ್ಟೇಜ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ 19 ಓವರ್‌ಗಳಲ್ಲಿ 119 ರನ್‌ಗಳಿಗೆ ಆಲೌಟಾಯಿತು. ತಂಡದ ಪರ ನಾಯಕ ರೋಹಿತ್ ಶರ್ಮಾ 13, ರಿಷಬ್ ಪಂತ್ 42, ಅಕ್ಷರ್ ಪಟೇಲ್ 20 ರನ್ ಗಳಿಸಿದ್ದು ಬಿಟ್ಟರೆ ಉಳಿದವರಿಂದ ನಿರೀಕ್ಷಿತ ಪ್ರದರ್ಶನ ಮೂಡಿ ಬರಲಿಲ್ಲ. ಪರಿಣಾಮ ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗದೇ ಪೆವಿಲಿಯನ್ ಪರೇಡ್ ನಡೆಸಿದರು. ಪಾಕಿಸ್ತಾನದ ಪರ ನಸೀಂ ಷಾ, ಹ್ಯಾರೀಸ್ ರೌಫ್ ತಲಾ 3, ಮೊಹಮ್ಮದ್ ಅಮೀರ್ 2, ಶಹೀನ್ ಆಫ್ರಿದಿ 1 ವಿಕೆಟ್ ಪಡೆದರು.

120 ರನ್‌ಗಳ ಸಾಧಾರಣ ಗುರಿ ಬೆನ್ನತ್ತಿದ ಪಾಕಿಸ್ತಾನ ಆರಂಭದಿಂದಲೂ ನಿರಂತರವಾಗಿ ವಿಕೆಟ್ ಕಳೆದುಕೊಂಡಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಮೊಹಮ್ಮದ್ ರಿಜ್ವಾನ್ ತಲಾ 1 ಸಿಕ್ಸರ್, ಬೌಂಡರಿ ಒಳಗೊಂಡ 31 ಗಳಿಸಿದರೇ, ನಾಯಕ ಬಾಬರ್ ಅಜಂ, ಉಸ್ಮಾನ್ಖಾನ್ ಹಾಗೂ ಫಖಾರ್ ಜಮಾನ್ ತಲಾ 13 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಉಳಿದಂತೆ ಐಮದ್ ವಸೀಂ 15, ಶದಾಬ್ ಖಾನ್ 4, ಇಫ್ತಿಖಾರ್ ಅಹಮ್ಮದ್ 5, ನಸೀಂ ಷಾ 10 ರನ್ ಗಳಿಸಿದರು. ಅಂತಿಮವಾಗಿ ಪಾಕಿಸ್ತಾನ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 113 ರನ್ ಗಳಿಸಿ ಸೋಲು ಅನುಭವಿಸಿತು.

ಭಾರತದ ಪರ ಜಸ್‌ಪ್ರೀತ್ ಬೂಮ್ರಾ 3, ಹಾರ್ದಿಕ್ ಪಾಂಡ್ಯ 2, ಅರ್ಶದೀಪ್ ಸಿಂಗ್, ಅಕ್ಷರ್ ಪಟೇಲ್ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಭಾರತದ ಪರ ಜಸ್‌ಪ್ರೀತ್ ಬೂಮ್ರಾ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು. ಈ ಸೋಲಿನೊಂದಿಗೆ ಪಾಕಿಸ್ತಾನದ ಸೂಪರ್ 8 ಹಾದಿ ಕಠಿಣಗೊಂಡಿದೆ.

ಪ್ರತಿಭಾವಂತ ವಿದ್ಯಾರ್ಥಿನಿಗೆ ಅಭಿನಂದನೆ



2024ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಮರುಮೌಲ್ಯಮಾಪನದಲ್ಲಿ 624/625ಕ್ಕೆ ಅಂಕ ಪಡೆದು ರಾಜ್ಯಕ್ಕೆ 2ನೇ ಸ್ಥಾನ ಹಾಗೂ ಮೈಸೂರು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿನಿ ಎಂ.ಡಿ.ಸುಧೀಕ್ಷ ಅವರನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್, ಶಂಕರನಾರಾಯಣ, ವೆಂಕಟೇಶ್, ವಿಪ್ರ ಮಹಿಳಾ ಸಂಗಮದ ಅಧ್ಯಕ್ಷೆ ಡಾ.ಕೆ.ವಿ.ಲಕ್ಷ್ಮೀದೇವಿ, ಸೌಭಾಗ್ಯ ಮೂರ್ತಿ, ಶಾರದಾ ವಿಪ್ರ ಸಂಘದ ಅಧ್ಯಕ್ಷ ಡಿ.ಜಿ.ಸುರೇಶ್, ಖಜಾಂಚಿ ಶಿವಾನಂದ, ಪಿ.ಶ್ರೀಧರ್ ಅಭಿನಂದಿಸಿದರು. ಪೋಷಕರಾದ ಎನ್.ವಿ.ದಿನೇಶ್, ಡಾ.ಎನ್.ಸೌಮ್ಯ ಉಪಸ್ಥಿತರಿದ್ದರು.

ಕುವೆಂಪು ಕೃತಿಗಳು ಇಂಗ್ಲಿಷ್‌ಗೆ ಅನುವಾದವಾಗಿದ್ದರೆ ಅವರಿಗೂ ನೋಬೆಲ್ ಪುರಸ್ಕಾರ ಲಭಿಸುತ್ತಿತ್ತು...

● ಮೈಸೂರು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅಭಿಮತ ● 'ಎಲೆಮರೆ ಕಾಯಿಗಳು', 'ಎರೆನಾಡ ಅಂಕುರ' ಕೃತಿ ಬಿಡುಗಡೆ



ಶ್ರೀ ನಟರಾಜ ಶಿಕ್ಷಣ ಸಂಸ್ಥೆಗಳ ಸೆಮಿನಾರ್ ಹಾಲ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುತ್ತು ಯ ವಡ್ಡರ ಇವರ ಸಂಪಾದಕೀಯ 'ಎಲೆಮರೆ ಕಾಯಿಗಳು' ಮತ್ತು ಲಯನ್ ಡಾ.ನ.ಗಂಗಾಧರಪ್ಪ ನಾರಣಾಪುರ ಅವರ 'ಎರೆನಾಡ ಅಂಕುರ' ಕೃತಿಗಳನ್ನು ಭಾನುವಾರ ಬಿಡುಗಡೆಗೊಳಿಸಲಾಯಿತು.

ಮೈಸೂರು, ಜೂ.9(ಜಿಎ)–ಕುವೆಂಪು ಅವರ ಕನ್ನಡ ಕೃತಿಗಳು ಇಂಗ್ಲಿಷ್‌ಗೆ ಅನುವಾದವಾಗಿದ್ದರೆ, ಅವರಿಗೂ ನೋಬೆಲ್ ಪ್ರಶಸ್ತಿ ಲಭಿಸುತ್ತಿತ್ತು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅಭಿಪ್ರಾಯಪಟ್ಟರು.

ಶ್ರೀ ನಟರಾಜ ಶಿಕ್ಷಣ ಸಂಸ್ಥೆಗಳ ಸೆಮಿನಾರ್ ಹಾಲ್‌ನಲ್ಲಿ ಕನ್ನಡ ನುಡಿಮುತ್ತು ಸಾಹಿತ್ಯ ವೇದಿಕೆ, ನಿಸರ್ಗ ಸಂಗೀತ ವಿದ್ಯಾಲಯ ಸಂಘ, ಲಯನ್ಸ್ ಕ್ಲಬ್ ಆಫ್ ಮೈಸೂರು ಮಿಲೇನಿಯಂ ಹಾಗೂ ಸಂಜನಾ ಬಳಗ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ಮುತ್ತು ಯ ವಡ್ಡರ ಇವರ ಸಂಪಾದಕೀಯ 'ಎಲೆಮರೆ ಕಾಯಿಗಳು' ಮತ್ತು ಲಯನ್ ಡಾ.ನ.ಗಂಗಾಧರಪ್ಪ ನಾರಣಾಪುರ ಅವರ 'ಎರೆನಾಡ ಅಂಕುರ' ಕೃತಿ ಲೋಕಾರ್ಪಣೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕುವೆಂಪು ಅವರು ತಮ್ಮ ಆರಂಭಿಕ ದಿನಗಳಲ್ಲಿ ಕವನಗಳನ್ನು ಇಂಗ್ಲಿಷ್‌ನಲ್ಲಿ ಬರೆಯಲು ಆರಂಭಿಸಿದರು. ಒಮ್ಮೆ ತಮ್ಮ ಒಂದು ಇಂಗ್ಲಿಷ್ ಕೃತಿಯನ್ನು ಆಂಗ್ಲ ಸಾಹಿತಿಗೆ ನೀಡಿದಾಗ ಅವರು ನಿಮ್ಮ ಮಾತೃಭಾಷೆ ಯಾವುದು ಎಂದು ಪ್ರಶ್ನಿಸಿ, ಇದೇನೋ ಉತ್ತಮವಾಗಿ ಬರೆದಿದ್ದೀರಾ! ಏಕೆ ನಿಮ್ಮ ಮಾತೃಭಾಷೆಯಲ್ಲಿ ಬರೆಯಬಾರದು. ಆಗ ನೀನು ವಿಶ್ವ ಸಾಹಿತಿ ಆಗುತ್ತಿಯಾ ಎಂಬ ಸಲಹೆ ನೀಡಿದ ನಂತರ ಅವರು ಆಲೋಚಿಸಿ, ಕನ್ನಡದಲ್ಲಿ ಮಕ್ಕಳಿಂದ ಹಿರಿಯರವರೆಗಿನ ಎಲ್ಲಾ ಕೃತಿ, ಕಾದಂಬರಿ ಕವನ ಬರೆದರು. ಅವರ ಎಲ್ಲಾ ಕೃತಿಗಳು ಇಂಗ್ಲಿಷ್‌ಗೆ ಅನುವಾದವಾಗಿದ್ದರೆ, ಡಾ.ರವೀಂದ್ರನಾಥ ಟಾಗೋರ್‌ರಂತೆ ಕುವೆಂಪು ಅವರಿಗೂ ನೋಬೆಲ್ ಪ್ರಶಸ್ತಿ ಲಭಿಸುತ್ತು. ಆದರೆ, ಅವರು ಕನ್ನಡದಲ್ಲಿ ಬರೆದು ವಿಶ್ವಮಾನವನಾಗಿ ಸಂದೇಶ ಸಾರಿದ್ದಾರೆ ಎಂದು ಹೇಳಿದರು.

ಎಲೆಮರೆ ಕಾಯಿಗಳ ಕೃತಿಯಲ್ಲಿ ಎಲ್ಲಿಯೂ ಪರಿಚಯವಾಗದ 46 ಮಂದಿ ಸಾಧಕರನ್ನು ಇಲ್ಲಿ ಪರಿಚಯಿಸಿದ್ದಾರೆ. ಈ ರೀತಿ ಕೆಲಸಗಳಾಗಬೇಕು. ಮತ್ತೊಂದೆಡೆ ಡಾ.ನ.ಗಂಗಾಧರಪ್ಪ ನಾರಣಾಪುರ ಅವರ 'ಎರೆನಾಡ ಅಂಕುರ' ಕೃತಿ ಉತ್ತಮವಾಗಿ ಮೂಡಿ ಬಂದಿದೆ ಎಂದರು.

ಕಾರ್ಯಕ್ರಮದಲ್ಲಿ ಹನುಮಸಾಗರದ ಮಲ್ಲಯ್ಯ ಕೋಮಾರಿ 'ಎಲೆಮರೆ ಕಾಯಿಗಳು' ಕೃತಿ ಬಿಡುಗಡೆಗೊಳಿಸಿದರೆ, ಯುವ ಸಾಹಿತಿ ಜ್ಯೋತಿ ಆನಂದ್ ಚಂದುಕರ ಕೃತಿ ಪರಿಚಯ ಮಾಡಿಕೊಟ್ಟರು. 'ಎರೆನಾಡ ಅಂಕುರ' ಕೃತಿಯನ್ನು ಡಾ.ನಾಗರಾಜ ವಿ.ಭೈರಿ ಬಿಡುಗಡೆಗೊಳಿಸಿದರು. ಕನ್ನಡ ಸಾಹಿತ್ಯ ಕಲಾಕೂಟದ ಎಂ.ಚಂದ್ರಶೇಖರ್ ಪರಿಚಯಿಸಿದರು. ಹೊಸಮಠದ ಶ್ರೀ ಚಿದಾನಂದ ಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸಿದರು. ಲಯನ್ಸ್ ಕ್ಲಬ್ ಮಿಲೇನಿಯಂನ ಅಧ್ಯಕ್ಷ ಎ.ಸಿ.ರವಿ ಅಧ್ಯಕ್ಷತೆ, ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಂನ ಆರಕ್ಷಕ ನಿರೀಕ್ಷಕಿ ಎಂ.ಗೀತಾ, ಈರಮಂಡ ಹರಿಣಿ ವಿಜಯ್, ಎಂ.ಕೆ. ಜಯಕುಮಾರ್, ಜಗದೀಶ್ ಎಸ್.ಕಾಬನೆ, ಮುತ್ತು ಯ ವಡ್ಡರ, ಎನ್.ಸುನೀಲ್‌ಕುಮಾರ್, ಎಂ.ಜೆ.ರಮೇಶ್, ಸಾಗರ್ ಪಿ.ನಿಂಬಾಳ, ವಿನೋದ್ ಕುಮಾರ್ ಪಾಟೀಲ್ ಉಪಸ್ಥಿತರಿದ್ದರು.

ಮೈಸೂರನ್ನು ಬಾಲಕಾರ್ಮಿಕ ಮುಕ್ತ ಜಿಲ್ಲೆಯಾಗಿಸಿ

ಅಧಿಕಾರಿಗಳಿಗೆ ಡಿಸಿ ಡಾ.ಕೆ.ವಿ.ರಾಜೇಂದ್ರ ಸಲಹೆ



ಮೈಸೂರು, ಜೂ.9– ತಮ್ಮ ಸುತ್ತಮುತ್ತಲೂ ಬಾಲಕಾರ್ಮಿಕರು ಹಾಗೂ ಕಿಶೋರ ಕಾರ್ಮಿಕರು ಕಂಡುಬಂದಲ್ಲಿ ಮಕ್ಕಳ ಸಹಾಯವಾಣಿ 1098 ಗೆ ಕರೆ ಮಾಡಬಹುದಾಗಿದ್ದು, ಮೈಸೂರನ್ನು ಬಾಲಕಾರ್ಮಿಕ ಮುಕ್ತ ಜಿಲ್ಲೆಯನ್ನಾಗಿಸಲು ಪ್ರತಿಯೊಬ್ಬರು ಶ್ರಮಿಸಿ ಇತರರಿಗೂ ಪ್ರೇರಣೆ ನೀಡಬೇಕು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸಲಹೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಯ ಜಿಲ್ಲಾ ಮಟ್ಟದ ಕಾರ್ಯಕಾರಿ ಸಮಿತಿ ಸಭೆ ಹಾಗೂ ಕಾರ್ಯಪಡೆ (ಟಾಸ್ಕ್‌ಫೋರ್ಸ್) ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬಾಲಕಾರ್ಮಿಕ ಮುಕ್ತ ಜಿಲ್ಲೆಯನ್ನಾಗಿಸಲು ಸಹಕರಿಸುವ ಸ್ವಯಂ ಸೇವಾ ಸಂಸ್ಥೆಗಳಿಗೆ 'ಬಾಲಮಿತ್ರ' ಎಂದು ಪ್ರಮಾಣ ಪತ್ರ ನೀಡಲು ಸೂಚಿಸಿದರು.

ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986ರನ್ವಯ ಕಲಂ 17ರಡಿ ನೇಮಕಗೊಂಡಿರುವ ಎಲ್ಲಾ ಇಲಾಖೆಗಳು ಮೈಸೂರು ಜಿಲ್ಲೆಯನ್ನು ಬಾಲಕಾರ್ಮಿಕ ಮುಕ್ತ ಜಿಲ್ಲೆಯನ್ನಾಗಿಸುವ ಉದ್ದೇಶದಿಂದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನವನ್ನು ಅರ್ಥಪೂರ್ಣವಾಗಿ ಆಯೋಜಿಸಬೇಕು. ಪ್ರತಿ ಗ್ರಾಮ ಪಂಚಾಯಿತಿ, ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪ್ರತಿ ವಾರ್ಡ್‌ಗಳಲ್ಲಿಯೂ ಜಾಗೃತಿ ಸಪ್ತಾಹ ಹಮ್ಮಿಕೊಂಡು ಜಿಲ್ಲೆಯಲ್ಲಿರುವ ಪ್ರತಿ ಸಂಸ್ಥೆಗಳು ತಮ್ಮ ಸಂಸ್ಥೆಯಲ್ಲಿ ಬಾಲಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆಯಂತೆ 14 ವರ್ಷದೊಳಗಿನ ಮಕ್ಕಳನ್ನು ಕೆಲಸಕ್ಕೆ ನೇಮಕ ಮಾಡಿಕೊಳ್ಳುವುದಿಲ್ಲವೆಂದು ದೃಢೀಕರಿಸಿರುವ ಫಲಕಗಳನ್ನು ಹಾಕಲು ಕ್ರಮ ವಹಿಸಿ, ಪರವಾನಗಿ ಪಡೆಯದ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳನ್ನು ಮುಚ್ಚಿಸಲು ಸೂಚಿಸಿದರು.

ಸಭೆಯಲ್ಲಿ ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಮೈಸೂರು ಉಪ ವಿಭಾಗಾಧಿಕಾರಿ, ಪೊಲೀಸ್ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಕಾರ್ಮಿಕ ಇಲಾಖೆ ಅಧಿಕಾರಿಗಳು ಹಾಗೂ ಇನ್ನಿತರರಿದ್ದರು.

ಉಚಿತವಾಗಿ ನೋಟ್ ಬುಕ್ ವಿತರಣೆ

ಮೈಸೂರು,ಜೂ.9–ಬೃಂದಾವನ ಬಡಾವಣೆಯಲ್ಲಿರುವ ಶ್ರೀ ಸದ್ಗುರು ಸೇವಾ ಟ್ರಸ್ಟ್ ವತಿಯಿಂದ ಮೇಟಗಳ್ಳಿಯಲ್ಲಿರುವ ಸರ್ಕಾರಿ ಶಾಲಾ ಬಡ ವಿದ್ಯಾರ್ಥಿಗಳಿಗೆ ನೋಟ್ ಬುಕ್ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಕೇದಾರ್, ಶಾಲಿವಾಹನ, ಪ್ರಫುಲ್ ಚಂದ್ರ, ನಳಿನಿ ಕೃಷ್ಣಮೂರ್ತಿ, ಚಂದ್ರ, ಸಂದೀಪ್, ಉಷಾ ರಾಜು, ಡಾ.ರೂಪ, ಸೌಮ್ಯ ಭರತ್, ರಾಘವೇಂದ್ರ ಹೊಳ್ಳ, ಅನುರಾಧ ಪಂಡಿತ್, ನಾಗರಾಜ್, ಕಿರಣ್ ಸಿಂಗ್, ಪ್ರಭಾವತಿ ನಾಗರಾಜ, ಪ್ರಕೃತಿ, ಆಶಾ ಸತ್ಯಪಾಲ, ಅನ್ನಪೂರ್ಣ ಪರೀಕ್ಷಿತ್ ಭಾಗವಹಿಸಿದ್ದರು.

ಮಹದೇವಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ದೇವಯ್ಯನಹುಂಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಶ್ರೀರಾಂಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ದಡದಹಳ್ಳಿ, ಕಡಕೊಳ ಮೈಸೂರ್ ಕ್ಲಸ್ಟರ್ ಸರ್ಕಾರಿ ಶಾಲೆ, ಹಿನಕಲ್‌ನಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಏಕಲವ್ಯ ನಗರದಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆ ಹಾಗೂ ಸಾದನಹಳ್ಳಿಯಲ್ಲಿರುವ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಬಡ ಮಕ್ಕಳಿಗೆ ಸುಮಾರು 3 ಸಾವಿರಕ್ಕೂ ಹೆಚ್ಚು ನೋಟ್ ಬುಕ್‌ಗಳನ್ನು ವಿತರಿಸಲಾಯಿತು.



ಆಸ್ಪತ್ರೆಗಳಿಗೂ ಬಂತು ಬಣ್ಣ ಸಂಹಿತೆ; ಪಾಲಿಸದಿದ್ದರೆ ಕಠಿಣ ಕ್ರಮದ ಎಚ್ಚರಿಕೆ


ಬೆಂಗಳೂರು, ಜೂ.9(ಬಿಎಲ್‌ಯು) ನಕಲಿ ವೈದ್ಯರ ಹಾವಳಿ ತಡೆಗಟ್ಟಲು ರಾಜ್ಯ ಸರ್ಕಾರ ದಿಟ್ಟ ಕ್ರಮ ಕೈಗೊಂಡಿದೆ. ಇನ್ನು ಮುಂದೆ ಪ್ರತಿಯೊಂದು ಆಸ್ಪತ್ರೆಗೂ ಬಣ್ಣ ಸಂಹಿತೆ ಪಾಲಿಸುವಂತೆ ಸೂಚನೆ ನೀಡಿರುವ ಸರ್ಕಾರ, ತಪ್ಪಿದರೆ ಶಿಕ್ಷೆ ವಿಧಿಸಲಾಗುವುದು ಎಂದು ಎಚ್ಚರಿಸಿದೆ.

ರಾಜ್ಯದಲ್ಲಿ ನಕಲಿ ವೈದ್ಯರ ಹಾವಳಿ ಹೆಚ್ಚಾಗಿದೆ. ಇತ್ತೀಚೆಗೆ ನಕಲಿ ವೈದ್ಯರು ಎಸಗಿದ್ದ ಭ್ರೂಣ ಹತ್ಯೆ ಪ್ರಕರಣಗಳು ಪತ್ತೆಯಾಗಿದ್ದವು. ಈ ಹಿನ್ನೆಲೆಯಲ್ಲಿ ನಕಲಿ ವೈದ್ಯರ ಹಾವಳಿ ತಡೆಗಟ್ಟಲು ರಾಜ್ಯ ಸರ್ಕಾರ ಈಗ ಬಣ್ಣ ಸಂಹಿತೆ ಜಾರಿಗೊಳಿಸಿದೆ. ಇನ್ನು ಮುಂದೆ ಅಲೋಪತಿ ಆಸ್ಪತ್ರೆಗಳು ನೀಲಿ ಬಣ್ಣ ಹಾಗೂ ಆಯುರ್ವೇದ ಆಸ್ಪತ್ರೆಗಳು ಹಸಿರು ಬಣ್ಣದ ಬೋರ್ಡ್‌ಗಳನ್ನು ಅಳವಡಿಸಬೇಕೆಂದು ಸರ್ಕಾರ ಕಟ್ಟಾಜ್ಞೆ ಮಾಡಿದೆ. ಜೊತೆಗೆ ಖಾಸಗಿ ಕ್ಲಿನಿಕ್ ಮತ್ತು ಆಸ್ಪತ್ರೆಯಲ್ಲಿ ಕೆಪಿಎಂಇ ನೋಂದಣಿ ಸಂಖ್ಯೆ, ಆಸ್ಪತ್ರೆ ಹೆಸರು ಮತ್ತು ಮಾಲೀಕರ ಹೆಸರನ್ನು ಕಟ್ಟಡದ ಮುಂಭಾಗದಲ್ಲಿ ಪ್ರದರ್ಶಿಸುವುದನ್ನು ಕಡ್ಡಾಯಗೊಳಿಸಿದೆ.

ಸರ್ಕಾರ ನೀಡಿರುವ ಆದೇಶವನ್ನು ಪಾಲಿಸದಿದ್ದರೆ ಕೆಪಿಎಂಇ ತಿದ್ದುಪಡಿ ಕಾಯ್ದೆ 2017ರ ಸೆಕ್ಷನ್ 19(5) ಅನ್ವಯ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.

ಈ ವಿಚಾರವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

10.06.2024 ಸೋಮವಾರ, ಮಳೆ ನಕ್ಷತ್ರ: ಮೃಗಶಿರ, 08.06.2024ರಿಂದ 21.06.2024 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಚೌತಿ, ನಕ್ಷತ್ರ: ಪುಷ್ಯ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಮೈಸೂರು ಭಾರತೀಯ ಭಾಷಾ ಸಂಸ್ಥಾನ: ಮೂರು ದಿನಗಳ ಭಾರತದ ಶಾಸ್ತ್ರೀಯ ಭಾಷೆಗಳ ರಾಷ್ಟ್ರೀಯ ಸಮ್ಮೇಳನ, ಉದ್ಘಾಟನಾ ಭಾಷಣ:** ಗುರ್ಗಾಂವ್‌ನ ಅಮಿಟಿ ವಿಶ್ವವಿದ್ಯಾಲಯದ ಭಾಷಾಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ಉದಯ ನಾರಾಯಣ ಸಿಂಗ್, ಅಧ್ಯಕ್ಷತೆ: ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕರಾದ ಪ್ರೊ.ಶೈಲೇಂದ್ರ ಮೋಹನ್, ಸ್ಥಳ: ಮೈಸೂರು ಭಾರತೀಯ ಭಾಷಾ ಸಂಸ್ಥಾನದ ಪ್ರಿವ್ಯೂ ಥಿಯೇಟರ್, ಬೆಳಗ್ಗೆ 10ಕ್ಕೆ

■ **ಶ್ರೀ ಗೋ ಚಂದ್ರ ಮಾರಮ್ಮ ದೇವಿ ದೇವಸ್ಥಾನ ಪ್ರತಿಷ್ಠಾಪನೆ ಮತ್ತು ಮಹಾ ಕುಂಬಾಭಿಷೇಕ:** ದಿವ್ಯ ಸಾನ್ನಿಧ್ಯ: ಅವಧೂತ ದತ್ತ ಪೀಠದ ಕಿರಿಯ ಸ್ವಾಮೀಜಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಮುಖ್ಯ ಅತಿಥಿಗಳು: ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್‌ಗೌಡ, ಮಾಜಿ ಶಾಸಕ ಎಲ್.ನಾಗೇಂದ್ರ, 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ, ಮಾಜಿ ಮೇಯರ್ ನಾರಾಯಣ, ಮಾಜಿ ಕಾರ್ಪೊರೇಟರ್‌ಗಳಾದ ವಿ.ರಾಮು, ಆರ್.ಶಿವಣ್ಣ, ರೈಲ್ವೆ ಆದಿಜಾಂಬವ ಮಹಾ ಸಂಘದ ಅಧ್ಯಕ್ಷ ಗಂಗಣ್ಣ, ಪ್ರಧಾನ ಕಾರ್ಯದರ್ಶಿ ಎಂ.ಡಿ.ವೆಂಕಟೇಶ್, ಕಾಂಗ್ರೆಸ್ ಮುಖಂಡ ಎಸ್.ನಾಗರಾಜು, ವಿಶೇಷ ಆಹ್ವಾನಿತರು: ಹರೀಶ್, ಜಗದೀಶ್, ಕೃಷ್ಣಪ್ಪ (ರೈಲ್ವೆ), ಮುರುಗೇಶ್, ಧನರಾಜ್, ಇರ್ಫಾನ್ ಬಾಯ್, ಸ್ಥಳ: ಎಂಸಿಸಿ ಕಾಲೋನಿ, ಜೋಡಿ ತೆಂಗಿನಮರ ರಸ್ತೆ, ಬಂಬೂ ಬಜಾರ್, ಸಮಯ: ಬೆಳಗ್ಗೆ 10.30ಕ್ಕೆ

■ **ಡಿ.ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನ ಸಮಿತಿ: ಡಿ.ದೇವರಾಜ ಅರಸು ಅವರ ಪುಣ್ಯ ಸ್ಮರಣೆ, ಪುಷ್ಪಾರ್ಚನೆ:** ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಅಧ್ಯಕ್ಷತೆ: ಶಾಸಕ ತನ್ವೀರ್ ಸೇಠ್, ಬಹುಮಾನ ವಿತರಣೆ: ಅಂಶಿ ಪ್ರಸನ್ನಕುಮಾರ್, ಮುಖ್ಯ ಅತಿಥಿಗಳು ಡಾ.ಕೆ.ರಘುರಾಂ ವಾಜಪೇಯಿ, ಉಪನ್ಯಾಸ: ಹೆಚ್.ಎ.ವೆಂಕಟೇಶ್, ಆಶಯ ನುಡಿ: ಎಂ.ಚಂದ್ರಶೇಖರ್, ಸ್ಥಳ: ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಸಮಯ: ಬೆಳಗ್ಗೆ 11ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, 6.15–ಗೀತಾರಾಧನ, 6.35. / 6.10 ಅಂಚೆ–ಅಂಕನ, ಆಕಾಶವಾಣಿ ಅಂಕಣ ಪ್ರಸ್ತುತಿ: ಡಾ.ಅಮ್ಮಸಂದ್ರ ಸುರೇಶ ಹಾಗೂ ಎಂ.ಎನ್.ವಿಜಯಲಕ್ಷ್ಮಿ, ಪ್ರಾಯೋಜಕರು: ಭಾರತೀಯ ಅಂಚೆ, ಮೈಸೂರು ವಿಭಾಗ, 6.40–"ನಾನು ನ.ರತ್ನ" ಬಾನುಲಿ ಸರಣಿ. ಖ್ಯಾತ ನಾಟಕಕಾರ ಹಾಗೂ ವಾಕ್ ಶ್ರವಣ ತಜ್ಞ ಡಾ.ನ.ರತ್ನ ಅವರ ಜೀವನಗಾಥೆ ಅವರದೇ ಧ್ವನಿಯಲ್ಲಿ 6.50–ರೈತರಿಗೆ ಸಲಹೆ, 7.15–ಯೋಗೋತ್ಸವ: ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 9.00–ನೆನಪಿನಂಗಳ (ಧ್ವನಿ ಭಂಡಾರದಿಂದ): 1. ಡಾ.ಕೆ.ಶಿವರಾಮ ಕಾರಂತರಿಂದ ಸಣ್ಣ ಕಥೆ 'ಸಿಂಹ ಮೂಲದ ಕಥೆ', 2. "ಜೀವನದಲ್ಲಿ ನಂಬಿಕೆಯ ಪಾತ್ರ" ಪ್ರೊ.ದೇ.ಜವರೇಗೌಡರ ಭಾಷಣದ ಧ್ವನಿ ಮುದ್ರಣ, 10.00–ಶಾಸ್ತ್ರೀಯ ಸಂಗೀತ: ಆರ್.ಕೆ.ಶ್ರೀಕಂಠನ್–ಹಾಡುಗಾರಿಕೆ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, 12.30 ದೇವರನಾಮ–12.45–ನಮ್ಮ ಆರೋಗ್ಯ? "ADHD– ಅಟೆನ್ಷನ್ ಡಿಫಿಸಿಟ್ ಹೈಪರ್ ಆಕ್ಟಿವಿಟಿ ಡಿಸಾರ್ಡರ್" ಕುರಿತು ಮೈಸೂರಿನ ಮಕ್ಕಳ ನರರೋಗ ತಜ್ಞ ಡಾ.ಅನುಷಾರಾಜ್ ಕೆ ಅವರೊಂದಿಗೆ ಮಾತುಕತೆ. ಇವರೊಂ ದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 1.20–ಭಾವಗೀತೆ ಗಳು–ಸುನಿತಾ.ಎಸ್, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಸಿಕ್ಕಿಲ್ ಸಹೋದರಿಯರು? ಕೊಳಲು ವಾದನ 4.00–ಮಹಿಳಾರಂಗ–"ನಾನು ನನ್ನ ಕಂಪನಿ", ವಿಷಯ: ಮೈಸೂರಿನ ಚಾಮುಂಡಿಪುರಂನಲ್ಲಿರುವ ಇಡ್ಲಿ ಹಾಗೂ ದೋಸೆ ಹಿಟ್ಟು ತಯಾರಿಕಾ ಉದ್ಯಮದ ಮಹಿಳೆಯರೊಂದಿಗೆ ಅವರೊಂದಿಗೆ ಮಾತುಕತೆ. ಪ್ರಸ್ತುತಿ: ಸಹನಾ. ಆರ್, 4.45– ಹಿಂದಿಪಾಠ– ಡಾ.ಎಸ್.ಪಿ.ವಿದ್ಯಾಕುಮಾರ್, 5.45–ನಾನು ನ.ರತ್ನ ಬಾನುಲಿ ಸರಣಿ. ಖ್ಯಾತ ನಾಟಕಕಾರ ಹಾಗೂ ವಾಕ್ ಶ್ರವಣ ತಜ್ಞ ಡಾ.ನ.ರತ್ನ ಅವರ ಜೀವನಗಾಥೆ ಅವರದೇ ಧ್ವನಿಯಲ್ಲಿ 6.50–ಕೃಷಿರಂಗ: ಹಣ್ಣು ಹೊನ್ನು–ತೋಟಗಾರಿಕಾ ಬೆಳೆಗಳ ಸಮಗ್ರ ಬೇಸಾಯ ವಿಧಾನ ಕುರಿತ ಬಾನುಲಿ ಸರಣಿ ಮುಂಗಾರಿಗೆ ತೋಟಗಾರಿಕಾ ಇಲಾಖೆ ಅಭಿವೃದ್ಧಿ ಯೋಜನೆಗಳ ಕುರಿತ ನೇರ ಫೋನ್–ಇನ್ ಕಾರ್ಯಕ್ರಮ. ಭಾಗವಹಿಸುತ್ತಾರೆ: ಮೈಸೂರು ವಲಯದ ತೋಟಗಾರಿಕಾ ಜಂಟಿ ನಿರ್ದೇಶಕ ಹೆಚ್.ಎಂ.ನಾಗರಾಜ್ ಹಾಗೂ ಮೈಸೂರು ಜಿಲ್ಲಾ ತೋಟಗಾರಿಕಾ ಉಪನಿರ್ದೇಶಕ ಮಂಜುನಾಥ್ ಅಂಗಡಿ. ಪ್ರಸ್ತುತಿ: ಎನ್.ಕೇಶವಮೂರ್ತಿ, 8.30–ಹಿಂದಿ ಚಿತ್ರಗೀತೆಗಳು, 9.30–'ಹಾದಿಯಲ್ಲಿ ಕಂಡ ಮುಖ'? ಬಾನುಲಿ ಸರಣಿ. ಆನಂದೂರಿನ ನಾಟಕದ ಮೇಷ್ಟ್ರು ವೆಂಕಟಸ್ವಾಮಪ್ಪ ಅವರ ಜೊತೆ ಮಾತುಕತೆ. ಪ್ರಸ್ತುತಿ: ಅಬ್ದುಲ್ ರಶೀದ್, 10.00–ನಾಟಕ "ಬುಗುರಿ", ಮೂಲ ಸಣ್ಣ ಕಥೆ–ಮೊಗಳ್ಳಿ ಗಣೇಶ್ ರಚನೆ–ಎಸ್.ವಿ.ಕೃಷ್ಣ ಶರ್ಮ, ನಿರ್ಮಾಣ–ರಘುಪತಿ ಹೆಗ್ಡೆ 10.30–ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಜೂನ್ 10 ಸೋಮವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 55 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಭಾನುವಾರದಂದು ರಾಷ್ಟ್ರಪತಿ ಭವನದಲ್ಲಿ ಪ್ರಮಾಣವಚನ ಸ್ವೀಕರಿಸಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರೊಂದಿಗೆ ಅವರ ಸಂಪುಟ ಸದಸ್ಯರು...



3.0 ಮೋದಿ ಹವಾ

ಮೂರನೇ ಬಾರಿ ಪ್ರಧಾನಮಂತ್ರಿಯಾಗಿ ಮೋದಿ ಪಟ್ಟಾಭಿಷೇಕ

ನರೇಂದ್ರ ಮೋದಿ ಅವರೊಂದಿಗೆ 30 ಕ್ಯಾಬಿನೆಟ್, 5 ಸ್ವತಂತ್ರ ರಾಜ್ಯ ಸಚಿವರು, 36 ಮಂದಿ ರಾಜ್ಯ ಸಚಿವರಾಗಿ ರಾಷ್ಟ್ರಪತಿಗಳಿಂದ ಪ್ರಮಾಣವಚನ ಸ್ವೀಕಾರ



ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಭಾನುವಾರ ರಾತ್ರಿ ನಡೆದ ಕಾರ್ಯಕ್ರಮದಲ್ಲಿ ನರೇಂದ್ರ ಮೋದಿ ಅವರು 3ನೇ ಬಾರಿಗೆ ಪ್ರಧಾನಮಂತ್ರಿಯಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಪ್ರಮಾಣವಚನ ಸ್ವೀಕರಿಸಿದರು.

ನವದೆಹಲಿ, ಜೂ. 9– ನರೇಂದ್ರ ಮೋದಿಯವರು ಭಾನುವಾರ ರಾತ್ರಿ ಮೂರನೇ ಬಾರಿಗೆ ಪ್ರಧಾನಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ರಾಷ್ಟ್ರಪತಿ ಭವನದಲ್ಲಿ ನಡೆದ ಅದ್ದೂರಿ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನರೇಂದ್ರ ಮೋದಿ ಅವರಿಗೆ ಪ್ರತಿಜ್ಞಾವಿಧಿ ಬೋಧಿಸಿದರು.

ಇದೇ ವೇಳೆ 30 ಮಂದಿ ಕ್ಯಾಬಿನೆಟ್ ದರ್ಜೆ, ಐವರು ರಾಜ್ಯ (ಸ್ವತಂತ್ರ ಖಾತೆ) ಹಾಗೂ 36 ಮಂದಿ ರಾಜ್ಯ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು. ಪ್ರಧಾನಿ ಮೋದಿಯವರ ನೂತನ ಸಂಪುಟದಲ್ಲಿ ಹಿಂದುಳಿದ ವರ್ಗದ 27 ಮಂದಿ, ಪರಿಶಿಷ್ಟ ಜಾತಿ 10 ಮಂದಿ, ಪರಿಶಿಷ್ಟ ಪಂಗಡ ಮತ್ತು ಅಲ್ಪಸಂಖ್ಯಾತರು ತಲಾ 5 ಮಂದಿಗೆ ಸ್ಥಾನ ಲಭಿಸಿದೆ. ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾಗಿರುವ ನಿರ್ಮಲಾ ಸೀತಾರಾಮನ್ 3ನೇ ಬಾರಿಗೆ ಕ್ಯಾಬಿನೆಟ್ ಸಚಿವೆಯಾಗಿ ಪ್ರಮಾಣವಚನ ಸ್ವೀಕರಿಸಿದರೆ, ಧಾರವಾಡ ಲೋಕಸಭಾ ಕ್ಷೇತ್ರದಿಂದ ಸತತ 5 ಬಾರಿ ಗೆಲುವು ಸಾಧಿಸಿರುವ ಪ್ರಹ್ಲಾದ್ ಜೋಶಿ 2ನೇ ಬಾರಿಗೆ ಮೋದಿ ಸಂಪುಟದಲ್ಲಿ ಸ್ಥಾನ ಪಡೆದಿದ್ದಾರೆ. ಬಿಜೆಪಿಯ ಮೈತ್ರಿ ಪಕ್ಷವಾದ ಜೆಡಿಎಸ್‌ನ ಮಂಡ್ಯ ಸಂಸದ, ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಮೋದಿ ಸಂಪುಟದಲ್ಲಿ ಕ್ಯಾಬಿನೆಟ್ ದರ್ಜೆ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು. ಬೆಂಗಳೂರು ಉತ್ತರ ಕ್ಷೇತ್ರದ ಸಂಸದೆ ಶೋಭಾ ಕರಂದ್ಲಾಜೆ 2ನೇ ಬಾರಿಗೆ ಕೇಂದ್ರ ಸಚಿವೆಯಾದರೆ, ತುಮಕೂರಿನಿಂದ ಆಯ್ಕೆಯಾಗಿರುವ ವಿ. ಸೋಮಣ್ಣ ಮೊದಲ ಪ್ರಯತ್ನದಲ್ಲೇ ಕೇಂದ್ರ ಸಂಪುಟ ಸೇರಿದ್ದಾರೆ.

ಪ್ರಧಾನಿ ಮೋದಿ ಅವರ ಪದಗ್ರಹಣ ಸಮಾರಂಭಕ್ಕೆ ನೆರೆರಾಷ್ಟ್ರಗಳಾದ ಶ್ರೀಲಂಕಾ ಅಧ್ಯಕ್ಷ ರನಿಲ್ ವಿಕ್ರಮಸಿಂಘೆ, ನೇಪಾಳ ಪ್ರಧಾನಿ ಪ್ರಚಂಡ, ● 10ನೇ ಪುಟಕ್ಕೆ

ಮೋದಿ ಸಂಪುಟದಲ್ಲಿ 6 ಮಂದಿ ಮಾಜಿ ಸಿಎಂಗಳು

ನವದೆಹಲಿ, ಜೂ.9– ಪ್ರಧಾನಿ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ರಚನೆಗೊಂಡಿದೆ. ರಾಷ್ಟ್ರಪತಿ ಭವನದಲ್ಲಿ ನಡೆದ ಪ್ರಮಾಣವಚನ ಸಮಾರಂಭದಲ್ಲಿ ಪ್ರಧಾನಿ ಮೋದಿ ಸೇರಿದಂತೆ 72 ಸಚಿವರು ಪ್ರಮಾಣವಚನ ಸ್ವೀಕರಿಸಿದ್ದಾರೆ.

ಮೋದಿ ಕ್ಯಾಬಿನೆಟ್‌ನಲ್ಲಿ 6 ಮಾಜಿ ಮುಖ್ಯಮಂತ್ರಿಗಳು ಸ್ಥಾನ ಪಡೆದಿದ್ದಾರೆ. ಮೂರು ಬಾರಿ ಮಧ್ಯಪ್ರದೇಶದ ಮುಖ್ಯಮಂತ್ರಿಯಾಗಿದ್ದ ಶಿವರಾಜ್ ಸಿಂಗ್ ಚೌಹಾಣ್, ಹರ್ಯಾಣ ಮಾಜಿ ಸಿಎಂ ಮನೋಹರ್ ಲಾಲ್ ಕಟ್ಟರ್, ಉತ್ತರ ಪ್ರದೇಶ ಮಾಜಿ ಸಿಎಂ ರಾಜನಾಥ್ ಸಿಂಗ್, ಅಸ್ಸಾಂ ಮಾಜಿ ಸಿಎಂ ಸೊರ್ಬಾನಂದ್ ಸೊನ್ವಾಲ್, ಎನ್‌ಡಿಎ ಮಿತ್ರ ಪಕ್ಷಗಳಿಂದ ಕರ್ನಾಟಕದ ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ, ಬಿಹಾರ ಮಾಜಿ ಸಿಎಂ ಜಿತನ್ ರಾಮ್ ಮಾಂಝಿ ಇದೀಗ ಮೋದಿ ಕ್ಯಾಬಿನೆಟ್ ಸೇರಿದ್ದಾರೆ.


ನಿರ್ಮಲಾ ಸೀತಾರಾಮನ್


ಹೆಚ್.ಡಿ. ಕುಮಾರಸ್ವಾಮಿ


ಪ್ರಹ್ಲಾದ್ ಜೋಷಿ


ವಿ. ಸೋಮಣ್ಣ


ಶೋಭಾ ಕರಂದ್ಲಾಜೆ

ಕರ್ನಾಟಕದಿಂದ ನಿರ್ಮಲಾ ಸೀತಾರಾಮನ್, ಕುಮಾರಸ್ವಾಮಿ, ಪ್ರಹ್ಲಾದ್ ಜೋಷಿಗೆ ಸಂಪುಟ ದರ್ಜೆ; ಶೋಭಾ, ಸೋಮಣ್ಣರಿಗೆ ರಾಜ್ಯ ಸಚಿವ ಸ್ಥಾನ

ನವದೆಹಲಿ, ಜೂ.9– ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಸೇರಿದಂತೆ ರಾಜ್ಯದ ಐವರು ಸಂಸದರು ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಸಂಪುಟದಲ್ಲಿ ಸ್ಥಾನ ಪಡೆದಿದ್ದು, ಭಾನುವಾರ ರಾತ್ರಿ ರಾಷ್ಟ್ರಪತಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಮಿತ್ರ ಪಕ್ಷಗಳ ಪೈಕಿ ಮೊದಲಿಗರಾಗಿ ಪ್ರಮಾಣ ವಚನ ಸ್ವೀಕರಿಸಿದ ಹಿರಿಮೆ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಸಂದಿದೆ. ಬಿಜೆಪಿಯ 8 ಮಂದಿ ಹಿರಿಯರು ಪ್ರಮಾಣ ವಚನ ಸ್ವೀಕರಿಸಿದ ನಂತರ ಒಂಭತ್ತನೆಯವರಾಗಿ ಕುಮಾರಸ್ವಾಮಿ ಬಿಳಿ ಪಂಚೆ, ಬಿಳಿ ಶರ್ಟ್ ಧರಿಸಿ ಪ್ರಮಾಣ ವಚನ ಸ್ವೀಕರಿಸಲು ವೇದಿಕೆಗೆ ಬರುತ್ತಿದ್ದಂತೆಯೇ ಕರ್ನಾಟಕದಿಂದ ಆಗಮಿಸಿದ್ದ ಅವರ ಬೆಂಬಲಿಗರು ಜಯಕಾರ ಕೂಗುವ ಮೂಲಕ ಹರ್ಷ ವ್ಯಕ್ತಪಡಿಸಿದರು.

ರಾಜ್ಯದಿಂದ ಕೇಂದ್ರ ಸಚಿವರಾದವರನ್ನು ಮೊದಲಿಗರಾಗಿ ಪ್ರಮಾಣ ವಚನ ಸ್ವೀಕರಿಸಿದ್ದು, ನಿರ್ಮಲಾ ಸೀತಾರಾಮನ್. ಇವರು ತಮಿಳುನಾಡಿನವರಾದರೂ, ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ. ಇಂದು ಅವರು 6ನೆಯವರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಪ್ರಧಾನಿ ಮೋದಿಯವರ ಸಂಪುಟದಲ್ಲಿ 3ನೇ ಬಾರಿಗೆ ಸ್ಥಾನ ಪಡೆಯುತ್ತಿರುವ ಇವರು, 2014ರಲ್ಲಿ ರಕ್ಷಣಾ ಖಾತೆ ಮತ್ತು 2019ರಲ್ಲಿ ವಿತ್ತ ಖಾತೆ ಹೊಂದಿದ್ದರು.

ಧಾರವಾಡ ಲೋಕಸಭಾ ಕ್ಷೇತ್ರದಿಂದ ಸತತ 5 ಬಾರಿ ಗೆಲುವು ಸಾಧಿಸಿರುವ ಪ್ರಹ್ಲಾದ್ ಜೋಷಿ ಇಂದು ಮೋದಿ ಸಂಪುಟದಲ್ಲಿ ಎರಡನೇ ಬಾರಿಗೆ ಕೇಂದ್ರ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. 17ನೆಯವರಾಗಿ ಪ್ರಮಾಣ ವಚನ ಸ್ವೀಕರಿಸಿದ ಇವರು, 2019ರಲ್ಲಿ ಕಲ್ಲಿದ್ದಲು ಗಣಿಗಾರಿಕೆ ಮತ್ತು ಸಂಸದೀಯ ವ್ಯವಹಾರಗಳ ಸಚಿವರಾಗಿದ್ದರು. ಬೆಂಗಳೂರು ಉತ್ತರ ಕ್ಷೇತ್ರದಿಂದ ಆಯ್ಕೆಯಾಗಿರುವ ● 10ನೇ ಪುಟಕ್ಕೆ


ಮೋದಿಯವರ ಅಭಿನಂದಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ



ಬೆಂಗಳೂರು, ಜೂ.9– ಮೂರನೇ ಬಾರಿಗೆ ದೇಶದ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ನರೇಂದ್ರ ಮೋದಿ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದಿಸಿದ್ದಾರೆ. ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಬರೆದುಕೊಂಡಿರುವ ಸಿಎಂ ಸಿದ್ದರಾಮಯ್ಯ ಅವರು, ಕರುನಾಡಿನ ಅಭಿವೃದ್ಧಿಯ ನಮ್ಮ ಸಂಕಲ್ಪಕ್ಕೆ ನಿಮ್ಮ ಸಹಕಾರ ಇರಲಿದೆ. ಒಕ್ಕೂಟ ವ್ಯವಸ್ಥೆಯ ಆಶಯಗಳನ್ನು ಎತ್ತಿ ಹಿಡಿಯುತ್ತಾ ರಾಜ್ಯಗಳ ಹಿತಾಸಕ್ತಿಯನ್ನು ನೀವು ಗೌರವಿಸುತ್ತೀರೆಂದು ಭಾವಿಸಿದ್ದೇನೆ. ಸಂಪದ್ಭರಿತ ಕರ್ನಾಟಕದ ಮೂಲಕ ಸದೃಢ ಭಾರತ ನಿರ್ಮಾಣಕ್ಕಾಗಿ ನಿಮ್ಮ ಜೊತೆಯಾಗಿ ಶ್ರಮಿಸುವ ದಿನಗಳನ್ನು ಎದುರು ನೋಡುತ್ತಿದ್ದೇನೆ ಎಂದು ಹೇಳಿದ್ದಾರೆ.

ವಿಡಿಯೋ ಬ್ಲಾಕ್‌ಮೇಲ್: ಮಹದೇಶ್ವರ ಬೆಟ್ಟದಲ್ಲಿ ಚಂದಗಾಲು ಗ್ರಾಮದ ನಾಲ್ವರು ಅಮಾಯಕರು ಆತ್ಮಹತ್ಯೆ ಯತ್ನ ಪ್ರಕರಣ

ಕೊನೆಗೂ ಆರೋಪಿ ಲೋಕೇಶ್ ಬಂಧನ





ಕೆ.ಆರ್.ನಗರ, ಜೂ.9– ಪ್ರೀತಿಸುವುದಾಗಿ ನಂಬಿಸಿ ಅಪ್ರಾಪ್ತ ಬಾಲಕಿಯ ಖಾಸಗಿ ವಿಡಿಯೋ ಮಾಡಿಕೊಂಡು ಬಾಲಕಿಯ ಕುಟುಂಬಕ್ಕೆ ಬೆದರಿಕೆ ಹಾಕಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಚೋದನೆ ನೀಡಿದ ಆರೋಪದ ಮೇರೆಗೆ ಚೀರನಹಳ್ಳಿ ಗ್ರಾಮದ ಲೋಕೇಶ್ ಎಂಬಾತನನ್ನು ಕೆ.ಆರ್.ನಗರ ಪೊಲೀಸರು ಬಂಧಿಸಿದ್ದಾರೆ.

ಶನಿವಾರ ಬೆಳಗ್ಗೆ ತಾಲೂಕಿನ ಚಂದಗಾಲು ಗ್ರಾಮದ ಮಹದೇವನಾಯಕನ ಕುಟುಂಬದ ನಾಲ್ವರು ಮಹದೇಶ್ವರ ಬೆಟ್ಟದ ತಾಳಬೆಟ್ಟದ ಬಳಿ ಆತ್ಮಹತ್ಯೆಗೆ ಯತ್ನಿಸಿದ್ದರು. ಈ ವೇಳೆ ಮಹದೇವನಾಯಕ ಮೃತಪಟ್ಟು, ಪತ್ನಿ ಗೌರಮ್ಮ, ಪುತ್ರಿ ಲೀಲಾವತಿ ಹಾಗೂ ಅಪ್ರಾಪ್ತ ಬಾಲಕಿ ಆಸ್ಪತ್ರೆಗೆ ದಾಖಲಾದ ಹಿನ್ನೆಲೆಯಲ್ಲಿ ಲೋಕೇಶ್ ವಿರುದ್ಧ ಪ್ರಕರಣ ದಾಖಲಾಗಿತ್ತು. ಜೊತೆಗೆ ಕೆ.ಆರ್.ನಗರ ಪೊಲೀಸ್ ಠಾಣೆ ಎದುರು ಪ್ರತಿಭಟನೆ ನಡೆಸಿದ್ದ ಚಂದಗಾಲು ಗ್ರಾಮಸ್ಥರು 24 ಗಂಟೆಯೊಳಗೆ ಲೋಕೇಶನನ್ನು ಬಂಧಿಸದಿದ್ದರೆ ಉಗ್ರ ಹೋರಾಟ ● 10ನೇ ಪುಟಕ್ಕೆ

ಕೆ.ಆರ್.ನಗರ ಠಾಣೆ ಇನ್ಸ್‌ಪೆಕ್ಟರ್ ಸಂತೋಷ್ ಸೇರಿ ಮೂವರ ಅಮಾನತು

ಕೆ.ಆರ್.ನಗರ, ಜೂ.9– ತಾಲೂಕಿನ ಚಂದಗಾಲು ಗ್ರಾಮದ ಒಂದೇ ಕುಟುಂಬದ ನಾಲ್ವರು ಆತ್ಮಹತ್ಯೆಗೆ ಯತ್ನಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯಲೋಪ ಆರೋಪದಡಿ ಕೆ.ಆರ್.ನಗರ ಸರ್ಕಲ್ ಇನ್ಸ್‌ಪೆಕ್ಟರ್ ಪಿ.ಪಿ.ಸಂತೋಷ್, ಎಎಸ್‌ಐ ಗಿರೀಶ್ ಮತ್ತು ಮುಖ್ಯ ಪೇದೆ ರಾಘವೇಂದ್ರ ಅವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ.


ಸಿಪಿಐ ಸಂತೋಷ್


ಎಎಸ್‌ಐ ಗಿರೀಶ್

ತಾಲೂಕಿನ ಚಂದಗಾಲು ಗ್ರಾಮದ ಮಹದೇವನಾಯಕ ಮತ್ತು ಆತನ ಕುಟುಂಬದ ಸದಸ್ಯರಿಗೆ ಚೀರನಹಳ್ಳಿ ಗ್ರಾಮದ ಲೋಕೇಶ್ ಎಂಬಾತ ಕಿರುಕುಳ ನೀಡುತ್ತಿದ್ದ ಸಂಬಂಧ ಜೂ.1 ರಂದು ಠಾಣೆಗೆ ದೂರು ನೀಡಲು ಬಂದಾಗ ದೂರು ಸ್ವೀಕರಿಸಲಿಲ್ಲ ಪೊಲೀಸರಿಂದಲೂ ನ್ಯಾಯ ಸಿಗದೆ ● 10ನೇ ಪುಟಕ್ಕೆ

ಮೈಸೂರಿನಲ್ಲಿ ಅದ್ದೂರಿ ಬಸವ ಜಯಂತಿ ಆಚರಣೆ

ರಾಜ್ಯದಲ್ಲಿ ಲಿಂಗಾಯಿತ ಉಪ ಪಂಗಡಗಳು ಒಂದಾಗಬೇಕು

- ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ್ ಕರೆ
- ಸಮುದಾಯ ಮೀಸಲಾತಿ ಪಡೆಯಲೂ ಸಂಘಟನೆ ಅನಿವಾರ್ಯ

ಮೈಸೂರು, ಜೂ.9(ಬಿಎಲ್‌ಯು)– ಉತ್ತರ ಹಾಗೂ ದಕ್ಷಿಣ ಕರ್ನಾಟಕದ ಲಿಂಗಾಯಿತ ಸಮುದಾಯದ ಎಲ್ಲಾ ಉಪ ಪಂಗಡಗಳು ಒಂದಾಗಿ ಶಕ್ತಿ ವೃದ್ಧಿಸಿಕೊಳ್ಳಬೇಕು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಕರೆ ನೀಡಿದ್ದಾರೆ.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಇಂದು ಅಖಿಲ ಭಾರತ ವೀರಶೈವ–ಲಿಂಗಾಯಿತ ಮಹಾಸಭಾ, ವೀರಶೈವ–ಲಿಂಗಾಯಿತ ಸಂಘ ಸಂಸ್ಥೆ ಹಾಗೂ ಬಸವ ಬಳಗಗಳ ಒಕ್ಕೂಟ ಸಂಯುಕ್ತವಾಗಿ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈ ಮೂಲಕ ನಾವೆಲ್ಲಾ ಒಂದು ಗೂಡಿ ಬಸವಣ್ಣನವರ ತತ್ವ–ಸಿದ್ಧಾಂತದ ಪರಿಕಲ್ಪನೆಯಲ್ಲಿ ಸಾಗಬೇಕು ಎಂದು ಸಲಹೆ ನೀಡಿದರು.

ಲಿಂಗಾಯಿತ ಸಮಾಜದ ಎಲ್ಲಾ ಉಪ ಪಂಗಡ ಒಂದುಗೂಡಲು ವೀರಶೈವ ಮಹಾಸಭಾ ಸ್ಥಾಪನೆ ಮಾಡಲಾಯಿತು. ಇದು ಲಿಂಗಾಯಿತ ಸಮುದಾಯದವರು ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ಸಂಘಟಿತರಾಗಲು ಹಲವು ಚಟುವಟಿಕೆಗಳನ್ನು ನಡೆಸುತ್ತಿದೆ. ಈಗ ಉತ್ತರ ಹಾಗೂ ದಕ್ಷಿಣ ಕರ್ನಾಟಕದ ಎಲ್ಲಾ ಉಪ ಪಂಗಡಗಳು ಸಂಘಟಿತರಾಗಬೇಕು. ಈ ಮೂಲಕ ನಮ್ಮ ಧ್ಯೇಯೋದ್ದೇಶ ಈಡೇರಬೇಕು ಎಂದರು.

ವೀರಶೈವ ಸಮುದಾಯಕ್ಕೆ ಮೀಸಲಾತಿ ಬೇಕೆಂದು ಬಹಳಷ್ಟು ಜನರ ಆಗ್ರಹವಿದೆ. ಇದು ರಾಜ್ಯ ಹಾಗೂ ಕೇಂದ್ರ ಮಟ್ಟದಲ್ಲಿ ಆಗಬೇಕಿದೆ. ಈ ಹಿನ್ನೆಲೆಯಲ್ಲಿ ಎಲ್ಲರೂ ಸಂಘಟಿತರಾಗಬೇಕು ಎಂದು ಎಂ.ಬಿ. ಪಾಟೀಲ್ ಹೇಳಿದರು. ಇಂದು ಬಸವಣ್ಣನವರ ಅನುಭವ ಮಂಟಪದ ಪರಿಕಲ್ಪನೆಯಲ್ಲಿ ಬಹಳಷ್ಟು ಮಠಗಳು ಕೆಲಸ ಮಾಡುತ್ತಿವೆ. ಹಸಿದವರಿಗೆ ಊಟ ಹಾಕುವುದು ಮಾತ್ರವಲ್ಲದೆ ಶಿಕ್ಷಣ ಕೂಡ ನೀಡುತ್ತಿವೆ. ಮಠಗಳು ತ್ರಿವಿಧ ದಾಸೋಹದ ಮೂಲಕ ರಾಜ್ಯಕ್ಕೆ ಶಕ್ತಿ ನೀಡಿವೆ ಎಂದು ಅಭಿಪ್ರಾಯಪಟ್ಟರು.

ಸಂಘಟನೆ ಮೂಲಕ ನಮ್ಮ ಜಾತಿ ಪ್ರೀತಿಸಬೇಕು. ಜೊತೆಗೆ ಇತರೆ ಸಮುದಾಯದ ಬಗ್ಗೆ ಗೌರವ ಭಾವನೆ ಹೊಂದಬೇಕು. ಇದರಿಂದ ಸಮ ಸಮಾಜದ ಪರಿಕಲ್ಪನೆಯ ಮನೋಭಾವ ಬೆಳೆಸಿಕೊಳ್ಳಬೇಕು. ಈ ಮೂಲಕ ಹಿನ್ನಡೆಯಾಗಿರುವ ಅನುಭವ ಮಂಟಪದ ಚಟುವಟಿಕೆಗಳಿಗೆ ಮುನ್ನಡೆ ನೀಡಬೇಕು ಎಂದು ಎಂ.ಬಿ.ಪಾಟೀಲ್ ಹೇಳಿದರು.

12ನೇ ಶತಮಾನದಲ್ಲಿ ಜಾತ್ಯಾತೀತ ಸಮಾಜ ನಿರ್ಮಾಣಕ್ಕೆ ಬಸವಣ್ಣ ಸ್ಥಾಪನೆ ಮಾಡಿದ ಅನುಭವ ● 10ನೇ ಪುಟಕ್ಕೆ



ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಭಾನುವಾರ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀಗಳು, ಸಚಿವ ಎಂ.ಬಿ. ಪಾಟೀಲ್ ಇತರರು ಬಸವಣ್ಣನವರ ಪುತ್ಥಳಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಸಮಾರಂಭಕ್ಕೆ ಚಾಲನೆ ದೊರೆಯಿತು.

ಜನಿವಾರ ಮೇಲ್ಜಾತಿಗೆ ಎಂಬ ಪರಿಸ್ಥಿತಿಯಲ್ಲಿ ಬಸವಣ್ಣ ಲಿಂಗದೀಕ್ಷೆ ನೀಡಿದರು

ಜನಿವಾರ ಹಾಕುವುದು ಮೇಲ್ಜಾತಿಯವರಿಗೆ ಮಾತ್ರ ಸೀಮಿತ ಎಂಬ ಪರಿಸ್ಥಿತಿ ಇದ್ದ ಸಂದರ್ಭದಲ್ಲಿ ಬಸವಣ್ಣನವರು ಎಲ್ಲಾ ಸಮುದಾಯದವರಿಗೆ ಲಿಂಗ ದೀಕ್ಷೆ ನೀಡಿದರು ಎಂದು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಹೇಳಿದರು.

ಅನುಭವ ಮಂಟಪದ ಮೂಲಕ ವಿಶ್ವದ ಮೊದಲ ಸಂಸತ್ ಪರಿಕಲ್ಪನೆ ತಂದ ಬಸವಣ್ಣನವರು ಮಹಿಳೆಯರಿಗೂ ಕೂಡ ಮೀಸಲಾತಿ ನೀಡಿದರು. ಸಮಾನತೆ ಸಮಾಜ ನಿರ್ಮಾಣಕ್ಕೆ ಪ್ರಯತ್ನಿಸಿದ ಬಸವಣ್ಣನವರನ್ನು ಇಂದಿಗೂ ಕೂಡ ನಾವೆಲ್ಲಾ ನೆನಪು ಮಾಡಿಕೊಳ್ಳುತ್ತಿದ್ದೇವೆ ಎಂದರು. 800 ವರ್ಷದ ಹಿಂದೆ ಸಾಮಾಜಿಕ ಕ್ರಾಂತಿ ಮಾಡಿದ ಬಸವಣ್ಣನವರು ಜಡ್ಡುಗಟ್ಟಿದ ವ್ಯವಸ್ಥೆಗೆ ಚಲನಶೀಲತೆ ನೀಡಿದರು. ವಚನ ಕ್ರಾಂತಿ ಮೂಲಕ ಸಾಹಿತ್ಯದ ಶಕ್ತಿ ಹೆಚ್ಚಿಸಿದರು ಎಂದು ಹೇಳಿದರು. ಒಂದು ದಿನಕ್ಕೆ ಸೀಮಿತವಾಗಿ ಬಸವ ಜಯಂತಿ ಮಾಡಿದರೆ ಸಾಲದು, ಬಸವಣ್ಣನವರ ತತ್ವಾದರ್ಶಗಳನ್ನು ಪ್ರತಿದಿನ ಪಾಲಿಸಬೇಕು. ಇದರಿಂದ ಸಮಾಜದಲ್ಲಿ ಶಾಂತಿ, ನೆಮ್ಮದಿ ನೆಲೆಸುತ್ತದೆ. ನಮಗೂ ಕೂಡ ಗೌರವ ಬರುತ್ತದೆ ಎಂದು ಡಾ.ಯತೀಂದ್ರ ಹೇಳಿದರು.

ನಕ್ಕರೆ ಅದೇ ಸ್ವರ್ಗ

ಗಂಡ : ಏನೇ ನಾನು ಎರಡು ನಿಮಿಷದಲ್ಲಿ ರೆಡಿ ಆಗಿದ್ದೀನಿ. ನೀನಿನ್ನೂ ರೆಡಿ ಆಗಿಲ್ವಾ?

ಹೆಂಡತಿ : ಮ್ಯಾಗಿ ರೆಡಿ ಆಗೋದಕ್ಕೂ, ಬಿರಿಯಾನಿ ರೆಡಿ ಆಗೋದಕ್ಕೂ ವ್ಯತ್ಯಾಸ ಇದೆ ತಾನೆ ಸ್ವಲ್ಪ ಕಾಯಿರಿ...

ಮೈಸೂರು ಮಿತ್ರ

ಸೋಮವಾರ, 10 ಜೂನ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಎಷ್ಟು ಗಟ್ಟಿ ಮನುಷ್ಯನೇ ಇರಲಿ, ಹೊಗಳಿಕೆಗೆ ಕಿವಿಗೊಟ್ಟನೆಂದರೆ ಬಲೆಗೆ ಬೀಳುತ್ತಾನೆ' –ಡಾ.ಶಿವರಾಮ ಕಾರಂತ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಕಜ್ಜಿ ಹೋದರೂ ಕಡಿತ ಹೋಗಲಿಲ್ಲ'

ನಿಮ್ಮ ಪತ್ರಗಳು

■ ಕುಲಕಾಟ, ಅಲುಗಾಟ, ವದರಾಟದ ಕಾವೇರಿ ಎಕ್ಸ್‌ಪ್ರೆಸ್

ಮಾನ್ಯರೆ,



ನಾನು, ದಿನಾಂಕ: 22–05–2024ರಂದು ಚೆನ್ನೈನ ಎಂ.ಜಿ.ಆರ್. ಸೆಂಟ್ರಲ್ ಸ್ಟೇಷನ್‌ನಿಂದ ಮೈಸೂರು ನಗರಕ್ಕೆ ಕಾವೇರಿ ಎಕ್ಸ್‌ಪ್ರೆಸ್‌ನ ಎಸ್–13 ಕೋಚಿನ ಎಲ್‌ಬಿ–52ರ ಸ್ಲೀಪರ್‌ನಲ್ಲಿ ಪ್ರಯಾಣ ಬೆಳೆಸಿದೆ. ಅಂದು ರಾತ್ರಿ 9.20ಕ್ಕೆ ಹೊರಟು 23–05–2024ರ ಬೆಳಗಿನ 7:45ಕ್ಕೆ ಮೈಸೂರು ನಗರವನ್ನು ತಲುಪಿತು. ರೈಲು ಚೆನ್ನೈನಿಂದ ಹೊರಟಾಗಿನಿಂದ ಮೈಸೂರು ತಲುಪುವವರೆವಿಗೂ ರೈಲಿನಲ್ಲಾದ ಅನುಭವ ವರ್ಣಿಸಲಸಾಧ್ಯ...! ಸುಮಾರು 500 ಕಿ.ಮೀ.ನ ರಾತ್ರಿಯ ಪ್ರಯಾಣದಲ್ಲಿ ಎಲ್ಲೂ ಸಹ ನೆಮ್ಮದಿಯಿಂದ ಮಲಗಲು ಸಾಧ್ಯವಾಗಲಿಲ್ಲ. ಕಾರಣ, ರೈಲು ಮಾರ್ಗ ದುದ್ದಕ್ಕೂ ವಿಪರೀತ ಕುಲುಕಾಟ ಹಾಗೂ ಅಲುಗಾಟಗಳ ಪದೇ ಪದೆ ಅನುಭವಕ್ಕೆ ಬರು ತ್ತಿತ್ತು. ಇದರ ಮಧ್ಯ ಸುಮಾರು ಕಿಮೀಗಳ ಪ್ರಯಾಣ ವಿಪರೀತ ವದರಾಟ ದಿಂದಾಗಿ ಹೊಟ್ಟೆಗೆ ಕುಲುಕಾಟದ ವ್ಯಾಯಾಮ ತಾನಾಗಿಯೇ ದೊರೆಯುತ್ತಿತ್ತು. ಇದರ ಜೊತೆ ಜೊತೆಯಲ್ಲಿಯೇ ರೈಲು ನಿಲ್ದಾಣಗಳಲ್ಲಿ ನಿಲ್ಲುವಾಗ ಹಾಗೂ ಹೊರಡುವಾಗ ಆಗುತ್ತಿದ್ದ (Jerkings) ಥಟ್ಟನೆಯ ಎಳೆತದಿಂದಾಗಿ ಇಡೀ ಬೋಗಿಯೇ ಸಂಪೂರ್ಣ ಅಲುಗಾಡುತ್ತಿತ್ತು. ಹಾಗೂ ಮಲಗಿದ್ದವರನ್ನೆಲ್ಲಾ ಪ್ರತಿಯೊಂದು ನಿಲ್ದಾಣದಲ್ಲಿ ಎಬ್ಬಿಸಿಬಿಡುತ್ತಿತ್ತು. ಬಹುಶಃ ನನ್ನ ಈ ಅನುಭವವು ಎಸ್–13 ಬೋಗಿಗೆ ಮಾತ್ರ ಸೀಮಿತವಾಗಿತ್ತೋ ಅಥವಾ ಎಲ್ಲಾ ಬೋಗಿಗಳಿಗೂ ಇದೇ ಅನುಭವ ಪ್ರಯಾಣಿಕರಿಗಾಗಿದೆಯೋ ತಿಳಿದಿಲ್ಲ. ನಾನು ದೆಹಲಿಗೆ ಕರ್ನಾಟಕ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್‌ನಲ್ಲೂ ಹಾಗೂ ಹೈದ್ರಾಬಾದ್‌ಗೆ ಮೈಸೂರು–ಕಾಚಿಗೋಡ ಎಕ್ಸ್‌ಪ್ರೆಸ್ ರೈಲಿನಲ್ಲಿ ರಾತ್ರಿಯ ವೇಳೆ ಅನೇಕ ಬಾರಿ ಪ್ರಯಾಣಿಸಿದ್ದೇನೆ. ಆದರೆ, ಎಲ್ಲೂ ಸಹ, ಈ ರೀತಿಯ ಅನುಭವವಾಗಿರಲಿಲ್ಲ. ಒಟ್ಟಿನಲ್ಲಿ ಈ ರೈಲಿನಲ್ಲಿ ಪ್ರಯಾಣಿಸಿದ ಫಲವಾಗಿ ನನ್ನ ಮಗಳು ರಾತ್ರಿಯ ಬುತ್ತಿಗೆ (ಊಟಕ್ಕೆ) ಮಾಡಿ ಕೊಟ್ಟಿದ್ದ ಅವಲಕ್ಕಿ ಪೊಂಗಲ್ ಸಂಪೂರ್ಣ ಜೀರ್ಣವಾಗಿ ಮೈಸೂರಿನಲ್ಲಿ ಮನೆ ತಲುಪುವ ವೇಳೆಗೆ ಹೊಟ್ಟೆ ಕಾವು ಕಾವು (ವಿಪರೀತ ಹಸಿವು) ಎಂದೆನಿಸಿತು.

–ಎಸ್.ಹರೀಶ್ ಕಶ್ಯಪ್, ನೊಂದ ರೈಲು ಪ್ರಯಾಣಿಕ, ವಿದ್ಯಾರಣ್ಯಪುರಂ.

■ ಉತ್ತರ ಪ್ರದೇಶದಲ್ಲಿ ಹೊಸ ದಲಿತ ನಾಯಕನ ಉದಯ!

ಮಾನ್ಯರೆ,

2024ರ ಲೋಕಸಭಾ ಚುನಾವಣೆಯ ಫಲಿತಾಂಶ ಹೊರಬಿದ್ದಿದ್ದು, ಯಾರಿಗೂ



ಸಂಪೂರ್ಣ ಬೆಂಬಲ ನೀಡದೆ ಒಂದರ್ಥದಲ್ಲಿ ರಾಜಕೀಯ ಪಕ್ಷಗಳು ಮುಟ್ಟಿ ನೋಡಿಕೊಳ್ಳುವ ತೀರ್ಮಾನವನ್ನು ದೇಶದ ಜನತೆ ಕೊಟ್ಟಿದ್ದಾರೆ. ಇದರ ನಡುವೆ ಉತ್ತರ ಪ್ರದೇಶದ ನಾಗಿನ ಮೀಸಲು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ಭೀಮ್ ಆರ್ಮಿ ಸಂಘಟನೆ ಸಂಸ್ಥಾಪಕ ಚಂದ್ರಶೇಖರ್ ಅಝಾದ್ ರಾವಣ್ ಅವರು ಭಾರಿ ಅಂತರದಿಂದ ಗೆಲುವು ದಾಖಲಿಸಿದ್ದಾರೆ. ಈ ಮೂಲಕ ಉತ್ತರಪ್ರದೇಶದಲ್ಲಿ ಹೊಸ ದಲಿತ ನಾಯಕನ ಉದಯವಾಗಿದೆ. ಇದು ಅನಿವಾರ್ಯವೂ ಸಹ ಆಗಿತ್ತು.

ಚಂದ್ರಶೇಖರ್ ಅಝಾದ್ ರಾವಣ್ ಯಾವುದೋ ರಾಜಕೀಯದ ಕುಟುಂಬದಿಂದ ಬಂದವರಲ್ಲ. ಹಾಗೆಯೇ ಏಕಾಏಕಿ ನಾಯಕನಾಗಿ ಸೃಷ್ಟಿಗೊಂಡವರೂ ಅಲ್ಲ. ಉತ್ತರ ಪ್ರದೇಶದಲ್ಲಿ ದಲಿತರ ಮೇಲೆ ನಿರಂತರವಾಗಿ ನಡೆಯುತ್ತಿದ್ದ ದೌರ್ಜನ್ಯ, ದಬ್ಬಾಳಿಕೆಗಳ ವಿರುದ್ಧ ಸಿಡಿದೆದ್ದು ನಿಂತು ಕ್ರಾಂತಿಕಾರಿ ಹೋರಾಟ ರೂಪಿಸಿದಾತ. 2014 ರಲ್ಲಿ ಭೀಮ್ ಆರ್ಮಿ ಸಂಘಟನೆ ಕಟ್ಟಿದ ಚಂದ್ರಶೇಖರ್ ಅಝಾದ್ ರಾವಣ್ ಉತ್ತರ ಪ್ರದೇಶ ರಾಜ್ಯಾದ್ಯಂತ ದಲಿತ ಸಮುದಾಯ ಪರ ಗಟ್ಟಿ ಧ್ವನಿಯಾಗಿ ನಿಂತವರು. ಈ ಕಾರಣಕ್ಕಾಗಿಯೇ ಸ್ಥಳೀಯ ಸರ್ಕಾರ ಇವರನ್ನು ಜೈಲಿಗಟ್ಟಿ, ಅನ್ನ, ನೀರು ಕೊಡದೆ, ಹೀನಾಯವಾಗಿ ನಡೆಸಿಕೊಂಡಿತ್ತು. ಈ ಸಂದರ್ಭದಲ್ಲಿ ಈತನಿಗೆ ಆರೋಗ್ಯವೂ ಸಹ ತುಂಬಾ ಹದಗೆಟ್ಟಿತ್ತು. ಈತನನ್ನು ಅದೆಷ್ಟೋ ಬಾರಿ ಜೈಲಿಗಟ್ಟಿದರೂ ಸಹ ಈತನ ಧ್ವನಿ ಅಡಗಿಸಲಾಗಲಿಲ್ಲ. 2020ರಲ್ಲಿ ಅಝಾದ್ ಸಮಾಜ ಪಾರ್ಟಿ (ಕಾನ್ಸಿರಾಂ) ಎಂಬ ಸ್ವಂತ ಪಕ್ಷ ಕಟ್ಟಿಕೊಂಡು ದಲಿತ ಸಮುದಾಯದ ಪರ ಹೋರಾಟದ ಬಂಡೆಯಂತೆ ನಿಂತು ಇಂದು ಅದರ ಮೂಲಕವೇ ಗೆಲುವು ಸಾಧಿಸಿರುವ ಚಂದ್ರಶೇಖರ್ ಅಝಾದ್ ರಾವಣ್ ಮುಂದಿನ ದಿನಗಳಲ್ಲಿ ದೇಶದ ಶೋಷಿತ ಸಮುದಾಯಗಳ ಪರ ಸಂಸತ್ತಿನಲ್ಲಿ ಜೋರು ಧ್ವನಿ ಮಾಡಲಿ ಎಂಬುವುದೇ ನಮ್ಮೆಲ್ಲರ ಆಶಯ.

–ಪ್ರಜ್ವಲ್ ಶಶಿ, ತಗಡೂರು, ನಂಜನಗೂಡು ತಾಲೂಕು.

■ ಚಾ.ಬೆಟ್ಟ ಆಡಳಿತದ ಅವ್ಯವಸ್ಥೆ ಕೇಳುವವರಾರು?

ಮಾನ್ಯರೆ,


ಚಾಮುಂಡಿಬೆಟ್ಟದಲ್ಲಿ ದುಡ್ಡಿಗೆ ಕೊಡುವ ಪ್ರಾಮುಖ್ಯತೆ ದೇವಸ್ಥಾನದ ಆಡಳಿತ ನಿರ್ವಹಣೆಯ ಬಗ್ಗೆ ಅಸಡ್ಡೆ ಯಾಕೆ? ಸರತಿ ಸಾಲಿನಲ್ಲಿ ದೇವರ ದರ್ಶನ ದರ 30, 100 ರೂ. ಟಿಕೆಟ್ ನಿಗದಿಪಡಿಸಲಾಗಿದೆ. ಆದರೆ ಇಲ್ಲಿನ ಅರ್ಚಕರು, ಪೋಲಿಸರು ಹಾಗೂ ದೇವಸ್ಥಾನದ ಸಿಬ್ಬಂದಿಗಳಾದಿಯಾಗಿ ಅವರ ಸ್ನೇಹಿತರಿಗೆ, ಸಂಬಂಧಿಕರಿಗೆ ನೇರವಾಗಿ ದರ್ಶನಕ್ಕೆ ಅವಕಾಶ ಕಲ್ಪಿಸುತ್ತಾರೆ. ಅಲ್ಲದೆ 50, 100 ರೂ. ಭಕ್ತರಿಂದ ಪಡೆದು ಒಳಗೆ ಬಿಡುತ್ತಾರೆ. ಈ ರೀತಿ ಮಧ್ಯೆ ನುಸುಳಿ ಬರುವವರಿಂದ ಸರತಿ ಸಾಲಿನಲ್ಲಿ ನಿಂತಿರುವವರ ಪಾಡು ಹೇಳ ತೀರದು. ಕೆಲವೊಮ್ಮೆ ಇದೇ ವಿಚಾರಕ್ಕಾಗಿ ಗಲಾಟೆಯಾಗುವುದು ಉಂಟು. ಇನ್ನು ಮುಂದಾದರೂ ಆಡಳಿತ ಮಂಡಳಿಯವರು ಸರತಿ ಸಾಲಿನಲ್ಲಿ ಹೋಗಿ ದೇವರ ದರ್ಶನ ಪಡೆಯುವ ಭಕ್ತಾದಿಗಳಿಗೆ ತೊಂದರೆಯಾಗದಂತೆ ಕ್ರಮವಹಿಸುವರೆ. **–ಸತೀಶ್, ಮೈಸೂರು.**



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಬೆರಗು

ಚಲಾವಣೆಯಲ್ಲಿದ್ದರೆ ಮಾತ್ರ ಸಮಾಜದಲ್ಲಿ ಮನ್ನಣೆ!



> ಬದಲಾವಣೆ ಜಗದ ನಿಯಮ. ಆದರೆ ಅದು ಮನುಷ್ಯನ ಬಾಂಧವ್ಯಕ್ಕೂ ಅನ್ವಯವಾಗುತ್ತಿರುವುದು ಮಾತ್ರ ವಿಷಾದನೀಯ ಸಂಗತಿ. ಇಂದು ಮೌಲ್ಯಾಧಾರಿತ ಶಿಕ್ಷಣ ನೀಡುತ್ತಿರುವುದಾಗಿ ಸರ್ಕಾರ, ಶಿಕ್ಷಣ ಸಂಸ್ಥೆಗಳು ಘೋಷಿಸುತ್ತಿವೆ. ಆದರೆ ಶಿಕ್ಷಣದ ಗುಣಮಟ್ಟವು ಸಮಾಜದಲ್ಲಿ ಆಗುತ್ತಿರುವ ಸುಧಾರಣೆಗಳಲ್ಲಿ ಗೋಚರಿಸಬೇಕು. ಆದರೆ ಶಿಕ್ಷಣಕ್ಕೂ, ಸಾಮಾಜಿಕ ವ್ಯವಸ್ಥೆಗೂ ಸಂಬಂಧವೇ ಇಲ್ಲದಂತಹ ಘಟನೆಗಳು ನಡೆಯುತ್ತಿವೆ. ಅತ್ಯಂತ ಹೆಚ್ಚು ಶಿಕ್ಷಣ ಪಡೆದ ಅನೇಕರು ಅಮಾನವೀಯವಾಗಿ ನಡೆದುಕೊಂಡ ಉದಾಹರಣೆಗಳಿವೆ. ಇಳಿವಯಸ್ಸಿನ ಹೆತ್ತವರನ್ನು ಗೌರವಪೂರ್ವಕವಾಗಿ ನಡೆಸಿಕೊಳ್ಳುವುದನ್ನು ಬಿಟ್ಟು, ಅವರ ಸಂಧ್ಯಾಕಾಲದ ಬದುಕನ್ನು ಹೈರಾಣ ಮಾಡಿಸಿ, ಮಕ್ಕಳೇ ಸಿಂಹಸ್ವಪ್ನಗಳಾಗುತ್ತಿರುವುದು ನಾಚಿಕೆಗೇಡಿನ ಸಂಗತಿ. ತಮಗೂ ತಮ್ಮ ಮಕ್ಕಳು ಮುಂದೊಂದು ದಿನ ಇದೇ ರೀತಿ ಕಡೆಗಣಿಸುತ್ತಾರೆ ಎಂದು ತಿಳಿದಿದ್ದರೂ ಹೆತ್ತವರನ್ನು ದೂರ ಮಾಡುತ್ತಿರುವುದು ಈ ಶತಮಾನದ ಸಾಮಾಜಿಕ ವ್ಯವಸ್ಥೆಯ ಒಂದು ದೊಡ್ಡ ಸೋಲು ಎನ್ನಬಹುದು.

ಅನೇಕ ಮಂದಿ ಮಾಜಿ ಪ್ರಧಾನಮಂತ್ರಿಗಳು, ಮಾಜಿ ರಾಷ್ಟ್ರಪತಿಗಳು, ಅಧಿಕಾರದಲ್ಲಿದ್ದಾಗ ಬಹಳ ಜನಪ್ರಿಯತೆ ಹೊಂದಿದ್ದ ಉನ್ನತ ಹುದ್ದೆಯಲ್ಲಿದ್ದ ಅಧಿಕಾರಿಗಳು, ಮಾಜಿ ಸಚಿವರು, ಹಿರಿಯ ಸಿನೆಮಾ ತಾರೆಯರು, ಖ್ಯಾತ ಸಾಹಿತಿಗಳು, ಇನ್ನಿತರ ಸೆಲೆಬ್ರಿಟಿಗಳ ನಿಧನದ ಸುದ್ದಿ ಮಾಧ್ಯಮಗಳಲ್ಲಿ ಪ್ರಸಾರವಾದಾಗ, ಅನೇಕರು 'ಇವರು ಇನ್ನೂ ಬದುಕಿದ್ದರಾ?, ಅಯ್ಯೋ ನಾನು ಇವರು ಯಾವಾಗಲೋ ತೀರಿಹೋಗಿದ್ದರು ಅಂದುಕೊಂಡಿದ್ದೆ' ಎಂಬ ಉದ್ಗಾರ ತೆಗೆಯುತ್ತಾರೆ. ಅಂದರೆ ಘಟಾನುಘಟಿಗಳಿಗೆ ಅವರು ಅಧಿಕಾರ, ಬೇಡಿಕೆಯಲ್ಲಿದ್ದಾಗ ಸಿಗುತ್ತಿದ್ದ ಮನ್ನಣೆ ಹಾಗೂ ಪ್ರಾಶಸ್ತ್ಯ ಅವರು ವಯಸ್ಸಾದ ಮೇಲೆ ಇಲ್ಲದೇ ಹೋಗುವುದನ್ನು ಗಮನಿಸಬಹುದು. ಅಂದರೆ ಒಂದು ಕಾಲದಲ್ಲಿ ಮೆರೆದವರು ಬದುಕಿದ್ದಾಗಲೇ ಜನಮಾನಸದಿಂದ ಮರೆಯಾಗಿಬಿಡುತ್ತಾರೆ ಎಂದರೆ ಅದಕ್ಕಿಂತ ಮತ್ತೊಂದು ನೋವುಂಟೇ? ಮನುಷ್ಯನ ಬದುಕು ಸಹ ಒಂದು ಕರೆನ್ಸಿ ನೋಟಿನಂತೆ ಆಗಿಬಿಡುತ್ತದೆ ಅಲ್ಲವೇ?

2000 ರೂಪಾಯಿ ಮುಖಬೆಲೆಯ ಕರೆನ್ಸಿಗೆ ಕಳೆದ ವರ್ಷ ಇದ್ದ ಬೆಲೆ ಈಗ ಇಲ್ಲ. ಈಗ ಅದೊಂದು ಕಾಗದದ ಚೂರು ಅಷ್ಟೆ. ಏಕೆಂದರೆ ನೋಟು ಚಲಾವಣೆಯಲ್ಲಿದ್ದಾಗ ಅದಕ್ಕೆ ಸಿಗುತ್ತಿದ್ದ ಬೆಲೆ, ಮನ್ನಣೆ ಒಮ್ಮೊಮ್ಮೆ ಮನುಷ್ಯರಿಗೂ ಸಿಕ್ಕಿರಲಿಕ್ಕಿಲ್ಲ. ಒಮ್ಮೆ ಸರ್ಕಾರ ಅಮಾನ್ಯ ಎಂದು ಘೋಷಿಸಿದಾಕ್ಷಣ ಅದು ಕ್ಷಣ ಮಾತ್ರದಲ್ಲಿ ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತದೆ. ಹಾಗೆ ಮನುಷ್ಯನೂ ಅಷ್ಟೇ ಚಲಾವಣೆಯಲ್ಲಿದ್ದ ಕಾಲಕ್ಕೆ ಮಾತ್ರ ಅವನಿಗೆ ಬೆಲೆ, ಗೌರವ, ಮನ್ನಣೆ ಎಲ್ಲವೂ ಇರುತ್ತದೆ. ಒಮ್ಮೆ ಚಲಾವಣೆಯಿಂದ ಹಿಂದೆ ಸರಿದರೂ ಎಂದರೆ ಬದುಕಿದ್ದರೂ ಸತ್ತ ಹಾಗೆ ಅವರನ್ನು ಕಡೆಗಣಿಸಿಬಿಡುತ್ತಾರೆ. ಅವರ ಉಪಸ್ಥಿತಿ ಹಾಗೂ ಅನುಪಸ್ಥಿತಿ ಎರಡಕ್ಕೂ ಯಾವುದೇ ವ್ಯತ್ಯಾಸವೇ ಇರುವುದಿಲ್ಲ.

ನಾನು ರಚಿಸಿರುವ ಒಂದು ಚೌಪದಿಯಲ್ಲಿನ ಸಾಲುಗಳು ಇಂತಿವೆ. 'ಹಾಲು ಕರೆಯುವವರೆವಿಗೆ ಮಾತ್ರ ಆಕಳಿಗೆ ಆರಾಧನ, ದುಡಿದು ತರುವವರೆಗೆ ಮಾತ್ರ ಅಪ್ಪ ಯಜಮಾನ, ಪ್ರಯೋಜನ ಇದ್ದರೆ ಮಾತ್ರ ಸಮಾಜದಲ್ಲಿ ಸ್ಥಾನಮಾನ ಎಂದ ನಮ್ಮ ಅರಿವಿನ ಅಪ್ರಮೇಯ'. ಇದು ವೈಶ್ಯ ಯುಗ, ಎಲ್ಲವೂ ವ್ಯವಹಾರಿಕ. ಹಣ ಎಷ್ಟೇ ಕೈಬದಲಿಸಿದರೂ, ಎಷ್ಟೇ ಹಳೆಯದಾದರೂ ತನ್ನ ಮೌಲ್ಯವನ್ನು ಕಳೆದುಕೊಳ್ಳುವುದಿಲ್ಲ. ಆದರೆ ಬಹುತೇಕರು ಆರೋಗ್ಯ ಹದಗೆಟ್ಟ ಮೇಲೆ, ವಯಸ್ಸಾದ ಮೇಲೆ, ಅಧಿಕಾರ ಕಳೆದುಕೊಂಡ ಮೇಲೆ, ಬೇಡಿಕೆ ಕಡಿಮೆಯಾದ ಮೇಲೆ ತಮ್ಮ ಮೌಲ್ಯವನ್ನು ಕ್ರಮೇಣ ಕಳೆದುಕೊಳ್ಳುತ್ತಾ ಹೋಗುತ್ತಾರೆ. ವೃದ್ಧಾಶ್ರಮಗಳಲ್ಲಿ ಇರುವ ಹಿರಿಯ ಜೀವಗಳ ಬದುಕಿನ ದಿನಗಳನ್ನೊಮ್ಮೆ ಕೆದಕಿ ನೋಡಿ. ಭವ್ಯ ಹಾಗೂ ದಿವ್ಯ ಇತಿಹಾಸ ಹೊಂದಿರುವ ಅನೇಕರು ವರ್ತಮಾನದಲ್ಲಿ ಮಾತ್ರ ಗುಂಪಿಗೆ ಸೇರದವರಂತಾಗಿ ದಿವ್ಯ ಮೌನಕ್ಕೆ ಶರಣಾಗಿರುತ್ತಾರೆ. ಅವರಿಗೆ ವೃದ್ಧಾಪ್ಯ ಒಂದು ಶಾಪವಾಗಿಯೇ ಪರಿಣಮಿಸಿಬಿಟ್ಟಿರುತ್ತದೆ.

ಹಣ, ಅಧಿಕಾರ, ವಯಸ್ಸು ಇದ್ದಾಗ ಎಲ್ಲದಕ್ಕೂ ಸಹಾಯ ಮಾಡಲು ಕೈಚಾಚುತ್ತಿದ್ದವರು. ತಮ್ಮ ಬ್ಯಾಗನ್ನು ಹಿಡಿದುಕೊಂಡು ಹೋಗುವ ಶಕ್ತಿ ಇದ್ದರೂ, ಅಧಿಕಾರದ ಕಾರಣಕ್ಕೆ ಅದನ್ನು ಅವರಿಂದ ಪಡೆದು ಹಿಡಿದುಕೊಳ್ಳುವವರು ಅನೇಕರು ಬರುತ್ತಾರೆ. ಆದರೆ ಹಣ, ಅಧಿಕಾರ, ವಯಸ್ಸು ಎಲ್ಲವೂ ಕ್ರಮೇಣ ಹೋದ ಮೇಲೆ ಸಹಾಯಕ್ಕೆ ಕೈಚಾಚುತ್ತಿದ್ದವರು ಕೈಕೊಡಲು ಪ್ರಾರಂಭಿಸುತ್ತಾರೆ. ಸಹಾಯಕ್ಕೆ ಬರುತ್ತಿದ್ದವರು ನಿಸ್ಸಹಾಯಕರಾದಾಗ ಜಾಣ್ಮೆಯಿಂದ ದೂರ ಸರಿಯುತ್ತಾರೆ. ಸ್ವಂತ ಶಕ್ತಿ ಇದ್ದಾಗ ಕೈಗೊಂದು, ಕಾಲಿಗೊಂದು ಆಳು ಸಿಗುವುದು ಪುಣ್ಯವಲ್ಲ. ನಿಜವಾದ ಪುಣ್ಯಶಾಲಿಗಳು ಯಾರೆಂದರೆ ಇಳಿವಯಸ್ಸಿನಲ್ಲಿ ಮಕ್ಕಳು ಅಥವಾ ಅವರ ಜಾಗದಲ್ಲಿ ಯಾರಾದರೂ ಒಬ್ಬರು ಊರುಗೋಲಿನಂತೆ ಆಸರೆಗೆ ಸಿಗುವವರು ಮಾತ್ರ.

ಒಂದೆರಡು ಪೀಳಿಗೆಯ ಹಿಂದೆ ಅವಿಭಕ್ತ ಕುಟುಂಬ ವ್ಯವಸ್ಥೆ ಇದ್ದಾಗ. ಅಜ್ಜಿ ತಾತಂದಿರಿಗೆ ಆಸರೆಯಾಗುತ್ತಿದ್ದವರು ಮೊಮ್ಮಕ್ಕಳು. ಇಂದು ಮೊಮ್ಮಕ್ಕಳು ಚಿಕ್ಕ ವಯಸ್ಸಿನಲ್ಲಿ ಮಾತ್ರ ಅಜ್ಜಿತಾತನಿಗೆ ಮುದ್ದಿನ ಮೊಮ್ಮಕ್ಕಳಾಗುತ್ತಾರೆ. ಆದರೆ ಬೆಳೆದಂತೆಲ್ಲಾ ಅವರೂ ಹಿರಿಯ ಜೀವಗಳಿಂದ ದೂರ ಸರಿಯುತ್ತಾರೆ. ಏನಾದರೂ ಆಸ್ತಿ ಸಿಗುತ್ತದೆ ಎಂದು ತಿಳಿದರೆ ಸ್ವಲ್ಪ ಆಸಕ್ತಿ ತೋರುತ್ತಾರೆ. ಇಲ್ಲವಾದಲ್ಲಿ ಅವರ ಸ್ಥಿತಿ ದೇವರಿಗೆ ಪ್ರೀತಿ.

ಇಂದಿನ ಸಮಾಜದಲ್ಲಿ ಶಾಲೆಗಳು ಹೆಚ್ಚಾಗುತ್ತಿರುವುದು ನಾಗರಿಕತೆ ಬೆಳೆಯುತ್ತಿರುವ ಸಂಕೇತ ಎಂದು ಪರಿಗಣಿಸಲಾಗುತ್ತದೆ. ಆದರೆ ವಿಪರ್ಯಾಸದ ಸಂಗತಿ ಏನೆಂದರೆ ಶಾಲೆಗಳ ಸಂಖ್ಯೆ ವೃದ್ಧಿಯಾಗುತ್ತಿರುವಂತೆ ವೃದ್ಧಾಶ್ರಮಗಳು ಹಾಗೂ ಜೈಲುಗಳ ಸಂಖ್ಯೆಯು ಸಹ ಹೆಚ್ಚಾಗುತ್ತಿರುವುದು. ಜೈಲುಗಳಲ್ಲಿ ಘನ ಘೋರ ತಪ್ಪನ್ನು ಮಾಡಿ ಅಪರಾಧಿಗಳು ಎನಿಸಿಕೊಂಡು ಜೈಲಿನಲ್ಲಿ ಪಶ್ಚಾತ್ತಾಪಪಡುತ್ತಾ ದಿನದೂಡುತ್ತಿದ್ದರೆ, ಯಾವ ತಪ್ಪನ್ನೂ ಮಾಡದೆ, ಜೀವಮಾನವಿಡೀ ಮಕ್ಕಳಿಗೆ, ಮೊಮ್ಮಕ್ಕಳಿಗೆ ಎಂದು ಜೀವ ತೇಯ್ದ ವೃದ್ಧ ಜೀವಗಳು ವೃದ್ಧಾಶ್ರಮಗಳೆಂಬ ಬಂಗಾರದ ಪಂಜರದಲ್ಲಿ ಪಶ್ಚಾತ್ತಾಪಪಡುತ್ತಿರುವುದು ಒಂದು ವಿಡಂಬನೆಯೇ ಸರಿ. ತಮ್ಮ ನೋವನ್ನು ಹೇಳಿಕೊಳ್ಳಲು ಸೂಕ್ತ ಜನರು ಸಿಗದೇ ಅಲ್ಲಿರುವ ನಿವಾಸಿಗಳೆಲ್ಲರು ನೋವಿನ ಕಥೆ ಹೇಳುವ ಕಥೆಗಾರರೇ ಆಗಿರುತ್ತಾರೆ. ಅವರ ವ್ಯಥೆ ದೇವರಿಗೆ ಪ್ರೀತಿ.

ಈ ಚಲಾವಣೆ ವಿಚಾರ ಹೆಚ್ಚಾಗಿ ರಾಜಕಾರಣಿಗಳಿಗೆ ಹಾಗೂ ಅಧಿಕಾರಿಗಳಿಗೆ ಅನ್ವಯವಾಗುತ್ತದೆ. ಅಧಿಕಾರ ಇದ್ದಾಗ ಸಿಗುತ್ತಿದ್ದ ಗೌರವ ಅಧಿಕಾರ ಹೋದಾಕ್ಷಣ ಹಾಲು ಕರೆಯುವುದನ್ನು ನಿಲ್ಲಿಸಿದ ಗೋವಿನಂತೆ, ಫಲ ನೀಡುವುದನ್ನು ನಿಲ್ಲಿಸಿದ ಮರದಂತೆ, ನೀರು ಬರಿದಾದ ಬಾವಿಯಂತೆ ಸಮಾಜ ಅವರನ್ನು ಕಡೆಗಣಿಸಲು ಪ್ರಾರಂಭಿಸುತ್ತದೆ. ಎಷ್ಟೋ ಜನರ ಬದುಕಿಗೆ ದಾರಿದೀಪವಾಗಿದ್ದರೂ, ಅವರ ನಿವೃತ್ತಿ ಜೀವನವನ್ನು ಕತ್ತಲೆ ಹಾದಿಯಲ್ಲಿ ಕಳೆದಂತೆ ಭಾಸವಾಗುತ್ತಾ ಹೋಗುತ್ತದೆ. ಹೊರಗಿನವರು ಒಂದು ಕಡೆ ಇರಲಿ, ಮನೆಯವರೇ ಅವರನ್ನು ಒಂದು ಗುಜರಿ ವಸ್ತು ಸಮಾನವಾಗಿ ಕಾಣಲು ಪ್ರಾರಂಭಿಸುತ್ತಾರೆ. ಆಗುವ ಅವಮಾನ ಹಾಗೂ ನೋವನ್ನು ಸಹಿಸಿಕೊಳ್ಳಲು ಆಗದಿದ್ದಾಗ, ದುಃಖದ ಬದುಕಿಗಿಂತ ಸಾವೇ ಸುಖ ಎನಿಸಲು ಪ್ರಾರಂಭಿಸಿದರೂ ಆಶ್ಚರ್ಯ ಪಡಬೇಕಿಲ್ಲ. ಆದರೆ ಸಾವು ಬೇಕೆಂದಾಗ ಬರಲು ಎಲ್ಲರೂ ಇಚ್ಛಾಮರಣಿಗಳೇ? ಆಗ ನರಕ ಭೂಮಿಯ ಮೇಲೆ ಇದೇ ಇನ್ನೆಲ್ಲೂ ಇಲ್ಲ ಎನಿಸಲು ಪ್ರಾರಂಭವಾಗುತ್ತದೆ.

ಮನುಷ್ಯನಿಗೆ ತನ್ನನ್ನು ಪರಿಗಣಿಸಿ, ಗೌರವಿಸುತ್ತಿದ್ದಾರೆ ಎಂದಾಗ ಬೀಗುತ್ತಿರುತ್ತಾನೆ. ಆದರೆ ತನ್ನನ್ನು ಕಡೆಗಣಿಸುತ್ತಿದ್ದಾರೆ ಎಂದು ತಿಳಿದಾಗ ಬಾಗಲು ಪ್ರಾರಂಭಿಸುತ್ತಾನೆ. ಅಧಿಕಾರ ಇದ್ದಾಗ ಉಬ್ಬುವುದೇನು? ಅಧಿಕಾರ ಹೋದಾಗ ಕುಗ್ಗುವುದೇನು? ಮನುಷ್ಯ ಯಶಸ್ಸಿನ ದಿನಗಳಲ್ಲಿ ಮೈಮರೆತು ಮೆರೆಯುತ್ತಿರುತ್ತಾನೆ. ಇದೇ ಶಾಶ್ವತ ಎಂದು ಸಣ್ಣಪುಟ್ಟವರನ್ನು ಕಡೆಗಣಿಸಿ ತನ್ನದೇ ಪ್ರಪಂಚದಲ್ಲಿ ವಿಹರಿಸುತ್ತಿರುತ್ತಾನೆ. ಆದರೆ ಅವನು ವಾಸ್ತವ ಪ್ರಪಂಚಕ್ಕೆ ಬರುವುದು ಅಪಯಶಸ್ಸು ಕಂಡಾಗ, ಅಧಿಕಾರ ಹೋದಾಗ, ನಿವೃತ್ತಿ ಆದಾಗ, ಆರೋಗ್ಯ ಹೋದಾಗ ಮಾತ್ರ

ಹಾಗೆಯೇ ಹಿರಿಯರಾದವರೂ ಸಹ ಬದಲಾವಣೆ ಜಗದ ನಿಯಮ ಎಂಬುದನ್ನು ಅರಿಯಬೇಕು. ಅಧಿಕಾರ ಹೋದ ಮೇಲೆ ಅಧಿಕಾರ ಇದ್ದಾಗ ಸಿಗುತ್ತಿದ್ದ ಗೌರವ ಹಾಗೂ ಪ್ರಾಶಸ್ತ್ಯವನ್ನು ಬಯಸುವುದು ತಪ್ಪಾಗುತ್ತದೆ. ವಾಸ್ತವವನ್ನು ಅರಿಯಬೇಕು. ಎಲ್ಲರೊಳಗೊಂದಾಗು ಮಂಕುತಿಮ್ಮ ಎನ್ನುವಂತೆ ಎಲ್ಲರೊಟ್ಟಿಗೆ ಬೆರೆತು ಬದುಕಿನ ಸಿಹಿಯನ್ನು ಅನುಭವಿಸಬೇಕು. ನಾನು ಮಂತ್ರಿಯಾಗಿದ್ದವನು, ದೊಡ್ಡ ಅಧಿಕಾರಿಯಾಗಿದ್ದವನು ನಾನೇಕೆ ಸಣ್ಣಪುಟ್ಟ ಜನರನ್ನು ಮಾತನಾಡಿಸಲಿ, ಒಡನಾಟ ಇಟ್ಟುಕೊಳ್ಳಲಿ ಎಂದು ಭಾವಿಸಿದರೆ ಒಂಟಿತನ ಅನುಭವಿಸಲು ಸಿದ್ಧವಾಗಬೇಕು. ಸೂರ್ಯ ಬೆಳಗಿನ ವೇಳೆ ಪ್ರಖರವಾಗಿ ಬೆಳಗಿದರೂ, ಸಂಜೆ ವೇಳೆಗೆ ಮೆತ್ತಗಾಗುವಂತೆ ಇಳಿವಯಸ್ಸಿನಲ್ಲಿ ಮೆತ್ತಗಾಗುವುದನ್ನು ರೂಢಿಸಿಕೊಳ್ಳಬೇಕು. ಇಲ್ಲಸಲ್ಲದ ಗೌರವ ನಿರೀಕ್ಷಿಸಿದರೆ ನಿರಾಸೆ ಕಟ್ಟಿಟ್ಟಬುತ್ತಿ.


ಮನುಷ್ಯ ಪರಸ್ಪರ ತೋರುವ ಬಾಂಧವ್ಯದಲ್ಲೂ ಲೆಕ್ಕಾಚಾರ ಹೊಂದಿರುವುದು ಮಾತ್ರ ವಿಷಾದನೀಯ ಸಂಗತಿ. ಇಂದು ಮೌಲ್ಯಾಧಾರಿತ ಶಿಕ್ಷಣ ನೀಡುತ್ತಿರುವುದಾಗಿ ಸರ್ಕಾರ, ಶಿಕ್ಷಣ ಸಂಸ್ಥೆಗಳು ಘೋಷಿಸುತ್ತಿವೆ. ಆದರೆ ಶಿಕ್ಷಣದ ಗುಣಮಟ್ಟವು ಸಮಾಜದಲ್ಲಿ ಆಗುತ್ತಿರುವ ಸುಧಾರಣೆಗಳಲ್ಲಿ ಗೋಚರಿಸಬೇಕು. ಆದರೆ ಶಿಕ್ಷಣಕ್ಕೂ, ಸಾಮಾಜಿಕ ವ್ಯವಸ್ಥೆಗೂ ಸಂಬಂಧವೇ ಇಲ್ಲದಂತಹ ಘಟನೆಗಳು ನಡೆಯುತ್ತಿವೆ. ಅತ್ಯಂತ ಹೆಚ್ಚು ಶಿಕ್ಷಣ ಪಡೆದ ಅನೇಕರು ಅಮಾನವೀಯವಾಗಿ ನಡೆದುಕೊಂಡ ಉದಾಹರಣೆಗಳಿವೆ. ಇಳಿವಯಸ್ಸಿನ ಹೆತ್ತವರನ್ನು ಗೌರವಪೂರ್ವಕವಾಗಿ ನಡೆಸಿಕೊಳ್ಳುವುದನ್ನು ಬಿಟ್ಟು, ಅವರ ಸಂಧ್ಯಾಕಾಲದ ಬದುಕನ್ನು ಹೈರಾಣ ಮಾಡಿಸಿ, ಮಕ್ಕಳೇ ಸಿಂಹಸ್ವಪ್ನಗಳಾಗುತ್ತಿರುವುದು ನಿಜಕ್ಕೂ ನಾಚಿಕೆಗೇಡಿನ ಸಂಗತಿ. ತಮಗೂ ತಮ್ಮ ಮಕ್ಕಳು ಮುಂದೊಂದು ದಿನ ಇದೇ ರೀತಿ ಕಡೆಗಣಿಸುತ್ತಾರೆ ಎಂದು ತಿಳಿದಿದ್ದರೂ ಹೆತ್ತವರನ್ನು ದೂರ ಮಾಡುತ್ತಿರುವುದು ಈ ಶತಮಾನದ ಸಾಮಾಜಿಕ ವ್ಯವಸ್ಥೆಯ ಒಂದು ದೊಡ್ಡ ಸೋಲು ಎನ್ನಬಹುದು. ಇದಕ್ಕೆ ತದ್ವಿರುದ್ಧವಾಗಿ ಅನೇಕ ಜನ ಮಕ್ಕಳು ತಮ್ಮ ಹೆತ್ತವರನ್ನು ಕಣ್ಣಿಗೆ ಕಾಣುವ ದೇವರು ಎಂದು ಇಳಿವಯಸ್ಸಿನಲ್ಲಿ ಅವರ ಸೇವೆ ಮಾಡಿ ಸಂತೃಪ್ತಿ ಕಾಣುತ್ತಿದ್ದಾರೆ, ಅವರಿಗೂ ನೆಮ್ಮದಿ ಬದುಕನ್ನು ಕರುಣಿಸಿರುವುದು ಉಂಟು.

ಮನುಷ್ಯ ಬಾಲ್ಯ, ಯೌವನ, ಮಧ್ಯ ವಯಸ್ಸು ಮುಗಿಸಿದ ನಂತರ ವೃದ್ಧಾಪ್ಯವನ್ನು ಅನುಭವಿಸಲೇಬೇಕು. ಯಾರೂ ತಪ್ಪಿಸಲಾಗದ ಜೀವನಕ್ರಮವಿದು. ತಮಗೂ ಒಂದು ದಿನ ವಯಸ್ಸಾಗುತ್ತದೆ, ತಾವೂ ನಿಸ್ಸಹಾಯಕರಾಗುತ್ತೇವೆ ಎಂದು ಭಾವಿಸಿದರೆ ಮಾತ್ರ ಹಿರಿಯರನ್ನು ಇಂದು ಗೌರವದಿಂದ ನಡೆಸಿಕೊಳ್ಳಲು ಸಾಧ್ಯ. ಇಂದಿನ ಮಕ್ಕಳು ಹೆತ್ತವರು ಹೇಳಿದ್ದನ್ನು ಮಾಡುವ ಬದಲು ಹೆತ್ತವರು ಮಾಡಿದ್ದನ್ನು ಅನುಸರಿಸುವುದು ಹೆಚ್ಚು. ಆದ್ದರಿಂದ ತಮ್ಮ ಹೆತ್ತವರನ್ನು ಪ್ರೀತಿಪೂರ್ವಕವಾಗಿ ನೋಡಿಕೊಳ್ಳುವ ಮೂಲಕ ಮಕ್ಕಳಿಗೆ ಒಂದು ಪ್ರಾಯೋಗಿಕ ಜೀವನಪಾಠವನ್ನು ಮಾಡುವ ಅಗತ್ಯವಿದೆ. ತಮಗಾಗಿ ಎಲ್ಲವನ್ನು ತ್ಯಾಗ ಮಾಡಿದ ಹೆತ್ತವರಿಗೆ ಇಳಿವಯಸ್ಸಿನಲ್ಲಿ ಒಂದು ಭದ್ರತಾಭಾವ ಮೂಡಿದರೆ ಅವರು ಸ್ವರ್ಗದ ದಿನಗಳನ್ನು ಇಲ್ಲಿಯೇ ಕಾಣುತ್ತಾರೆ. ಇದ್ದಾಗ ಅವರನ್ನು ಕಡೆಗಣಿಸಿ, ಅವರಿಗೆ ಸ್ವರ್ಗ ಪ್ರಾಪ್ತಿಯಾಗಲಿ ಎಂದು ಉತ್ತರ ಕ್ರಿಯಾದಿ ಪೂಜೆಗಳನ್ನು ಮಾಡಿಸುವುದು ಒಂದು ದೊಡ್ಡ ಹಾಸ್ಯಾಸ್ಪದ ಆಚಾರ ಎನಿಸುತ್ತದೆ. ಹೆತ್ತವರಿಗೆ ಸಾಧ್ಯವಾದರೆ ಭೂಮಿಯ ಮೇಲೆ ಸ್ವರ್ಗದ ದಿನಗಳನ್ನು ತೋರಿಸಬೇಕು, ಯಾವುದೇ ಕಾರಣಕ್ಕೂ ಅವರ ಇಳಿವಯಸ್ಸು ನರಕಸದೃಶವಾಗಬಾರದು.

ಪದ ತಾಂಬೂಲ:

ಹಿರಿತನಕ್ಕೆ ಸಿರಿತನವಿದ್ದರೆ
ಮಾತ್ರ ಮನ್ನಣೆ
ಬರಿಗೈಯಲ್ಲಿದ್ದರೆ
ಬದುಕು ನರಕಯಾತನೆ!

ಲಾಟರಿ, ಸಾರಾಯಿ ನಿಷೇಧದಂತಹ ಕ್ರಾಂತಿಕಾರಿ ನಿರ್ಧಾರ ಕೈಗೊಂಡ ಹೆಚ್.ಡಿ.ಕುಮಾರಸ್ವಾಮಿ ಈಗ ಕೇಂದ್ರ ಸಚಿವ!



1959ರ ಡಿಸೆಂಬರ್ 19ರಂದು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಪುತ್ರರಾಗಿ ಜನಿಸಿದ ಹೆಚ್.ಡಿ.ಕುಮಾರಸ್ವಾಮಿಯವರು ರಾಜಕೀಯ ಕುಟುಂಬದಲ್ಲಿ ಜನಿಸಿದವರಾದರೂ ಆರಂಭಿಕ ಹಂತದಲ್ಲಿ ಚಿತ್ರ ನಿರ್ಮಾಪಕರಾಗಿ, ವಿತರಕರಾಗಿ ಚಿತ್ರರಂಗದಲ್ಲಿ ತೊಡಗಿಸಿಕೊಂಡಿದ್ದರು. 1996ರಲ್ಲಿ ನಡೆದ ಲೋಕಸಭಾ ಚುನಾವಣೆ ವೇಳೆ ರಾಜಕೀಯ ಅನುಭವವೇ ಇಲ್ಲದ ಕುಮಾರಸ್ವಾಮಿಯವರು ಕನಕಪುರ ಕ್ಷೇತ್ರದಿಂದ ಗೆದ್ದು ಲೋಕಸಭೆ ಪ್ರವೇಶಿಸುವ ಮೂಲಕ ರಾಜಕೀಯ ಕ್ಷೇತ್ರಕ್ಕೆ ಕಾಲಿಟ್ಟರು.

1998 ಮತ್ತು 1999ರ ಲೋಕಸಭಾ ಚುನಾವಣೆಯಲ್ಲಿ ಕನಕಪುರ ಕ್ಷೇತ್ರದಿಂದಲೇ ಸ್ಪರ್ಧಿಸಿ ಪರಾಭವಗೊಂಡ ಅವರು 1999ರ ವಿಧಾನಸಭಾ ಚುನಾವಣೆಯಲ್ಲಿ ಸಾತನೂರು ಕ್ಷೇತ್ರದಲ್ಲಿ ಸ್ಪರ್ಧಿಸಿ ಸೋಲು ಅನುಭವಿಸಿದರು. 2004 ಮತ್ತು 2008ರ ವಿಧಾನಸಭಾ ಚುನಾವಣೆಯಲ್ಲಿ ಸತತವಾಗಿ ರಾಮನಗರ ಕ್ಷೇತ್ರದಿಂದ ಗೆಲುವು ಸಾಧಿಸಿದರಾದರೂ 2009ರ ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಗೆದ್ದು 2ನೇ ಬಾರಿಗೆ ಲೋಕಸಭೆ ಪ್ರವೇಶಿಸಿದರು. ಮತ್ತೆ 2013 ಮತ್ತು 2018ರ ವಿಧಾನಸಭಾ ಚುನಾವಣೆಯಲ್ಲಿ ರಾಮನಗರ ಕ್ಷೇತ್ರದಲ್ಲಿ ಗೆಲುವು ಸಾಧಿಸಿದರು. ಅದರಲ್ಲೂ 2018ರಲ್ಲಿ ರಾಮನಗರ ಮತ್ತು ಚನ್ನಪಟ್ಟಣ ಎರಡೂ ಕ್ಷೇತ್ರಗಳಲ್ಲಿ ಸ್ಪರ್ಧಿಸಿ 2ರಲ್ಲೂ ಗೆಲುವು ಸಾಧಿಸಿದ್ದರು. ಈ ನಡುವೆ 2014ರ ಲೋಕಸಭಾ ಚುನಾವಣೆಯಲ್ಲಿ ಚಿಕ್ಕಬಳ್ಳಾಪುರದಿಂದ ಸ್ಪರ್ಧಿಸಿದರಾದರೂ ಪರಾಭವಗೊಂಡರು. ನಂತರ 2023ರ ವಿಧಾನಸಭಾ ಚುನಾವಣೆಯಲ್ಲಿ ಚನ್ನಪಟ್ಟಣದಿಂದ 2ನೇ ಬಾರಿಗೆ ಶಾಸಕರಾದರು.

2004ರಲ್ಲಿ ರಾಮನಗರದಿಂದ ಗೆದ್ದು ಮೊದಲ ಬಾರಿಗೆ ಶಾಸಕರಾಗಿದ್ದ ಇವರು ಜೆಡಿಎಸ್‌ನಲ್ಲಿ ಯುವನಾಯಕನಾಗಿ ಹೊರಹೊಮ್ಮಿದ್ದರು. ಕಾಂಗ್ರೆಸ್ ಮತ್ತು ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ಎನ್.ಧರಂ ಸಿಂಗ್ ಮುಖ್ಯಮಂತ್ರಿಗಳಾಗಿದ್ದ ವೇಳೆ ಉಪಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯನವರೊಂದಿಗಿನ ಭಿನ್ನಾಭಿಪ್ರಾಯದ ಹಿನ್ನೆಲೆಯಲ್ಲಿ ಸಿಡಿದೆದ್ದ ಕುಮಾರಸ್ವಾಮಿ ತಮ್ಮ ತಂದೆ ಹೆಚ್.ಡಿ.ದೇವೇಗೌಡರ ಮಾತನ್ನೂ ಧಿಕ್ಕರಿಸಿ ತಮ್ಮ ಪಕ್ಷದ ಶಾಸಕರೊಡಗೂಡಿ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡು 2006ರ ಫೆಬ್ರವರಿ 3ರಂದು ಬಿಜೆಪಿ–ಜೆಡಿಎಸ್ ಸಮ್ಮಿಶ್ರ ಸರ್ಕಾರದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು.

ಈ ಅವಧಿಯಲ್ಲಿ ಗ್ರಾಮ ವಾಸ್ತವ್ಯವನ್ನು ರಾಜ್ಯಕ್ಕೆ ಪರಿಚಯಿಸಿದ ಕುಮಾರಸ್ವಾಮಿ ಲಾಟರಿ ನಿಷೇಧ, ಸಾರಾಯಿ ನಿಷೇಧ ಮುಂತಾದ ಕ್ರಾಂತಿಕಾರಿ ನಿರ್ಧಾರಗಳನ್ನು ತೆಗೆದುಕೊಂಡಿದ್ದರು. ಯಡಿಯೂರಪ್ಪನವರಿಗೆ ಮುಖ್ಯಮಂತ್ರಿ ಸ್ಥಾನವನ್ನು ಬಿಟ್ಟುಕೊಡುವ ವಿಚಾರದಲ್ಲಿ ಉಂಟಾದ ಭಿನ್ನಾಭಿಪ್ರಾಯದಿಂದಾಗಿ ಬಿಜೆಪಿ ಬೆಂಬಲ ಹಿಂತೆಗೆದ ಕಾರಣ 2007ರ ನವೆಂಬರ್ 9ರಂದು ಮುಖ್ಯಮಂತ್ರಿ ಸ್ಥಾನದಿಂದ ಪದಚ್ಯುತಗೊಂಡರು. 2018ರ ವಿಧಾನಸಭಾ ಚುನಾವಣೆಯಲ್ಲಿ ಯಾವುದೇ ಪಕ್ಷಕ್ಕೂ ಬಹುಮತ ಬಾರದೇ ಇದ್ದಾಗ ಕುಮಾರಸ್ವಾಮಿಯವರೇ ಮುಖ್ಯಮಂತ್ರಿ ಎಂದು ಸ್ವತಃ ಕಾಂಗ್ರೆಸ್ ಪಕ್ಷವೇ ಘೋಷಿಸಿ ಬೆಂಬಲ ಸೂಚಿಸಿದ ಹಿನ್ನೆಲೆಯಲ್ಲಿ 2018ರ ಮೇ 23ರಂದು ಕುಮಾರಸ್ವಾಮಿ 2ನೇ ಬಾರಿಗೆ ಮುಖ್ಯಮಂತ್ರಿ ಪಟ್ಟ ಏರಿದರು. ಈ ಅವಧಿಯಲ್ಲಿ ರೈತರ ಸಾಲಮನ್ನಾ ಮಾಡುವ ಮೂಲಕ ಖ್ಯಾತಿ ಗಳಿಸಿದ ಅವರು ಕಾಂಗ್ರೆಸ್ ಮತ್ತು ಜೆಡಿಎಸ್ 17ಶಾಸಕರು ಬಿಜೆಪಿ ಸೇರಿದ ಹಿನ್ನೆಲೆಯಲ್ಲಿ 2019ರ ಜುಲೈ 23ರಂದು ಮುಖ್ಯಮಂತ್ರಿ ಸ್ಥಾನವನ್ನು ಕಳೆದುಕೊಂಡರು.

ಬದಲಾದ ರಾಜಕೀಯ ಸನ್ನಿವೇಶದಲ್ಲಿ ಜೆಡಿಎಸ್‌ನ ರಾಜ್ಯಾಧ್ಯಕ್ಷರಾಗಿದ್ದ ಕುಮಾರಸ್ವಾಮಿ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡು ಲೋಕಸಭಾ ಚುನಾವಣೆ ಎದುರಿಸಿದರು. ಮಂಡ್ಯ ಕ್ಷೇತ್ರದಲ್ಲಿ ಸ್ಪರ್ಧಿಸಿದ ಇವರು ಭರ್ಜರಿ ಜಯ ಗಳಿಸಿದರು. ಈ ಚುನಾವಣೆಯಲ್ಲಿ ಜೆಡಿಎಸ್ ಮಂಡ್ಯ, ಹಾಸನ ಹಾಗೂ ಕೋಲಾರ ಕ್ಷೇತ್ರದಲ್ಲಿ ಸ್ಪರ್ಧಿಸಿ ಹಾಸನ ಹೊರತುಪಡಿಸಿ ಉಳಿದ ಎರಡು ಕ್ಷೇತ್ರಗಳಲ್ಲಿ ಜಯ ಗಳಿಸಿತು. 3ನೇ ಬಾರಿಗೆ ಲೋಕಸಭೆ ಪ್ರವೇಶಿಸಿರುವ ಕುಮಾರಸ್ವಾಮಿ, ನರೇಂದ್ರ ಮೋದಿಯವರ ಸಂಪುಟದಲ್ಲಿ ಸ್ಥಾನ ಪಡೆದಿದ್ದಾರೆ.

ವರಿಷ್ಠರ ಆಜ್ಞಾಪಾಲಕ ಸೋಮಣ್ಣರಿಗೆ ಒಲಿಯಿತು ಕೇಂದ್ರ ಸಚಿವ ಸ್ಥಾನ

1950ರ ಜುಲೈ 20ರಂದು ರಾಮನಗರ ಜಿಲ್ಲೆ ದೊಡ್ಡಮರಳವಾಡಿ ಗ್ರಾಮದ ವೀರಣ್ಣ ಮತ್ತು ಕೆಂಪಮ್ಮ ದಂಪತಿ ಪುತ್ರನಾಗಿ ಜನಿಸಿದ ವಿ.ಸೋಮಣ್ಣ 1983ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರಾಗಿ ಆಯ್ಕೆಯಾಗುವ ಮೂಲಕ ರಾಜಕೀಯ ಪ್ರವೇಶಿಸಿದರು.



ಹೆಚ್.ಡಿ.ದೇವೇಗೌಡರ ಆಪ್ತರಾಗಿದ್ದ ಇವರು 1994ರಲ್ಲಿ ಬಿನ್ನಿಪೇಟೆ ಕ್ಷೇತ್ರದಲ್ಲಿ ಸ್ಪರ್ಧಿಸಿ ವಿಧಾನಸಭೆ ಪ್ರವೇಶಿಸಿದರು. ಮೊದಲ ಬಾರಿಗೆ ಶಾಸಕರಾಗಿದ್ದ ವಿ.ಸೋಮಣ್ಣ ಜೆ.ಹೆಚ್.ಪಟೇಲ್ ಸಂಪುಟದಲ್ಲಿ ಬಂಧೀಖಾನೆ ಮತ್ತು ಬೆಂಗಳೂರು ನಗರಾಭಿವೃದ್ಧಿ ಸಚಿವರಾದರು. 1999ರ ವಿಧಾನಸಭೆ ಚುನಾವಣೆ ವೇಳೆಗೆ ದೇವೇಗೌಡರೊಂದಿಗೆ ಮುನಿಸಿಕೊಂಡಿದ್ದ ಸೋಮಣ್ಣ ಬಿನ್ನಿಪೇಟೆ ಕ್ಷೇತ್ರದಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿ 2ನೇ ಬಾರಿಗೆ ಶಾಸಕರಾದರು. 2004ರಲ್ಲಿ ಬಿನ್ನಿಪೇಟೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಹಾಟ್ರಿಕ್ ಗೆಲುವು ಸಾಧಿಸಿದರು. 2008ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಗೋವಿಂದರಾಜನಗರದಿಂದ ಸ್ಪರ್ಧಿಸಿ ಶಾಸಕರಾದರೂ ರಾಜಕೀಯ ಸನ್ನಿವೇಶದಲ್ಲಿ ಕಾಂಗ್ರೆಸ್ ತೊರೆದರು. ಈ ವೇಳೆ 2010ರಲ್ಲಿ ವಿಧಾನಪರಿಷತ್ ಸದಸ್ಯರಾಗಿ ಆಯ್ಕೆಯಾಗಿ ಬಿ.ಎಸ್.ಯಡಿಯೂರಪ್ಪನವರ ಸರ್ಕಾರದಲ್ಲಿ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಸಚಿವರಾದರು. 2018ರಲ್ಲಿ ಗೋವಿಂದರಾಜನಗರದಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಗೆದ್ದು ರೇಷ್ಮೆ ಮತ್ತು ತೋಟಗಾರಿಕೆ ಸಚಿವರಾದರಲ್ಲದೆ, 2021ರಲ್ಲಿ ವಸತಿ ಮತ್ತು ಮೂಲಸೌಕರ್ಯ ಇಲಾಖೆ ಸಚಿವರಾಗಿ ಸೇವೆ ಸಲ್ಲಿಸಿದರು.

2023ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಹೈಕಮಾಂಡ್ ಸೂಚನೆ ಮೇರೆಗೆ ವರುಣ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಚಾಮರಾಜನಗರದಲ್ಲಿ ಸಿ.ಪುಟ್ಟರಂಗಶೆಟ್ಟಿ ವಿರುದ್ಧ ಸ್ಪರ್ಧಿಸಿ ಎರಡೂ ಕ್ಷೇತ್ರಗಳಲ್ಲೂ ಸೋಲನ್ನನುಭವಿಸಿದರು. ಅವರಿಗೆ ಇದೊಂದು ರೀತಿ ಅಗ್ನಿಪರೀಕ್ಷೆಯಾಗಿತ್ತು. ಆದರೂ ವರಿಷ್ಠರ ಆಜ್ಞೆಯನ್ನು ಶಿರಸಾ ಪಾಲಿಸಿದ್ದರು. ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ತುಮಕೂರಿನಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಮೊದಲ ಬಾರಿಗೆ ಲೋಕಸಭೆ ಪ್ರವೇಶಿಸಿರುವ ವಿ.ಸೋಮಣ್ಣ ಅವರು ನರೇಂದ್ರ ಮೋದಿಯವರ ಸಂಪುಟದಲ್ಲಿ ಸ್ಥಾನ ಪಡೆದಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ ಸೋಮವಾರ 10 ಜೂನ್ 2024

ಗ್ಯಾರಂಟಿ ಯೋಜನೆ ನಿಲ್ಲಿಸುವ ಹೇಳಿಕೆಗಳಿಗೆ ಕಡಿವಾಣ ಹಾಕಿ

ಹೈಕಮಾಂಡ್‌ಗೆ ಎಂಎಲ್‌ಸಿ ದಿನೇಶ್ ಗೂಳಿಗೌಡ ಒತ್ತಾಯ

ಮೈಸೂರು, ಜೂ.9(ಬಿಎಲ್‌ಯು)– ಲೋಕಸಭಾ ಚುನಾವಣೆಯಲ್ಲಿ ಅಲ್ಪ ಹಿನ್ನಡೆಗಾಗಿ ಗ್ಯಾರಂಟಿ ಯೋಜನೆ ನಿಲ್ಲಿಸಬೇಕೆಂದು ಕೆಲ ಶಾಸಕರು, ಸಚಿವರು ಹಾಗೂ ಕಾಂಗ್ರೆಸ್ ಮುಖಂಡರು ನೀಡುತ್ತಿರುವ ಹೇಳಿಕೆಗೆ ಕಡಿವಾಣ ಹಾಕಬೇಕೆಂದು ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಗ್ರಹಿಸಿದ್ದಾರೆ.



ದಿನೇಶ್ ಗೂಳಿಗೌಡ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಷ್ಟ್ರೀಯ ನಾಯಕರಾದ ರಾಹುಲ್ ಗಾಂಧಿ, ಪ್ರಿಯಾಂಕ ಗಾಂಧಿ ಗ್ಯಾರಂಟಿ ಯೋಜನೆಗಳಿಗೆ ಚಾಲನೆ ನೀಡಿದ್ದಾರೆ. ಗ್ಯಾರಂಟಿ ಯೋಜನೆಯ ಯಶಸ್ಸು ಕಂಡು ಶ್ಲಾಘಿಸಿದ್ದಾರೆ. ಈ ಮೂಲಕ ಗ್ಯಾರಂಟಿ ಯೋಜನೆ ನಿರಂತರವಾಗಿ ಜಾರಿಯಲ್ಲಿರುತ್ತದೆ ಎಂದು ಭರವಸೆ ನೀಡಿದ್ದಾರೆ. ಹೈಕಮಾಂಡ್ ನಿರ್ಣಯದಿಂದ ಜಾರಿಯಾದ ಯೋಜನೆ ನಿಲ್ಲಿಸುವಂತೆ ಹೇಳುವ ಅಧಿಕಾರ ಯಾರಿಗೂ ಇಲ್ಲ ಎಂದು ಗೂಳಿಗೌಡ ತಿಳಿಸಿದ್ದಾರೆ.

ಬಡವರ ಪರವಾದ ಯೋಜನೆಗಳನ್ನು ಬಂದ್ ಮಾಡುವುದಿರಲಿ, ಅಂತಹ ಹೇಳಿಕೆಗಳನ್ನು ಕೂಡ ನೀಡಬಾರದು. ಇಂತಹ ಹೇಳಿಕೆಗಳು ಪಕ್ಷದ ಮೇಲಿನ ವಿಶ್ವಾಸ ಕಡಿಮೆಗೊಳಿಸುತ್ತದೆ. ಅಲ್ಲದೆ ಪಕ್ಷದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಆದ ಕಾರಣ ಇಂತಹ ಹೇಳಿಕೆಗೆ ಕೂಡಲೇ ಕಡಿವಾಣ ಹಾಕಬೇಕೆಂದು ದಿನೇಶ್ ಗೂಳಿಗೌಡ ಒತ್ತಾಯಿಸಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 9 ಸ್ಥಾನ ಗೆದ್ದಿದೆ. ಮತ ಗಳಿಕೆಯಲ್ಲೂ ಶೇಕಡ 14ರಷ್ಟು ಹೆಚ್ಚಳವಾಗಿದೆ. ಕಳೆದ ಬಾರಿ ಶೇಕಡ 31.5ರಷ್ಟಿದ್ದ ಮತ ಗಳಿಕೆ ಪ್ರಮಾಣ ಈ ಬಾರಿ ಶೇಕಡ 45.5ಕ್ಕೆ ಹೆಚ್ಚಳವಾಗಿದೆ. ಬಿಜೆಪಿ ಮತ ಗಳಿಕೆ ಶೇಕಡ 51.5ರಷ್ಟಿರುವುದು ಈ ಬಾರಿ ಶೇಕಡ 46ಕ್ಕೆ ಕುಸಿದಿದೆ. ಇದು ಕಾಂಗ್ರೆಸ್ ಮೇಲೆ ಜನರು ಇಟ್ಟಿರುವ ನಂಬಿಕೆಯಾಗಿದೆ. ಈ ಹಿನ್ನೆಲೆಯಲ್ಲಿ ಗ್ಯಾರಂಟಿ ಯೋಜನೆ ನಿಲ್ಲಿಸಬಾರದು ಎಂದು ದಿನೇಶ್ ಗೂಳಿಗೌಡ ಆಗ್ರಹಿಸಿದ್ದಾರೆ.

ಮೈಸೂರಲ್ಲಿ ಜೆಡಿಎಸ್ ಕಾರ್ಯಕರ್ತರ ಸಂಭ್ರಮ



ಜೆಡಿಎಸ್ ರಾಜ್ಯಾಧ್ಯಕ್ಷರಾದ ಹೆಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರದ ನೂತನ ಸಚಿವರಾದ ಹಿನ್ನೆಲೆಯಲ್ಲಿ ಹೆಚ್.ಡಿ.ಕೆ ಗ್ರೂಪ್ ರಾಜ್ಯಾಧ್ಯಕ್ಷ ಶರಾವತಿ ವೆಂಕಟೇಶ್ ನೇತೃತ್ವದಲ್ಲಿ ಸಿಹಿ ಹಂಚಿ ಸಂಭ್ರಮಿಸಲಾಯಿತು. ಈ ಸಂದರ್ಭದಲ್ಲಿ ಬಂಡಿಪಾಳ್ಯ ಗಿರಿ, ಯಶೋದಮ್ಮ, ಅರ್ಚನ, ಕುಮಾರ್, ಗೋವಿಂದೇಗೌಡ, ಮನುಗನಹಳ್ಳಿ ಜಗದೀಶ್, ನಾರಾಯಣಮೂರ್ತಿ ಇತರರು ಉಪಸ್ಥಿತರಿದ್ದರು.

ಇಂದಿನಿಂದ ಉಚಿತ ಹರ್ನಿಯಾ ತಪಾಸಣೆ ಶಿಬಿರ

ಮೈಸೂರು, ಜೂ.9–ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ಜೂ.10ರಿಂದ 15ರವರೆಗೆ ಉಚಿತ ಹರ್ನಿಯಾ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ.


ಜೇರ್ಣಾಂಗ ಶಸ್ತ್ರಚಿಕಿತ್ಸಾ ತಜ್ಞವೈದ್ಯ ಡಾ.ಶರತ್‌ಕುಮಾರ್ ನೇತೃತ್ವದಲ್ಲಿ ಈ ಶಿಬಿರ ನಡೆಯಲಿದೆ. ಈ ಶಿಬಿರದಲ್ಲಿ ಉಚಿತ ಸಮಾಲೋಚನೆ ಇದ್ದು, ವೈದ್ಯರು ಸೂಚಿಸುವ ಬಿ.ಪಿ., ಜಿ.ಆರ್.ಬಿ.ಎಸ್., ಬಿ.ಎಂ.ಐ. ಪರೀಕ್ಷೆಗಳಿಗೆ ವಿಶೇಷ ಪ್ಯಾಕೇಜ್ ಲಭ್ಯವಿರುತ್ತದೆ. ಹೊಟ್ಟೆಭಾಗದಲ್ಲಿ ನೋವು, ಸೊಂಟದ ಭಾಗದಲ್ಲಿ ಊತ, ಭಾರ ಎತ್ತುವಾಗ ನೋವು, ಮಲ ವಿಸರ್ಜಿಸುವಾಗ ಕಷ್ಟದ ಅನುಭವವಾಗುವುದು ಮುಂತಾದ ಸಮಸ್ಯೆಗಳಿರುವವರು ಕೂಡಲೇ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳತಕ್ಕದ್ದು. ಮಾಹಿತಿಗಾಗಿ 0821–2533600, 9986399862 ಸಂಪರ್ಕಿಸಬಹುದು ಎಂದು ಸುಯೋಗ್ ಆಸ್ಪತ್ರೆಯ ಜನರಲ್ ಮ್ಯಾನೇಜರ್ ಪಿ.ಜೆ.ಅರುಣ್‌ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೂರನೇ ಬಾರಿಗೆ ನರೇಂದ್ರ ಮೋದಿ ಪಿಎಂ



ನರೇಂದ್ರ ಮೋದಿ ಅವರು ಮೂರನೇ ಬಾರಿಗೆ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಹಿನ್ನೆಲೆಯಲ್ಲಿ ಜನಸೇವಕ ಯುವ ಬ್ರಿಗೇಡ್ ವತಿಯಿಂದ ಬೋಗಾದಿ ರೂಪನಗರದಲ್ಲಿ ಪಟಾಕಿ ಸಿಡಿಸಿ, ಸಿಹಿ ವಿತರಿಸಿ, ಪ್ರಧಾನಿ ನರೇಂದ್ರ ಮೋದಿಗೆ ಜೈಕಾರ ಕೂಗಿ ಸಂಭ್ರಮಿಸಿದರು. ಈ ವೇಳೆ ಜನಸೇವಕ ಯುವ ಬ್ರಿಗೇಡ್ ಅಧ್ಯಕ್ಷ ರಾಘವೇಂದ್ರ ಡಿ, ಮಾಲತಿ ಭಟ್, ಪುನೀತ್ ಅರಸ್, ವಿನಯ್ ಅರಸ್, ಪ್ರವೀಣ್, ಭರತ್, ಅವಿನಾಶ್, ಸ್ವಾಮಿ, ರಂಜಿತ್ ಇನ್ನಿತರರು ಹಾಜರಿದ್ದರು.

ನೂತನ ಎಂಎಲ್‌ಸಿ ಡಾ.ಯತೀಂದ್ರಗೆ ಅಭಿನಂದನೆ



ಅಖಿಲ ಕರ್ನಾಟಕ ದಿ.ರಾಕೇಶ್ ಸಿದ್ದರಾಮಯ್ಯ ಅಭಿಮಾನಿಗಳ ಬಳಗದ ವತಿಯಿಂದ ನೂತನ ಪರಿಷತ್ ಸದಸ್ಯರಾಗಿ ಆಯ್ಕೆಯಾದ ಡಾ.ಯತೀಂದ್ರ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಅಧ್ಯಕ್ಷ ವಿಶ್ವನಾಥ್ (ವಿಶ್ವ), ಉಪಾಧ್ಯಕ್ಷ ರಮೇಶ್ ರಾಮಪ್ಪ, ಕೃಷ್ಣರಾಜ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಜಿ.ಸೋಮಶೇಖರ್, ನಾಗೇಶ್ ಇದ್ದರು.

ಮೌಲಾನಾ ಆಜಾದ್ ಶಾಲೆಯಲ್ಲಿ ಪರಿಸರ ದಿನಾಚರಣೆ



ಮೈಸೂರಿನ ರಾಜಕುಮಾರ್ ರಸ್ತೆಯಲ್ಲಿರುವ ಮೌಲಾನ ಆಜಾದ್ ಶಾಲೆಯಲ್ಲಿ ಗಿಡ ನೆಡುವ ಮೂಲಕ ವಿಶ್ವ ಪರಿಸರ ದಿನ ಆಚರಿಸಲಾಯಿತು. ಈ ವೇಳೆ ಶಾಲೆಯ ಮುಖ್ಯೋಪಾಧ್ಯಾಯ ಸಿದ್ದಿ ಕ್ಯೂರ್ ರೆಹನಾ, ಸೌಮ್ಯ, ರಶ್ಮಿ, ರಾಧಾ, ಜಗದಾಂಬ, ಗಾಯಿತ್ರಿ, ಸಿದ್ರಾ ಮೋಹರಿನ್, ಸಾವಿರಾದಿಲ್ಬರ್, ಪ್ರಚಾರಕ ಮೈಕ್ ಪ್ರಕಾಶ್ ಇದ್ದರು.

ರಾಜ್ಯದಲ್ಲಿ ನಮ್ಮ ಹಕ್ಕು ಚಲಾಯಿಸಲು ನಮಗಿರುವ ಅಸ್ತ್ರ 'ಕನ್ನಡ'

● ಖ್ಯಾತ ಸಂಗೀತ ನಿರ್ದೇಶಕ ಹಂಸಲೇಖ ಅಭಿಮತ ● ಎಡೆಯೂರು ಸಮೀಉಲ್ಲಾರ 'ನೆನಪಿನ ಚಿತ್ತಾರಗಳು', 'ನೆನಪಿನ ಮಳೆಬಿಲ್ಲು' ಕೃತಿ ಬಿಡುಗಡೆ

ಮೈಸೂರು,ಜೂ.9(ಎಂಟಿವೈ)– ರಾಜ್ಯದಲ್ಲಿ ಹಕ್ಕು ಚಲಾಯಿಸಲು ಇರುವ ಏಕೈಕ ಆಯುಧವಾಗಿರುವ 'ಕನ್ನಡ'ವನ್ನು ಇನ್ನಷ್ಟು ಗಟ್ಟಿಗೊಳಿಸುವ ಕೆಲಸ ಆಗಬೇಕು ಎಂದು ಸಂಗೀತ ನಿರ್ದೇಶಕ ಹಂಸಲೇಖ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಭಾನುವಾರ ಸಾಹಿತ್ಯ ಲೋಕ ಆಯೋಜಿಸಿದ್ದ ಲೇಖಕ ಎಡೆಯೂರು ಸಮೀಉಲ್ಲಾ ಅವರ 'ನೆನಪಿನ ಚಿತ್ತಾರಗಳು' ಮತ್ತು 'ನೆನಪಿನ ಮಳೆಬಿಲ್ಲು' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕನ್ನಡ ಎಂಬುದು ಕರ್ನಾಟಕ ಪ್ರಾದೇಶಿಕ ನಕಾಶೆಯ ಬೆನ್ನುಹುರಿ ಹಾಗೂ ಮೆದುಳು ಬಳ್ಳಿ. ಈ ರಾಜ್ಯದ ಒಕ್ಕೂಟ ವ್ಯವಸ್ಥೆಯಲ್ಲಿ ಬದಲಾವಣೆ ತರಲು ಪ್ರಯತ್ನಿಸಿದರೆ, ಬೆನ್ನು ಹುರಿ ಮತ್ತು ಮೆದುಳು ಬಳ್ಳಿಗೆ ತೊಂದರೆಯಾಗುತ್ತದೆ. ನಾವು ರಾಜ್ಯದ ಸಂಪತ್ತನ್ನು ಹಕ್ಕಾಗಿ ಪಡೆದುಕೊಂಡಿದ್ದೇವೆ. ಈ ಕಾರಣದಿಂದ ಕನ್ನಡವನ್ನು ಗಟ್ಟಿಗೊಳಿಸುವ ಕೆಲಸ ಆಗಬೇಕು.

ರಾಜ್ಯದಲ್ಲಿರುವ ಎಲ್ಲ ಧರ್ಮಿಯರು, ಸಮುದಾಯಗಳು ಹಾಗೂ ತಬ್ಬಲಿ ಜಾತಿ ಜನಾಂಗಗಳು ಕನ್ನಡವನ್ನು ಗಟ್ಟಿಯಾಗಿ ಹಿಡಿದುಕೊಳ್ಳಬೇಕು. ಯಾರಾದರೂ ನಮ್ಮ ಸುದ್ದಿಗೆ ಬಂದರೆ ಅವರನ್ನು ವಿಚಾರಿಸಿಕೊಳ್ಳಲು ಕನ್ನಡವೆಂಬ ಹಕ್ಕಿದೆ ಎಂಬುದನ್ನು ತೋರಿಸಬೇಕು. ಅದಕ್ಕಾಗಿ ಕನ್ನಡಪರ ಸಂಘಟನೆಗಳಲ್ಲಿ ಭೀಮಾ ಪರಿವಾರ ಸಕ್ರಿಯವಾಗಿ ತೊಡಗಿಕೊಳ್ಳಬೇಕು ಎಂದು ಪ್ರತಿಪಾದಿಸಿದರು.



ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಸಾಹಿತ್ಯ ಲೋಕ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಂಗೀತ ನಿರ್ದೇಶಕ ಹಂಸಲೇಖ ಲೇಖಕ ಎಡೆಯೂರು ಸಮೀಉಲ್ಲಾ ಅವರ 'ನೆನಪಿನ ಚಿತ್ತಾರಗಳು' ಮತ್ತು 'ನೆನಪಿನ ಮಳೆಬಿಲ್ಲು' ಪುಸ್ತಕ ಬಿಡುಗಡೆ ಮಾಡಿದರು.

ರಾಜ್ಯದ ಆಡಳಿತ ಯಂತ್ರದ ಚುಕ್ಕಾಣಿ ಹಿಡಿದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಂಗಪ್ರವೇಶ ಕನ್ನಡ ಕಾವಲು ಸಮಿತಿಯಿಂದ ಆರಂಭವಾಗಿದೆ. ಈಗಲೂ ಸಿದ್ದರಾಮಯ್ಯ ಅವರು ಕನ್ನಡದ ಹಿತ ಕಾಪಾಡಲು ಬದ್ಧರಾಗಿದ್ದಾರೆ. ಅಲ್ಲದೆ ಕನ್ನಡಿಗರ ರಕ್ಷಣೆಗೆ ಸದಾ ಸಿದ್ಧರಾಗಿದ್ದಾರೆ. ಅವರ ಕೈ ಗಟ್ಟಿ ಮಾಡುವುದು ನಮ್ಮ ಕರ್ತವ್ಯ. ನಾಡಿಗೆ ಸಾಂಸ್ಕೃತಿಕ ರಾಯಭಾರಿಯನ್ನಾಗಿ ಬಸವಣ್ಣ ಅವರನ್ನು ಘೋಷಿಸಿಕೊಟ್ಟಿದ್ದಾರೆ. ಇನ್ನು ಐದು ವರ್ಷ ಈ ಕನ್ನಡದ ಸುದ್ದಿಗೆ ಯಾರೂ ಬರುವುದಿಲ್ಲ ಎಂದು ಹರ್ಷ ವ್ಯಕ್ತಪಡಿಸಿದರು.

ಇಂದು ಬಿಡುಗಡೆಯಾದ ಕೃತಿಗಳ ಶೀರ್ಷಿಕೆ ತುಂಬಾ ದೊಡ್ಡದು. ನೆನಪಿನ ಮಳೆಬಿಲ್ಲು ಎಂದ ಕೂಡಲೇ ಆಗಸದಲ್ಲಿ ಚಿತ್ತಾರ ಮೂಡುತ್ತದೆ. ಎರಡು ಕೃತಿ ಒಂದೊಂದು ಘಟಕದಿಂದ ಕೂಡಿದೆ. ಎರಡು ಘಟಕ ಲೇಖಕರ ಕನಸಾಗಿದ್ದು, ಬಿಡುಗಡೆ ಮೂಲಕ ಕನ್ನಡ ಸಾಹಿತ್ಯ ಲೋಕಕ್ಕೆ ಸೇರುತ್ತಿರುವುದು ವಿಶೇಷ. ಪುಸ್ತಕದ ಲೇಖಕ ಸಮೀಉಲ್ಲಾ, ಕನ್ನಡದ ಬೆನ್ನು ಬಿದ್ದಿದ್ದಾನೆ. ಯಾಕೆಂದರೆ ಕನ್ನಡದ ದೀಪದಲ್ಲಿ ಉರಿದು (ಉರ್ದು) ಕನ್ನಡಕ್ಕೆ ಕಾವಲಾಗಿದ್ದಾನೆ. ಆತನ ಕನ್ನಡ ಪ್ರೀತಿ ನನಗೆ ಯಾವಾಗಲೂ ಸೆಳೆಯುತ್ತದೆ. ತನ್ನ ಹೆಸರು ಮುಂದೆ ಎಡೆಯೂರು ಸೇರಿಸಿಕೊಂಡಿರುವುದು ತುಂಬಾ ಸೊಗಸಾಗಿದೆ. ಕರೀಂಖಾನ್ ತರಹ ಕನ್ನಡ ಉಸಿರಾಗಿಸಿಕೊಂಡಿದ್ದಾರೆ ಎಂದು ಶ್ಲಾಘಿಸಿದರು.

ಇದೇ ವೇಳೆ ಸಂಸ್ಕೃತಿ ಚಿಂತಕ ಗುಬ್ಬಿಗೂಡು ರಮೇಶ್ ಮಾತನಾಡಿ, ಸಾಹಿತಿಗಳು ಬರವಣಿಗೆಯ ಮೂಲಕ ಕನ್ನಡ ಹೋರಾಟವನ್ನು ಶ್ರೀಮಂತಗೊಳಿಸಿದ್ದಾರೆ. ಚಳವಳಿಗಳ ಮೂಲಕ ಹೋರಾಟಗಾರರು ಕನ್ನಡವನ್ನು ಮೆರವಣಿಗೆ ಮಾಡಿದ್ದಾರೆ. ಈ ಎರಡು ಒಗ್ಗೂಡಿ ಕನ್ನಡದ ಬೆಳವಣಿಗೆಯಾಗಬೇಕು. ಸಮೀವುಲ್ಲಾ ಅವರು ಈವರೆಗೂ ಸಾಂಸ್ಕೃತಿಕ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದರು. ಇದೀಗ ಬರವಣಿಗೆಯ ಮೂಲಕ ಛಾಪು ಮೂಡಿಸಿದ್ದಾರೆ. ಎರಡು ಪುಸ್ತಕಗಳು ನೆನಪಿನ ಶೀರ್ಷಿಕೆ ಹೊಂದಿದ್ದು, ಅದರಲ್ಲಿ ಅವರು ನಡೆದು ಬಂದ ಹಾದಿಯಲ್ಲಿ ಆದ ಅನುಭವಗಳಿಗೆ ಅಕ್ಷರ ರೂಪ ಕೊಟ್ಟಿದ್ದು, ಓದಿಸಿಕೊಳ್ಳುವ ಗುಣ ಎಡೆಯೂರು ಸಮೀವುಲ್ಲಾ ಅವರ ಬರವಣಿಗೆಯಲ್ಲಿದೆ. ಸಂಸ್ಕೃತಿ, ಜೀವನ, ಪರಿಚಯ ಎನ್ನುವುದು ಖೋ–ಖೋ ಆಟದಂತೆ ಕಂಡು ಬರುತ್ತದೆ. ಇಲ್ಲಿ ಆಟಗಾರ ಅಂಕಣದಲ್ಲಿ ನಿಲ್ಲದೆ ಓಟದಲ್ಲಿ ತೊಡಗಿಕೊಳ್ಳುತ್ತಿರಬೇಕು. ಬದುಕು ಹಾಗೇ ನಿರಂತರವಾಗಿ ಸಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಗಾಯಕ ರಾಜೇಶ್ ಪಡಿಯಾರ್ ಮತ್ತು ತಂಡದಿಂದ ಭಾವಗೀತೆಗಳ ಗಾನಯಾನ ನಡೆಸಿಕೊಟ್ಟರು. ಹಂಸಲೇಖ ರಾಗ ಸಂಯೋಜನೆಯ ಸಂವಿಧಾನ ಪೀಠಿಕೆ ಗೀತೆಯನ್ನು ದರ್ಶನ್ ಹಾಡಿದರು. ಸಾಹಿತ್ಯಲೋಕದ ಅಧ್ಯಕ್ಷ ವೈ.ಡಿ. ರಾಜಣ್ಣ, ಶೇಖರ್, ಇಂದ್ರಾಣಿ, ಅಶ್ವಿನಿ, ಎ.ಜಿ.ದೇವರಾಜು, ಲತಾ ಹಂಸಲೇಖ, ವೇದ ಡಿ.ರಜೋಲಿ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ನೂತನ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಅಭಿನಂದನೆ




ಕೇಂದ್ರ ಸಚಿವರಾಗಿ ಪ್ರಮಾಣ ವಚನ ಸ್ವೀಕಾರಕ್ಕೂ ಮುನ್ನ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಮೈಸೂರಿನಿಂದ ನವದೆಹಲಿಗೆ ತೆರಳಿದ್ದ ಜೆಡಿಎಸ್ ಶಾಸಕರು, ಮುಖಂಡರು ಅಭಿನಂದಿಸಿದರು. ಚಿತ್ರದಲ್ಲಿ ಶಾಸಕರೂ ಆದ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡ, ಶಾಸಕರಾದ ಬಾಲಕೃಷ್ಣ, ಜಿ.ಡಿ.ಹರೀಶ್‌ಗೌಡ, ಶರವಣ, ಕೆ.ವಿವೇಕಾನಂದ, ಭೋಜೇಗೌಡ, ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು, ಬಂಡೆಪ್ಪ ಕಾಶೆಂಪುರ್, ಮಾಜಿ ಶಾಸಕರಾದ ಸುರೇಶ್‌ಗೌಡ, ರವೀಂದ್ರ ಶ್ರೀಕಂಠಯ್ಯ, ಕೆ.ಮಹದೇವ್, ಮುಖಂಡರಾದ ನಿಖಿಲ್ ಕುಮಾರಸ್ವಾಮಿ ಇತರರು ಇದ್ದಾರೆ.

ಪ್ರೊ.ಡಿ.ಎ.ಶಂಕರ್ ಅವರ ಮೂರು ಕೃತಿಗಳ ಲೋಕಾರ್ಪಣೆ

ಮೈಸೂರು, ಜೂ.9(ಜಿಎ)–ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ ಮತ್ತು ಕನ್ನಡ ಸಾಹಿತ್ಯ ಕಲಾಕೂಟದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರೊ.ಡಿ.ಎ.ಶಂಕರ್ ಅವರ ಮೂರು ಕೃತಿಗಳು ಲೋಕಾರ್ಪಣೆಗೊಂಡವು.

ಲೇಖಕ ಶಂಕರ್ ಅವರಿಗೆ 88ನೇ ಜನ್ಮದಿನದ ಗೌರವ ಅರ್ಪಿಸಿದ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅವರು 'ಡಾಕ್ಟರ್ ಫಾಸ್ಟಸ್', 'ಸಾಕ್ಷಿ ಬೇಡದ ಮದುವೆ ಮತ್ತು ಬೆನ್ನೇರಿದ ಭೂತ', 'ಮಹಾಭಾರತದ ಹತ್ತು ಮನೋಜ್ಞ ಕಥೆಗಳು' ಕೃತಿಗಳನ್ನು ಬಿಡುಗಡೆಗೊಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ ಮತ್ತು ಕನ್ನಡ ಸಾಹಿತ್ಯ ಕಲಾಕೂಟದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರೊ.ಡಿ.ಎ.ಶಂಕರ್ ಅವರ ಮೂರು ಕೃತಿಗಳನ್ನು ಲೋಕಾರ್ಪಣೆಗೊಳಿಸಲಾಯಿತು.

ನಂತರ ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ ಅವರು ಕೃತಿಗಳ ಕುರಿತು ಮಾತನಾಡಿ, ಈ ಎಲ್ಲಾ ಕೃತಿಗಳು ಮನೋಜ್ಞ ಕಥೆಗಳ ಗುಚ್ಛ. ಇಲ್ಲಿ ಬರುವ ಪ್ರತಿ ಸಂಗತಿಗಳು ನಮ್ಮನ್ನು ಸ್ವಯಂವಿಮರ್ಶೆಗೆ ದೂಡುತ್ತದೆ. ಡಾಕ್ಟರ್ ಫಾಸ್ಟಸ್ ಒಂದು ಅನುವಾದಿತ ದುರಂತ ನಾಟಕವಾಗಿದ್ದು, ಬದುಕಿನಲ್ಲಿ ಆಯ್ಕೆಗಳ ಮಹತ್ವವನ್ನು ತಿಳಿಸುತ್ತದೆ. ಮಹಾಭಾರತದ ಕಥೆಗಳು ನ್ಯಾಯ, ಧರ್ಮ ಸೂಕ್ಷ್ಮತೆಯನ್ನು ಹಾಗೂ ಬೆನ್ನೇರಿದ ಭೂತ ಕೃತಿಯೂ ನಮ್ಮನ್ನು ಆವರಿಸಿದ ದುಷ್ಟಟಗಳು ಮತ್ತು ಅದು ಜೀವನದಲ್ಲಿ ತರಬಹುದಾದ ಸಂಕಷ್ಟಗಳನ್ನು ತಿಳಿಸಿ ನಮ್ಮನ್ನು ಎಚ್ಚರಿಸುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಪ್ರಕಾಶಕ ಡಿ.ಎನ್.ಲೋಕಪ್ಪ ಉಪಸ್ಥಿತರಿದ್ದರು.

ಇಂದಿನಿಂದ ಭಾರತದ ಶಾಸ್ತ್ರೀಯ ಭಾಷೆಗಳ ರಾಷ್ಟ್ರೀಯ ಸಮ್ಮೇಳನ

ಮೈಸೂರು, ಜೂ.9–ಭಾರತೀಯ ಭಾಷಾ ಸಂಸ್ಥಾನದ ವತಿಯಿಂದ ಜೂನ್ 10ರಿಂದ 12ರವರೆಗೆ ಮೂರು ದಿನಗಳ ಭಾರತದ ಶಾಸ್ತ್ರೀಯ ಭಾಷೆಗಳ ರಾಷ್ಟ್ರೀಯ ಸಮ್ಮೇಳನ (ಸಿಸಿಎಲ್‌ಐ–24)ವನ್ನು ಸಂಸ್ಥೆಯ ಪ್ರಿವ್ಯೂ ಥಿಯೇಟರ್‌ನಲ್ಲಿ ಹಮ್ಮಿಕೊಳ್ಳಲಾಗಿದೆ. ಸಮ್ಮೇಳನದ ಉದ್ಘಾಟನಾ ಸಮಾರಂಭವು ಜೂ.10ರಂದು ಬೆಳಗ್ಗೆ 10 ಗಂಟೆಗೆ ನಡೆಯಲಿದ್ದು, ಗುರ್ಗಾಂವ್‌ನ ಅಮಿಟಿ ವಿಶ್ವವಿದ್ಯಾಲಯದ ಭಾಷಾಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ.ಉದಯ ನಾರಾಯಣಸಿಂಗ್ ಉದ್ಘಾಟನಾ ಭಾಷಣವನ್ನು ನೆರವೇರಿಸಲಿದ್ದಾರೆ. ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಭಾರತೀಯ ಭಾಷಾ ಸಂಸ್ಥಾನದ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಕ್ರಿಯ ರಾಜಕಾರಣದಿಂದ ಬಿಜೆಡಿಯ ವಿ.ಕೆ.ಪಾಂಡಿಯನ್ ನಿವೃತ್ತಿ ಘೋಷಣೆ

ಭುವನೇಶ್ವರ್: ಒಡಿಶಾದ ಮಾಜಿ ಸಿಎಂ ನವೀನ್ ಪಟ್ನಾಯಕ್ ಆಪ್ತ ವಿಕೆ ಪಾಂಡಿಯನ್ ಸಕ್ರಿಯ ರಾಜಕಾರಣದಿಂದ ನಿವೃತ್ತಿ ಘೋಷಿಸಿದ್ದಾರೆ.



ಐಎಎಸ್ ಅಧಿಕಾರಿಯಾಗಿದ್ದ ಪಾಂಡಿಯನ್ ನಿವೃತ್ತಿ ಪಡೆದು ಬಿಜೆಡಿಗೆ ಸೇರ್ಪಡೆಯಾಗಿದ್ದರು. ಈಗ ಒಡಿಶಾ ವಿಧಾನಸಭಾ ಚುನಾವಣೆಯಲ್ಲಿ ಬಿಜೆಡಿ ಸೋಲು ಕಂಡಿರುವ ಹಿನ್ನೆಲೆಯಲ್ಲಿ ಪಾಂಡಿಯನ್ ವಿರುದ್ಧ ಟೀಕೆಗಳು ವ್ಯಕ್ತವಾಗತೊಡಗಿತ್ತು. ವಿಡಿಯೋ ಮೆಸೇಜ್‌ನಲ್ಲಿ ಪಾಂಡಿಯನ್ ನಿವೃತ್ತಿ ಘೋಷಣೆ ಮಾಡಿದ್ದಾರೆ.

ಪಾಂಡಿಯನ್ ಬಗ್ಗೆ ವ್ಯಕ್ತವಾಗುತ್ತಿದ್ದ ಟೀಕೆಗಳ ಬಗ್ಗೆ ಪ್ರತಿಕ್ರಿಯೆ ನೀಡಿದ್ದ ಒಡಿಶಾ ಮಾಜಿ ಸಿಎಂ ನವೀನ್ ಪಟ್ನಾಯಕ್, ಪಾಂಡಿಯನ್ ಬಗ್ಗೆ ಟೀಕೆ ಮಾಡುವುದು ಸಮಂಜಸವಲ್ಲ. ಅಷ್ಟೇ ಅಲ್ಲದೇ ಪಾಂಡಿಯನ್ ತಮ್ಮ ರಾಜಕೀಯ ಉತ್ತರಾಧಿಕಾರಿಯಲ್ಲ ಎಂದೂ ಸ್ಪಷ್ಟನೆ ನೀಡಿದ್ದಾರೆ.

ಪಾಂಡಿಯನ್ ಅವರನ್ನು ನವೀನ್ ಪಟ್ನಾಯಕ್ ಅವರ ಉತ್ತರಾಧಿಕಾರಿ ಎಂದು ಬಿಂಬಿಸಲಾಗುತ್ತಿತ್ತು. ಆದರೆ ನವೀನ್ ಪಟ್ನಾಯಕ್, ಪಾಂಡಿಯನ್ ತಮ್ಮ ಉತ್ತರಾಧಿಕಾರಿಯಲ್ಲ ಎಂದು ಹೇಳಿದ ಬೆನ್ನಲ್ಲೇ ಪಾಂಡಿಯನ್ ಸಕ್ರಿಯ ರಾಜಕಾರಣದಿಂದ ನಿವೃತ್ತಿ ಘೋಷಣೆ ಮಾಡಿದ್ದಾರೆ. ಮೇ 10ರಂದು ಮಾತನಾಡಿದ್ದ ಪಾಂಡಿಯನ್, ಒಡಿಶಾ ವಿಧಾನಸಭಾ ಚುನಾವಣೆಯಲ್ಲಿ ಬಿಜೆಡಿ ಸೋಲು ಕಂಡರೆ ತಾವು ರಾಜಕೀಯದಿಂದ ನಿವೃತ್ತಿ ಪಡೆಯುವುದಾಗಿ ಘೋಷಿಸಿದ್ದರು.

24 ಮನೆ ತೆಲುಗುಶೆಟ್ಟರ ಕುಲ ಬಾಂಧವರಿಂದ ವಿಜೃಂಭಣೆಯ ಶ್ರೀ ಚಾಮುಂಡೇಶ್ವರಿ ಅಮ್ಮನವರ ಹಬ್ಬ



ಮೈಸೂರು, ಜೂ.9– ನಗರದ 24 ಮನೆ ತೆಲುಗುಶೆಟ್ಟರ ಜನಾಂಗದ ವತಿಯಿಂದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಇಂದು ಅಮ್ಮನವರಿಗೆ ವಿಶೇಷ ಪೂಜೆ ನೆರವೇರಿಸಲಾಯಿತು. ನಂತರ ಮಧ್ಯಾಹ್ನ 12 ಗಂಟೆಗೆ ಮಹಾ ಮಂಗಳಾರತಿ ನೆರವೇರಿಸಿ ಅನ್ನದಾಸೋಹವನ್ನು ಮಾಡಲಾಯಿತು. ಜನಾಂಗದ ಕುಲ ಬಾಂಧವರು ರಾಜ್ಯದ ನಾನಾ ಭಾಗಗಳಿಂದ ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿ ಅಮ್ಮನವರಿಗೆ ಪೂಜೆ ಸಲ್ಲಿಸಿದರು.

ಡಾ.ಯತೀಂದ್ರ ಅವರಿಗೆ ಸನ್ಮಾನ



ನೂತನ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಅವರನ್ನು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅಭಿನಂದಿಸಿದರು. ಈ ಸಂದರ್ಭ ಡಿಸಿಸಿ ಮಾಧ್ಯಮ ವಕ್ತಾರ ಎಡತೊರೆ ನಿಂಗರಾಜ್, ಕಾಂಗ್ರೆಸ್ ಮುಖಂಡ ಗಣೇಶ್, ಯುವ ಮುಖಂಡರಾದ ಸೌರಭ್, ಚೆಟ್ಟಿಹುಂಡಿ ಸುನೀಲ್, ಹರೀಶ್‌ಮೊಗಣ್ಣ ಮತ್ತಿತರರು ಉಪಸ್ಥಿತರಿದ್ದರು.

ಲೋಕಸಭಾ ಚುನಾವಣೆಯ ಮಾದರಿ ನೀತಿ ಸಂಹಿತೆ ತೆರವುಗೊಂಡ ನಂತರವಾದರೂ

ನನೆಗುದಿಗೆ ಬಿದ್ದಿದ್ದ ಅಭಿವೃದ್ಧಿ ಕಾರ್ಯಕ್ಕೆ ಚಾಲನೆ ದೊರೆಯುವುದೇ!

ಮೈಸೂರು, ಜೂ.9(ಬಿಎಲ್‌ಯು)– ಕಳೆದ ಎರಡು ತಿಂಗಳಿಂದ ಮೈಸೂರು ಮಾತ್ರವಲ್ಲದೆ ಇಡೀ ದೇಶದಲ್ಲಿ ಲೋಕಸಭಾ ಚುನಾವಣೆಯ ಮಾದರಿ ನೀತಿ ಸಂಹಿತೆ ಜಾರಿಯಲ್ಲಿತ್ತು. ಏನೇ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ನೀತಿ ಸಂಹಿತೆ ಅಡ್ಡಿಯಾಗಿತ್ತು. ಆದರೆ ಈಗ ನೀತಿ ಸಂಹಿತೆಯನ್ನು ಚುನಾವಣಾ ಆಯೋಗ ತೆರವುಗೊಳಿಸಿದ್ದು, ಸರ್ಕಾರದ ಅಧಿಕಾರಿಗಳು ಹಾಗೂ ಸಿಬ್ಬಂದಿ ದೈನಂದಿನ ಕಾರ್ಯದಲ್ಲಿ ನಿರತರಾಗಿದ್ದಾರೆ.

ಲೋಕಸಭಾ ಚುನಾವಣೆಯ ನೀತಿ ಸಂಹಿತೆ ಜಾರಿಯಾದ ನಂತರ ಅಭಿವೃದ್ಧಿ ಕಾರ್ಯಗಳಿಗೆ ಗ್ರಹಣ ಹಿಡಿದಿತ್ತು. ಸರ್ಕಾರ ಹಾಗೂ ರಾಜಕೀಯ ಪಕ್ಷಗಳು ಅಭಿವೃದ್ಧಿ ಕಾರ್ಯಗಳನ್ನು ದುರ್ಬಳಕೆ ಮಾಡಿಕೊಳ್ಳುವ ಕಾರಣ, ಚುನಾವಣಾ ಆಯೋಗ ಇದಕ್ಕೆ ಕಡಿವಾಣ ಹಾಕಿತ್ತು. ಚುನಾವಣೆ ಮುಗಿಯುವ ತನಕ ಯಾವುದೇ ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಳ್ಳಬಾರದು ಎಂದು ತಾಕೀತು ಮಾಡಿತ್ತು.

ಇದರಿಂದ ಕಳೆದ ಎರಡು ತಿಂಗಳಿನಿಂದ ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆದಿಲ್ಲ. ಚುನಾವಣಾ ಆಯೋಗ ವಿನಾಯಿತಿ ನೀಡಿರುವ ತುರ್ತು ಕೆಲಸಗಳನ್ನು ಹೊರತುಪಡಿಸಿ ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿರಲಿಲ್ಲ.

ಮಲಗುವವರಿಗೆ ಹಾಸಿಗೆ ಹಾಕಿಕೊಟ್ಟಂತೆ ಸರ್ಕಾರಿ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಇದು ವರವಾಯಿತು. ಜನರು ಏನೇ ಸಮಸ್ಯೆ ಹೇಳಿದರೂ ಚುನಾವಣಾ ಆಯೋಗ ಜಾರಿಗೊಳಿಸಿರುವ ನೀತಿಸಂಹಿತೆಯತ್ತ ಬೊಟ್ಟು ಮಾಡಿ ತೋರಿಸುತ್ತಿದ್ದರು. ನೀತಿ ಸಂಹಿತೆ ಅಡ್ಡಿಯಾಗದ ಕೆಲಸ ಮಾಡಿಕೊಡಲು ಕೂಡ ಆಸಕ್ತಿ ತೋರುತ್ತಿರಲಿಲ್ಲ. ಯಾವುದಾದರೂ ದಾಖಲೆಗಳಿಗೆ ಅಧಿಕಾರಿಗಳ ಸಹಿ ಬೇಕೆಂದರೆ ಅವರು ಕೈಗೆ ಸಿಗುತ್ತಿರಲಿಲ್ಲ. ಸಾಹೇಬರು ಎಲೆಕ್ಷನ್ ಡ್ಯೂಟಿನಲ್ಲಿದ್ದಾರೆ. ಸದ್ಯಕ್ಕೆ ಸಿಗುವುದಿಲ್ಲ ಎಂದು ಸಿಬ್ಬಂದಿ ನೆಪ ಹೇಳುತ್ತಿದ್ದರು. ಇದರಿಂದ ಸರ್ಕಾರದ ಕಚೇರಿಗಳಲ್ಲಿ ಆಗಬೇಕಾದ ಬಹಳಷ್ಟು ಕೆಲಸ ಕಾರ್ಯಗಳು ನಿಂತಿದ್ದವು. ಅಧಿಕಾರಿಗಳ ಒಂದು ಸಹಿಗೆ ಜನಸಾಮಾನ್ಯರು 2 ತಿಂಗಳು ಕಾದಿದ್ದರು.

ಆದರೆ ಚುನಾವಣಾ ಕರ್ತವ್ಯಕ್ಕೆ ನಿಯೋಜನೆಗೊಂಡ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಕೈ ಪೂರ್ತಿ ಕೆಲಸವಿತ್ತು. ಆದರೆ ಉಳಿದ ಕೆಲವು ಅಧಿಕಾರಿಗಳು ಹಾಗೂ ಸಿಬ್ಬಂದಿ ಇದೇ ಸಮಯ ಬಳಸಿಕೊಂಡು ಕಳ್ಳಾಟವಾಡುತ್ತಿದ್ದರು.

ಆದರೆ ಈಗ ಲೋಕಸಭಾ ಚುನಾವಣೆಯ ಮಾದರಿ ನೀತಿ ಸಂಹಿತೆಯನ್ನು ಚುನಾವಣಾ ಆಯೋಗವೇ ತೆರವು ಮಾಡಿದೆ. ಈಗಲಾದರೂ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ತಮ್ಮ ಕರ್ತವ್ಯವನ್ನು ಸಮರ್ಥವಾಗಿ ನಿಭಾಯಿಸಬೇಕಿದೆ. ಅರ್ಧ ನಿಂತಿರುವ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಬೇಕಿದೆ.

ಅಭಿವೃದ್ಧಿ ಕಾರ್ಯಗಳನ್ನು ಚುರುಕುಗೊಳಿಸಲಾಗುವುದು



ಲೋಕಸಭಾ ಚುನಾವಣೆ ಹಿನ್ನೆಲೆ ಜಾರಿಗೊಳಿಸಿದ್ದ ಮಾದರಿ ನೀತಿ ಸಂಹಿತೆ ತೆರವುಗೊಳಿಸಿರುವ ಕಾರಣ ಅಧಿಕಾರಿಗಳು ಯಾವುದೇ ಸಬೂಬು ಹೇಳದೆ ಕೆಲಸ ಮಾಡಬೇಕು. ಲೋಕಸಭೆ ಹಾಗೂ ವಿಧಾನ ಪರಿಷತ್ ಚುನಾವಣೆಯ ಮತ ಎಣಿಕೆ ಕೂಡ ಮುಗಿದಿದೆ. ಇವಿಎಂ ಸೇರಿದಂತೆ ಮತದಾನ ಪರಿಕರಗಳು ಉಗ್ರಾಣ ಸೇರಿದೆ. ಈಗ ಅಭಿವೃದ್ಧಿ ಕಾರ್ಯಗಳನ್ನು ಭರದಿಂದ ಮಾಡಬೇಕಿದೆ. ಈ ಮೂಲಕ ಅಭಿವೃದ್ಧಿ ಕಾರ್ಯಗಳಿಗೆ ಚುರುಕು ನೀಡಲಾಗುವುದು. ಚುನಾವಣೆ ಸಂದರ್ಭದಲ್ಲಿ ಕೂಡ ತುರ್ತಾದ ಕೆಲವು ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗಿತ್ತು. ಆದರೆ ಈಗ ಎಲ್ಲಾ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಮುಂದುವರೆಸಲಾಗುವುದು. **–ಡಾ.ಕೆ.ವಿ.ರಾಜೇಂದ್ರ, ಜಿಲ್ಲಾಧಿಕಾರಿ, ಮೈಸೂರು.**

ನೆಪ ಹೇಳದೆ ಕೆಲಸ ಮಾಡಬೇಕು



ಚುನಾವಣಾ ನೀತಿ ಸಂಹಿತೆಯನ್ನು ಚುನಾವಣಾ ಆಯೋಗ ತೆರವು ಮಾಡಿರುವ ಕಾರಣ ಸರ್ಕಾರದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಯಾವುದೇ ನೆಪ ಹೇಳದೆ ಕೆಲಸ ಮಾಡಬೇಕು. ಕಳೆದ ಎರಡು ತಿಂಗಳ ಅವಧಿಯಲ್ಲಿ ಬಹಳಷ್ಟು ಅಭಿವೃದ್ಧಿ ಕೆಲಸಗಳಾಗಿಲ್ಲ. ಇದರಿಂದ ಜನರಿಗೆ ತುಂಬಾ ತೊಂದರೆಯಾಗಿದೆ. ಈಗ ಅಧಿಕಾರಿಗಳು ಯಾವುದೇ ನೆಪ ಹೇಳದೆ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಬೇಕು. **– ಟಿ.ಎಸ್.ಶ್ರೀವತ್ಸ, ಶಾಸಕ, ಕೃಷ್ಣರಾಜ ಕ್ಷೇತ್ರ**

ಡಾ.ಬೆಸಗರಹಳ್ಳಿ ರಾಮಣ್ಣ ರೋಗಗ್ರಸ್ಥ ಸಮಾಜದ ಚಿಕಿತ್ಸಕರಾಗಿದ್ದರು

ಸಂಸ್ಕೃತಿ ಚಿಂತಕ ಕೋಟಿಗಾನಹಳ್ಳಿ ರಾಮಯ್ಯ ಅಭಿಮತ



ಸ್ವಾಮಿ ಪೊನ್ನಾಚಿ ಅವರಿಗೆ 2023ನೇ ಸಾಲಿನ ಡಾ.ಬೆಸಗರಹಳ್ಳಿ ರಾಮಣ್ಣ ಕಥಾ ಸಂಕಲನ ಪ್ರಶಸ್ತಿ ಪ್ರದಾನ ಮಾಡಿ ಅಭಿನಂದಿಸುತ್ತಿರುವುದು

ಮಂಡ್ಯ, ಜೂ.9– ಮೋಡದ ಮರೆಯ ತಾರೆಯಂತಿದ್ದ ಡಾ.ಬೆಸಗರಹಳ್ಳಿ ರಾಮಣ್ಣ ಅವರು ತಮ್ಮ ಕಥೆಗಳ ಮೂಲಕ ಗ್ರಾಮೀಣ ಭಾರತದ ದಟ್ಟ ಜಗತ್ತನ್ನು ಹೊರತಂದ ಪ್ರಮುಖ ಲೇಖಕರಾಗಿದ್ದರು ಎಂದು ಸಂಸ್ಕೃತಿ ಚಿಂತಕ ಮತ್ತು ಸಂಘಟಕರಾದ ಕೋಟಿಗಾನ ಹಳ್ಳಿ ರಾಮಯ್ಯ ಅಭಿಪ್ರಾಯಿಸಿದರು.

ಭಾನುವಾರ ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಡಾ.ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನದ ವತಿಯಿಂದ 2023 ನೇ ಸಾಲಿನ ಡಾ.ಬೆಸಗರಹಳ್ಳಿ ರಾಮಣ್ಣ ಕಥಾ ಸಂಕಲನ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಒರೆಗಲ್ಲು ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದರು.

ರಾಮಣ್ಣ ಹಾಗೂ ಮೈಸೂರಿನ ಆಲನ ಹಳ್ಳಿ ಕೃಷ್ಣ ಅವರುಗಳು ತಮ್ಮ ಸಾಹಿತ್ಯದಲ್ಲಿ ಗ್ರಾಮೀಣ ಸೊಗಡನ್ನು ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದ್ದಾರೆ. ಅವರುಗಳು ನಿಜಕ್ಕೂ ಕನ್ನಡದ ಪ್ರೇಮಚಂದಿರರಂತೆ ಕಂಡುಬರುತ್ತಾರೆ. ಡಾ.ಬೆಸಗರಹಳ್ಳಿ ರಾಮಣ್ಣ ರಚಿಸಿರುವ ಸುಮಾರು 56 ಕಥೆಗಳೂ ಕೂಡ ತಾಯ್ತನದ ಭಾವದಿಂದ ಕೂಡಿರುವುದನ್ನು ಕಾಣಬಹುದು. ಸ್ವತಃ ವೈದ್ಯರಾಗಿದ್ದ ರಾಮಣ್ಣ ಅವರು ರೋಗಗ್ರಸ್ಥ ಸಮಾಜದ ಚಿಕಿತ್ಸಕರಾಗಿ ಸಾಹಿತ್ಯದ ಶಸ್ತ್ರ ಹಿಡಿದು ನಿಂತಿದ್ದರಿಂದ ತಮ್ಮ ಸಾತ್ವಿಕ ಸಿಟ್ಟಿನ ಮೂಲಕ ಅವ್ಯವಸ್ಥೆಯ ವಿರುದ್ಧ ಗುಡುಗುತ್ತಿದ್ದರು. ಹಾಗಾಗಿಯೇ ಅವರ ಎಲ್ಲ ಕಥೆಗಳಲ್ಲೂ ನೆಲದ ಘಮಲು ತುಂಬಿರುತ್ತಿತ್ತು ಎಂದು ಬಣ್ಣಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಡಾ.ಬೆಸಗರಹಳ್ಳಿರಾಮಣ್ಣ ಪುತ್ರ, ಐಪಿಎಸ್ ಅಧಿಕಾರಿ ರವಿಕಾಂತೇಗೌಡ, ನಮ್ಮ ತಂದೆ ತೀರಿಕೊಂಡಾಗ ಅವರಿಗೆ 59 ವರ್ಷ. ಅವರು ಯಾವ ಮೌಲ್ಯಗಳನ್ನು ಪ್ರತಿಪಾದಿಸಿದ್ದರೊ, ಅದರಂತೆಯೇ ಬದುಕಿದ್ದವರು. ಅವರ ನೆನಪಿನಲ್ಲಿ ಪ್ರತಿಷ್ಠಾನ ಆರಂಭಿಸಿ 2007ರಿಂದ ರಾಮಣ್ಣನವರ ಆಶಯದಂತೆ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರಲಾಗಿದೆ. ಪ್ರತಿವರ್ಷ ಕಥೆಗಾರರಿಗೆ ಪ್ರಶಸ್ತಿ ನೀಡುತ್ತ ಬರಲಾಗಿದೆ. ಕುವೆಂಪು ಅವರ ಆಶಯದಂತೆ ಮತ್ತು ರಾಮಣ್ಣನವರ ವಿಚಾರದಂತೆ ಕುಪ್ಪಳ್ಳಿಯಲ್ಲಿ ನವೆಂಬರ್ ತಿಂಗಳಲ್ಲಿ ಮೂರು ದಿನಗಳ ಕಾಲ ವಿಚಾರ ಕಮ್ಮಟವನ್ನು ನಡೆಸಿಕೊಂಡು ಬರುತ್ತಿದ್ದೇವೆ. ಸಾಹಿತಿಗಳು ಸಂಕಷ್ಟಕ್ಕೆ ಸಿಲುಕಿದ ಸಂದರ್ಭದಲ್ಲಿ ಪ್ರತಿಷ್ಠಾನದಿಂದ ನೆರವು ನೀಡುವುದು, ಇದುವರೆಗಿನ 16 ಪ್ರಶಸ್ತಿಗಳಲ್ಲಿ ಐವರು ಮಹಿಳೆಯರಿಗೆ ಪ್ರಶಸ್ತಿ ಸಂದಿರುವುದು ರಾಮಣ್ಣನವರ ಆಶಯಕ್ಕೆ ಪೂರಕವಾಗಿ ನಡೆದಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿಮರ್ಶಕರಾದ ಆರ್. ಸುನಂದಮ್ಮ ಅವರು ಪ್ರಶಸ್ತಿ ವಿಜೇತ ಕೃತಿ ಕುರಿತು ಮಾತನಾಡಿ, ಈ ವರ್ಷ ಪ್ರಶಸ್ತಿಗೆ ಕೃತಿ ಆಯ್ಕೆ ಮಾಡಲು ನನಗೆ 10 ಕೃತಿಗಳನ್ನು ನೀಡಲಾಗಿತ್ತು. ಅದರಲ್ಲಿ ಸ್ವಾಮಿ ಪೊನ್ನಾಚಿ ಅವರ 'ದಾರಿ ತಪ್ಪಿಸುವ ಗಿಡ' ಕೃತಿಯನ್ನು ಆಯ್ಕೆ ಮಾಡಲಾಯಿತು ಎಂದರು.

ಬಳಿಕ ದಾರಿ ತಪ್ಪಿಸುವ ಗಿಡ ಕೃತಿಯ ಕೃರ್ತೃ ಸ್ವಾಮಿ ಪೊನ್ನಾಚಿ ಅವರಿಗೆ 2023 ನೇ ಸಾಲಿನ ಡಾ.ಬೆಸಗರಹಳ್ಳಿ ರಾಮಣ್ಣ ಕಥಾ ಸಂಕಲನ ಪ್ರಶಸ್ತಿ ಪ್ರದಾನ ಮಾಡಿ, 25 ಸಾವಿರ ರೂ. ನಗದು ಪುರಸ್ಕಾರದೊಂದಿಗೆ ಪ್ರೊ.ಕಾಳೇಗೌಡ ನಾಗವಾರ ಅಭಿನಂದಿಸಿದರು. ಅಲ್ಲದೆ, ಡಾ.ಬೆಸಗರಹಳ್ಳಿ ರಾಮಣ್ಣ ಅವರ ಅಂಕಣ ಬರಹಗಳ ಸಂಕಲನದ ಮರುಮುದ್ರಣವಾದ 'ಒರೆಗಲ್ಲು' ಕೃತಿ ಬಿಡುಗಡೆಗೊಳಿಸಲಾಯಿತು.

ವೇದಿಕೆಯಲ್ಲಿ ಪ್ರತಿಷ್ಠಾನದ ಅಧ್ಯಕ್ಷ ಎಚ್.ಆರ್.ಸುಜಾತಾ, ಲೇಖಕ ಸ್ವಾಮಿ ಪೊನ್ನಾಚಿ, ಪ್ರತಿಷ್ಠಾನದ ಆಜೀವ ಸದಸ್ಯರಾದ ಡಿ.ಪಿ. ರಾಜಮ್ಮ ರಾಮಣ್ಣ ಉಪಸ್ಥಿತರಿದ್ದರು.

ಕೇಂದ್ರ ಸಚಿವರಾಗಿ ಹೆಚ್.ಡಿ.ಕುಮಾರಸ್ವಾಮಿ ಪ್ರಮಾಣ

ಮಂಡ್ಯ ಜಿಲ್ಲಾದ್ಯಂತ ಸಂಭ್ರಮಾಚರಣೆ

ಬೃಹತ್ ಪರದೆಯಲ್ಲಿ ಕಾರ್ಯಕ್ರಮ ವೀಕ್ಷಿಸಿದ ಕಾರ್ಯಕರ್ತರು



ಮಂಡ್ಯ: ಮಂಡ್ಯ ಲೋಕಸಭಾ ಕ್ಷೇತ್ರದ ಸಂಸದ ಹೆಚ್.ಡಿ.ಕುಮಾರಸ್ವಾಮಿ ಕೇಂದ್ರ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ ಹಿನ್ನೆಲೆಯಲ್ಲಿ ಮಂಡ್ಯ ಜಿಲ್ಲೆಯ ವಿವಿಧೆಡೆ ಸಂಭ್ರಮಾಚರಣೆ ನಡೆಸಲಾಯಿತು.

ಪಾಂಡವಪುರ ತಾಲೂಕಿನ ಚಿನಕುರಳಿ ಗ್ರಾಮದಲ್ಲಿ ಮಂಡ್ಯ ಸಂಸದ ಹೆಚ್.ಡಿ. ಕುಮಾರಸ್ವಾಮಿ ಕೇಂದ್ರ ಸಚಿವರಾಗುವುದನ್ನು ಬೃಹತ್ ಪರದೆ ಅಳವಡಿಸಿ ಗ್ರಾಮಸ್ಥರು ವೀಕ್ಷಿಸಿದರು. ಅಲ್ಲದೇ ಕುಮಾರಸ್ವಾಮಿ ಪರ ಘೋಷಣೆ ಕೂಗಿ ಸಂಭ್ರಮಿಸಿದರು.

ಮಂಡ್ಯ ನಗರದ ಕೆಲ ಹೋಟೆಲ್‌ಗಳಲ್ಲಿ ಬೃಹತ್ ಪರದೆ ಅಳವಡಿಸಿ ಪ್ರಮಾಣವಚನ ಕಾರ್ಯಕ್ರಮ ವೀಕ್ಷಿಸಿದರೆ, ಕುಮಾರಸ್ವಾಮಿ ಪ್ರಮಾಣ ವಚನ ಸ್ವೀಕರಿಸುವ ಸಂದರ್ಭದಲ್ಲಿ ಹಲವೆಡೆ ಪಟಾಕಿ ಸಿಡಿಸಿ ಸಂಭ್ರಮಿಸಲಾಯಿತು.

ಕೆ.ಆರ್.ಪೇಟೆ, ನಾಗಮಂಗಲ, ಮದ್ದೂರು, ಶ್ರೀರಂಗಪಟ್ಟಣದ ಹಲವೆಡೆ ಪಟಾಕಿ ಸಿಡಿಸಿ ಕುಮಾರಸ್ವಾಮಿ ಪರ ಜೈಕಾರ ಕೂಗಲಾಯಿತು. ಕುಮಾರಸ್ವಾಮಿಗೆ ಕೃಷಿ ಖಾತೆ ಸಿಕ್ಕಿ ಮಂಡ್ಯ ಜಿಲ್ಲೆ ಸೇರಿದಂತೆ ರಾಜ್ಯದ ರೈತರಿಗೆ ಒಳಿತಾಗಲಿ ಎಂದು ಕಾರ್ಯಕರ್ತರು ಆಶಿಸಿದರು.

ಕರವೇ ನಾರಾಯಣಗೌಡ ಹುಟ್ಟುಹಬ್ಬ ಆಚರಣೆ



ಶ್ರೀರಂಗಪಟ್ಟಣ, ಜೂ.9– ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ನಾರಾಯಣಗೌಡ ಹುಟ್ಟುಹಬ್ಬ ಹಿನ್ನೆಲೆ ಶ್ರೀರಂಗಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು ಹಂಪಲುಗಳನ್ನು ಕರವೇ ತಾಲೂಕು ಅಧ್ಯಕ್ಷ ಜಿ.ಜಿ. ಹರೀಶ್‌ಗೌಡ ನೇತೃತ್ವದಲ್ಲಿ ಕಾರ್ಯಕರ್ತರು ವಿತರಿಸಿದರು.

ನಂತರ ಮಾತನಾಡಿದ ಅವರು ಕರ್ನಾಟಕದಲ್ಲಿ ಕನ್ನಡಿಗರ ಯಾವಾಗಲೇ ಅನ್ಯಾಯವಾದರು ಮೊದಲು ಕನ್ನಡಿಗರ ಪರವಾಗಿ ಧ್ವನಿ ಎತ್ತುವ ಮೊದಲ ನಾಯಕನೆಂದರೆ ಅದು ನಾರಾಯಣಗೌಡ ಅವರು. ಹಲವು ಬಾರಿ ಕನ್ನಡಕ್ಕಾಗಿ ಜೈಲಿಗೂ ಹೋಗಿ ಬಂದಿದ್ದಾರೆ. ನಾಡಿನಲ್ಲಿ ಕನ್ನಡದ ಅಳಿವು ಉಳಿವಿಗಾಗಿ ಅವರ ಜೀವನವನ್ನೇ ಮುಡಿಪಾಗಿಟ್ಟಿದ್ದಾರೆ ಆದ್ದರಿಂದ ಇಂದು ಅವರ ಹುಟ್ಟುಹಬ್ಬದ ಹಿನ್ನೆಲೆ ತಾಲೂಕಿನ ಕರವೇ ಕಾರ್ಯಕರ್ತರು ಅವರ ಹುಟ್ಟಿದ ದಿನವನ್ನು ಅರ್ಥಪೂರ್ಣವಾಗಿ ಆಚರಿಸುತ್ತಿದ್ದೇವೆ ಎಂದರು.

ಇದೇ ವೇಳೆ ಆಸ್ಪತ್ರೆ ವೈದ್ಯರಾದ ಡಾ. ಗೌತಮ್ ಶೆಟ್ಟಿ, ಶುಶ್ರೂಷಕಿ ಪುನೀತ ಕುಮಾರಿ, ಕವೇ ಕಾರ್ಯಕರ್ತರಾದ ಅವಿನಾಶ್ ಸಂಜು ಗಣೇಶ್ ಚಂದ್ರು ಕೌಶಿಕ್ ಕಿರಣ್ ಸೇರಿದಂತೆ ಇತರರು ಇದ್ದರು.

ಭತ್ತದ ಇಳುವರಿ ಹೆಚ್ಚಿಸುವ ಕೆಲಸ ಮಾಡಿ

ಕೃಷಿ ನಿರ್ದೇಶಕಿ ಮಮತ ಗವಿಗೌಡ ಮನವಿ



ಮಮತ ಗವಿಗೌಡ ಅಧ್ಯಕ್ಷತೆಯಲ್ಲಿ ಮುಂಗಾರು ಹಂಗಾಮಿನ ಸಿದ್ಧತೆ ಸಭೆ ನಡೆಯಿತು

ಕೆ.ಆರ್.ಪೇಟೆ, ಜೂ.9– ಜಿಲ್ಲೆಯ ಸರಾಸರಿ ಉತ್ಪಾದನೆಗಿಂತ ತಾಲೂಕಿನ ಭತ್ತದ ಉತ್ಪಾದನೆ ಕಡಿಮೆ ಇರುವುದರಿಂದ ಬಿತ್ತನೆ ಬೀಜ ಹಾಗೂ ರಸಗೊಬ್ಬರ ಮಾರಾಟಗಾರರು ತಾಲೂಕಿನಲ್ಲಿ ಭತ್ತದ ಉತ್ಪಾದನೆಯನ್ನು ಹೆಚ್ಚಿಸಬೇಕು ಎಂದು ಪಾಂಡವಪುರ ಉಪವಿಭಾಗದ ಕೃಷಿ ನಿರ್ದೇಶಕಿ ಮಮತ ಗವೀಗೌಡ ಕರೆ ನೀಡಿದರು.

ಪಟ್ಟಣದ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಲ್ಲಿ ಮುಂಗಾರು ಹಂಗಾಮಿನ ಸಿದ್ಧತೆ ಬಗ್ಗೆ ಚರ್ಚಿಸಲು ಆಯೋಜಿಸಿದ್ದ ತಾಲೂಕಿನ ಎಲ್ಲಾ ಅಧಿಕೃತ ಬಿತ್ತನೆ ಬೀಜ, ರಸಗೊಬ್ಬರ ಮತ್ತು ಕೀಟನಾಶಕ ಮಾರಾಟಗಾರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರಸಕ್ತ ಸಾಲಿನಲ್ಲಿ ಮುಂಗಾರು ಆರಂಭವಾಗಿದ್ದು, ತಾಲೂಕಿನಲ್ಲಿ ಕೃಷಿ ಚಟುವಟಿಕೆಗಳು ಚುರುಕುಗೊಂಡಿದೆ. ಈ ಬಾರಿ ಉತ್ತಮ ಮಳೆಯಾಗುವ ನಿರೀಕ್ಷೆ ಇದ್ದು ಎಲ್ಲಾ ಮಾರಾಟಗಾರರು ಉತ್ತಮ ತಳಿಯ ಬಿತ್ತನೆ ಬೀಜಗಳನ್ನು ರೈತರಿಗೆ ವಿತರಿಸಬೇಕು. ತಾಲೂಕಿನಲ್ಲಿ ಪ್ರಸ್ತುತ ಖಾಸಗಿ ಮತ್ತು ಸಹಕಾರ ಸಂಘಗಳಲ್ಲಿ 1950 ಮೆಟ್ರಿಕ್ ಟನ್ ಯೂರಿಯಾ ದಾಸ್ತಾನಿದ್ದು, ರಸಗೊಬ್ಬರಕ್ಕೆ ಕೊರತೆಯಾಗದಂತೆ ಕ್ರಮ ವಹಿಸಬೇಕು. ರಸಗೊಬ್ಬರ ಕೃತಕ ಅಭಾವ ಸೃಷ್ಟಿಸುವವರ ವಿರುದ್ಧ ರಸಗೊಬ್ಬರ ನಿಯಂತ್ರಣಾ ಆದೇಶ 1985ರ ಅನ್ವಯ ಕ್ರಮ ಕೈಗೊಳ್ಳಲಾಗುವುದು ಎಂದರು.

ತಾಲೂಕು ಸಹಾಯಕ ಕೃಷಿ ನಿರ್ದೇಶಕ ಹೆಚ್.ಜೆ. ಸಂತೋಷ್‌ಕುಮಾರ್ ಮಾತನಾಡಿ, ಎಲ್ಲಾ ಮಾರಾಟಗಾರರು ಎಲ್ಲಾ ಕೃಷಿ ಪರಿಕರಗಳಿಗೆ ಕಡ್ಡಾಯವಾಗಿ ರಸೀದಿ ನೀಡಬೇಕು ಎಂದರು. ಕಾರ್ಯಕ್ರಮದಲ್ಲಿ ಕೃಷಿ ತಾಂತ್ರಿಕ ಅಧಿಕಾರಿ ಶ್ರೀಧರ್, ಕೃಷಿ ಅಧಿಕಾರಿ ಸತೀಶ್‌ಚಂದ್ರು, ಅಭಿಷೇಕ್‌ಗೌಡ ಸೇರಿದಂತೆ ಅಧಿಕಾರಿ ಮತ್ತು ಸಿಬ್ಬಂದಿ ವರ್ಗ ಹಾಗೂ ತಾಲೂಕಿನ ಬಿತ್ತನೆ ಬೀಜ, ರಸಗೊಬ್ಬರ ಮತ್ತು ಕೀಟನಾಶಕ ಮಾರಾಟಗಾರರು ಭಾಗವಹಿಸಿದ್ದರು.

ಆರೋಗ್ಯ ವರ್ಧನೆಗಾಗಿ ಮನೆಯಂಗಳ ವನೌಷಧಿ ತೋಟವಾಗಿರಲಿ

ಆಯುಷ್ ವೈದ್ಯಾಧಿಕಾರಿ ಡಾ.ಚಂದ್ರಶೇಖರ್



ಕಿಕ್ಕೇರಿ: ಜಾಗತಿಕ ಯುಗದಲ್ಲಿ ಆರೋಗ್ಯವರ್ಧನೆಗಾಗಿ ಮನೆಯಂಗಳವನ್ನು ವನೌಷಧಿ ವನವಾಗಿಸಿಕೊಳ್ಳಿ ಎಂದು ಆಯುಷ್ ವೈದ್ಯಾಧಿಕಾರಿ ಡಾ.ಚಂದ್ರಶೇಖರ್ ಹೇಳಿದರು.

ಸಮೀಪದ ಮಂದಗೆರೆ ಸರ್ಕಾರಿ ಆಯುಷ್ ಆರೋಗ್ಯ ಮತ್ತು ಕ್ಷೇಮ ಕೇಂದ್ರದಲ್ಲಿ ಏರ್ಪಡಿಸಿದ್ದ 'ಪರಿಸರ ಜಾಗೃತಿ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಾಯು, ಜಲ, ಪರಿಸರ ಮಾಲಿನ್ಯದಂತಹ ಸಮಸ್ಯೆಗಳು ಮಾನವನ ವಿಕೃತಿ ಅವಘಡದಿಂದ ಆಗುತ್ತಿದೆ. ಇದನ್ನು ತಡೆಗಟ್ಟಲು ಜಾಗೃತರಾಗಬೇಕಿದೆ. ನಮ್ಮ ಆರೋಗ್ಯ ನಮ್ಮ ಅಂಗೈಯಲ್ಲಿದೆ. ಪ್ರಕೃತಿ ಉಳಿಸಿದರೆ ಆರೋಗ್ಯ ಜೊತೆಯಲ್ಲಿರಲಿದೆ ಎಂದರು.

ನಮ್ಮ ಮನೆಯ ಅಂಗಳವನ್ನು ಮೊದಲು ಪ್ರಕೃತಿ ಆರಾಧಕರಾಗಿ ಜೋಪಾನವಾಗಿಡಬೇಕಿದೆ. ಮನೆಯ ಮುಂದೆ ಒಂದು ಮರ ನೆಟ್ಟರೆ, ಮನೆಯ ಅಂಗಳದಲ್ಲಿ ವನೌಷಧಿ ಗಿಡ ನೆಟ್ಟು ಪೋಷಿಸಿ ಬಳಸಿ. ಮರಗಿಡಗಳ ಬೇರು, ಎಲೆ, ಕಾಂಡ ಎಲ್ಲವು ಔಷಧಿ ಗುಣ ಹೊಂದಿದೆ. ಅರಿತು ಬಳಸಿ. ಪ್ರಕೃತಿ ನಾಶದಿಂದ ಜೀವ ಸಂಕುಲಕ್ಕೆ ಅಪಾಯವಿದೆ ಎಂದರು.

ದೇಶಿ ಆಕಳಿನ ತುಪ್ಪ, ಹಾಲು ಆರೋಗ್ಯಕ್ಕೆ ರಾಮಬಾಣ. ಆಕಳು ಬದುಕಲು ಮೇವಿನ ಗಿಡ, ಸಸ್ಯ ಎಂಬ ಜ್ಞಾನ ಬೇಕಿದೆ. ತುಳಸಿ, ಶುಂಠಿ, ಅರಿಷಿನ, ಚಕ್ರಮುನಿಯಂತಹ ಆರೋಗ್ಯಕ್ಕೆ ಪೂರಕವಾದ ಗಿಡ ಬೆಳಸಿ. ಜೀವಸಂಕುಲಕ್ಕೆ ಬೇಕಿರುವ ಪ್ರಾಣಾವಾಯು ಗಿಡಮರಗಳಿಂದ ಮಾತ್ರ ಲಭ್ಯ ಎಂಬುದನ್ನು ಅರಿತು ಬದುಕುವುದನ್ನು ಕಲಿಯಬೇಕಿದೆ ಎಂದು ವನೌಷಧಿ, ಮರಗಿಡಗಳ ಔಷಧಿಗುಣಗಳನ್ನು ವಿವರವಾಗಿ ತಿಳಿಸಿದರು.

ಹಲವು ವನೌಷಧಿ ಸಸ್ಯಗಳ ಮಾಹಿತಿ ನೀಡಿ, ಔಷಧಿ ಸಸ್ಯಗಳನ್ನು ನೀಡಿದರು. ಫಾತಿಮಾ, ದೇವೇಂದ್ರ, ಮಹೇಶ್ ಉಪಸ್ಥಿತರಿದ್ದರು.

ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ



ಮಂಡ್ಯದಲ್ಲಿ ಅಸೋಸಿಯೇಷನ್ ಆಫ್ ಅಲಯನ್ಸ್ ಸಂಸ್ಥೆ ಇಂಟರ್‌ನ್ಯಾಷನಲ್ ಜಿಲ್ಲೆ–268ಎಸ್ ಮತ್ತು ಪ್ರತಿಭಾಂಜಲಿ ಸುಗಮ ಸಂಗೀತ ಅಕಾಡೆಮಿ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ ಮತ್ತು ಗಿಡ ನೆಡು ಮರ ಮಾಡು ಕಾರ್ಯಕ್ರಮಕ್ಕೆ ಅಲಯನ್ಸ್ ಸಂಸ್ಥೆ ಜಿಲ್ಲಾ ರಾಜ್ಯಪಾಲ ಕೆ.ಟಿ.ಹನುಮಂತು ಚಾಲನೆ ನೀಡಿದರು.

ನೂತನ ಕೇಂದ್ರ ಸಚಿವರಿವರು

ಕ್ಯಾಬಿನೆಟ್ ದರ್ಜೆ ಸಚಿವರು

ರಾಜನಾಥ ಸಿಂಗ್
ಅಮಿತ್ ಷಾ
ನಿತಿನ್ ಗಡ್ಕರಿ
ಜೆ.ಪಿ. ನಡ್ಡಾ
ಶಿವರಾಜ್ ಸಿಂಗ್ ಚವಾಣ್
ನಿರ್ಮಲಾ ಸೀತಾಮನ್
ಎಸ್.ಜೈಶಂಕರ್
ಮನೋಹರ್ ಲಾಲ್ ಕಟ್ಟರ್
ಹೆಚ್.ಡಿ. ಕುಮಾರಸ್ವಾಮಿ
ಪಿಯೂಷ್ ಗೋಯಲ್
ಧರ್ಮೇಂದ್ರ ಪ್ರಧಾನ್
ಜಿತನ್ ರಾಮ್ ಮಾಂಝಿ
ರಾಜೀವ್ ರಂಜನ್ ಸಿಂಗ್
ಸರ್ಬಾನಂದ ಸೋನಾವಾಲ್
ಬೀರೇಂದ್ರಕುಮಾರ್
ರಾಮ್‌ಮೋಹನ್ ನಾಯ್ಡು
ಪ್ರಹ್ಲಾದ್ ಜೋಶಿ
ಜುಯೆಲ್ ಓರಮ್
ಗಿರಿರಾಜ್ ಸಿಂಗ್
ಅಶ್ವಿನ್ ವೈಷ್ಣವ್
ಜ್ಯೋತಿರಾಧಿತ್ಯ ಸಿಂಧ್ಯಾ
ಭೂಪೇಂದರ್ ಯಾದವ್
ಗಜೇಂದ್ರ ಸಿಂಗ್ ಶೇಖಾವತ್
ಅನ್ನಪೂರ್ಣಾದೇವಿ
ಕಿರಣ್ ರಿಜೀಜು
ಹರ್‌ದೀಪ್‌ಸಿಂಗ್ ಪುರಿ
ಮನ್ಸುಕ್ ಮಾಂಡವ್ಯ
ಜಿ. ಕಿಷನ್ ರೆಡ್ಡಿ
ಚಿರಾಗ್ ಪಾಸ್ವಾನ್
ಸಿ.ಆರ್. ಪಾಟೀಲ್

ಸ್ವತಂತ್ರ ನಿರ್ವಹಣೆ ಸಚಿವರು


ರಾವ್ ಇಂದ್ರಜಿತ್ ಸಿಂಗ್
ಜಿತೇಂದ್ರ ಸಿಂಗ್
ಅರ್ಜುನ್ ರಾಮ್ ಮೇಘಾವಾಲ್
ಪ್ರತಾಪ್‌ರಾವ್ ಗಣಪತ್‌ರಾವ್ ಜಾಧವ್
ಜಯಂತ್ ಚೌಧರಿ

ರಾಜ್ಯ ಸಚಿವರು

ಜಿತಿನ್ ಪ್ರಸಾದ
ಶ್ರೀಪಾದ್ ನಾಯಕ್
ಪಂಕಜ್‌ರಾವ್ ಚೌಧರಿ
ಕೃಷ್ಣಪಾಲ್ ಗುರ್ಜಾರ್
ರಾಮದಾಸ್ ಅಟಾವಲೆ
ರಾಮ್‌ನಾಥ್ ಠಾಕೂರ್
ನಿತ್ಯಾನಂದ ರೈ
ಅನುಪ್ರಿಯಾ ಪಟೇಲ್
ವಿ. ಸೋಮಣ್ಣ
ಚಂದ್ರಶೇಖರ ಭೀಮಸಾನಿ
ಎಸ್.ಪಿ. ಸಿಂಗ್ ಬಘೇಲಾ
ಶೋಭಾ ಕರಂದ್ಲಾಜೆ
ಕೀರ್ತಿವರ್ಧನ್ ಸಿಂಗ್
ಬಿ.ಎಲ್. ವರ್ಮಾ
ಸಾಂತಾನು ಠಾಕೂರ್
ಸುರೇಶ್ ಗೋಪಿ
ಎಲ್. ಮುರುಗನ್
ಅಜಯ್ ಟಮ್ಟಾ
ಬಂಡಿ ಸಂಜಯ್‌ಕುಮಾರ್
ಕಮಲೇಶ್ ಪಾಸ್ವಾನ್
ಭಗೀರಥ್ ಚೌಧರಿ
ಸತೀಶ್‌ಚಂದ್ರ ದುಬೆ
ಸಂಜಯ್ ಸೇಟ್
ರಣವೀತ್ ಸಿಂಗ್ ಬಿಟ್ಟು
ದುರ್ಗಾದಾಸ್ ಯುಕ್ಕಿ
ರಾಕೇಶ್ ಖಡ್ಸೆ
ಸುಖಾಂತ ಮುಜುಂದಾರ್
ಸಾವಿತ್ರಿ ಠಾಕೂರ್
ಟೋಖಾನ್ ಸಾಹು
ರಭೂಷನ್ ಚೌಧರಿ
ಶ್ರೀನಿವಾಸ ವರ್ಮಾ
ಹರೀಶ್ ಮಲ್ಹೋತ್ರ
ನಿಮೂಬೆನ್ ಬಂಭಾನಿಯಾ
ಮುರಳೀಧರ್ ಮೊಹೊಲ್
ಜಾರ್ಜ್ ಕುರಿಯನ್
ಪವಿತ್ರ ಮಾರ್ಗೆರಿಟಾ

ವರಿಷ್ಠರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡುವೆ

ಮೋದಿ ಸಂಪುಟ ಸೇರಿದ ಸೋಮಣ್ಣ



ನವದೆಹಲಿ, ಜೂ.9– ಪಕ್ಷದ ನಾಯಕರ ನಿರೀಕ್ಷೆಗೆ ತಕ್ಕಂತೆ ಪ್ರಾಮಾಣಿಕವಾಗಿ ಕೆಲಸ ಮಾಡುವುದಾಗಿ ತುಮಕೂರು ಸಂಸದ ವಿ.ಸೋಮಣ್ಣ ಹೇಳಿದ್ದಾರೆ. ಇಂಥದ್ದೇ ಖಾತೆ ಬೇಕೆಂಬ ನಿರೀಕ್ಷೆ ಇಲ್ಲ. ಪ್ರಧಾನಿ ಮೋದಿ ನೀಡುವ ಯಾವುದೇ ಖಾತೆಯನ್ನು ನಿರ್ವಹಿಸಲು ಸಿದ್ಧನಿದ್ದೇನೆ. ಸರ್ಕಾರದ ಸವಲತ್ತು ಜನರಿಗೆ ತಲುಪಿಸಲು ಪ್ರಯತ್ನ ಮಾಡುತ್ತೇನೆ ಎಂದಿದ್ದಾರೆ.

ತುಮಕೂರು ಲೋಕಸಭಾ ಕ್ಷೇತ್ರದಿಂದ ಸ್ಪರ್ಧೆಗೆ ಪಕ್ಷ ನನಗೆ ಅವಕಾಶ ನೀಡಿತ್ತು. ಅಲ್ಲಿಂದ ಗೆದ್ದು ಬಂದಿದ್ದೇನೆ. ಪಕ್ಷ ನೀಡಿದ ಹಲವು ಜವಾಬ್ದಾರಿಗಳನ್ನು ನಿರ್ವಹಿಸಿದ್ದೇನೆ. ಅವನ್ನೆಲ್ಲ ಪರಿಗಣಿಸಿ ಸಚಿವ ಸ್ಥಾನದ ಅವಕಾಶ ನೀಡಿದ್ದಾರೆ. ನಮ್ಮ ರಾಷ್ಟ್ರೀಯ ನಾಯಕತ್ವ ಮತ್ತು ತುಮಕೂರು ಜನತೆ, ಜೆಡಿಎಸ್, ಬಿಜೆಪಿ ಕಾರ್ಯಕರ್ತರಿಗೆ ಧನ್ಯವಾದ ಹೇಳುತ್ತೇನೆ ಎಂದಿದ್ದಾರೆ.

ಮೋದಿ ಜೊತೆಗಿನ ಟೀ ಪಾರ್ಟಿ ಬಳಿಕ ಪತ್ರಕರ್ತರ ಜೊತೆ ಮಾತನಾಡಿದ ಅವರು, 45 ವರ್ಷಗಳ ರಾಜಕೀಯ ಅನುಭವ ಬಳಸಿಕೊಂಡು ತನಗೆ ನೀಡಿರುವ ಜವಾಬ್ದಾರಿ ನಿರ್ವಹಣೆಗೆ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ. ಸರ್ಕಾರದ ಸವಲತ್ತು ದೇಶದ ಎಲ್ಲ ಜನರಿಗೆ ಸಮಾನವಾಗಿ ತಲುಪಿಸುವ ಸವಾಲು ನನ್ನ ಮೇಲಿದೆ ಎಂದಿದ್ದಾರೆ.

ಸಕ್ರಿಯ ರಾಜಕಾರಣಕ್ಕೆ ಗುಡ್ ಬೈ ಹೇಳಿದ ರಾಜೀವ್ ಚಂದ್ರಶೇಖರ್



ಹೊಸದಿಲ್ಲಿ: ರಾಜ್ಯಸಭೆಯ ಮಾಜಿ ಸದಸ್ಯರಾದ, ಬಿಜೆಪಿ ನಾಯಕ ರಾಜೀವ್ ಚಂದ್ರಶೇಖರ್ ಅವರು ಸಕ್ರಿಯ ರಾಜಕಾರಣಕ್ಕೆ ಗುಡ್ ಬೈ ಹೇಳಿದ್ದಾರೆ. ಈ ಕುರಿತಂತೆ ಟ್ವೀಟ್ ಮಾಡಿರುವ ಅವರು, ತಮ್ಮ 18 ವರ್ಷಗಳ ರಾಜಕೀಯ ಜೀವನಕ್ಕೆ ವಿದಾಯ ಹೇಳುತ್ತಿರುವುದಾಗಿ ತಿಳಿಸಿದ್ದಾರೆ. ಇನ್ನು ಮುಂದೆ ಅವರು, ಪಾರ್ಟಿಯ ಕಾರ್ಯಕರ್ತನಾಗಿ ಮುಂದುವರಿಯುವುದಾಗಿ ತಿಳಿಸಿದ್ದಾರೆ.

ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ತಿರುವನಂತಪುರದಿಂದ ಸ್ಪರ್ಧಿಸಿದ್ದ ಅವರು, ಕಾಂಗ್ರೆಸ್‌ನ ಶಶಿ ತರೂರ್ ವಿರುದ್ಧ ಸೋಲು ಕಂಡಿದ್ದರು. ಮೋದಿ 2.0 ಸರ್ಕಾರದಲ್ಲಿ ಅವರು ಮಾಹಿತಿ ತಂತ್ರಜ್ಞಾನ ಇಲಾಖೆಯ ಸಹಾಯಕ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು.

ತಮ್ಮ ನಿವೃತ್ತಿಯ ನಿರ್ಧಾರವನ್ನು ಟ್ವಿಟರ್‌ನಲ್ಲಿ ಪ್ರಕಟಿಸಿರುವ ಅವರು, "ನನ್ನ 18 ವರ್ಷಗಳ ರಾಜಕೀಯ ಜೀವನಕ್ಕೆ ಇಂದು ತೆರೆ ಬಿದ್ದಿದೆ. ಅದರಲ್ಲಿ ಮೂರು ವರ್ಷ ನಾನು ಪ್ರಧಾನಿ ನರೇಂದ್ರ ಮೋದಿಯವರ ಸಹಾಯಕನಾಗಿ ಅವರ ಸಂಪುಟದಲ್ಲಿ ಕೆಲಸ ಮಾಡುವಂಥ ಅವಕಾಶ ಸಿಕ್ಕಿತ್ತು. ಇತ್ತೀಚಿಗಿನ ಲೋಕಸಭಾ ಚುನಾವಣೆಯಲ್ಲಿ ನಾನು ತಿರುವಂತಪುರ ಕ್ಷೇತ್ರದಲ್ಲಿ ಸೋಲು ಕಂಡಿದ್ದೇನೆ. ಈ ಸೋಲಿನ ಮೂಲಕ ನಾನು ವಿದಾಯ ಹೇಳುವುದು ನನಗೆ ಇಷ್ಟವಿರಲಿಲ್ಲ. ಆದರೂ, ಇಂದು ನಿವೃತ್ತಿ ಅನಿವಾರ್ಯವಾಗಿದೆ ಎಂದು ಹೇಳಿದ್ದಾರೆ. ನನ್ನ ಇಡೀ ರಾಜಕೀಯ ಜೀವನದಲ್ಲಿ ನಾನು ಯಾರನ್ನು ಭೇಟಿ ಮಾಡಿದ್ದೇನೋ, ಯಾರು ನನಗೆ ಬೆಂಬಲಿಸಿದ್ದಾರೋ ಅವರೆಲ್ಲರಿಗೂ ನಾನು ಧನ್ಯವಾದ ಹೇಳಲು ಇಚ್ಛಿಸುತ್ತೇನೆ. ಅಷ್ಟೇ ಅಲ್ಲದೆ, ನಾನು ಕೇಂದ್ರದಲ್ಲಿ ಸಚಿವನಾಗಿದ್ದಾಗ ನನಗೆ ಅಲ್ಲಿನ ಸಹೋದ್ಯೋಗಿಗಳು ಕೊಟ್ಟಿದ್ದ ಸಹಕಾರವನ್ನೂ ಮರೆಯಲಾರೆ. ಎಲ್ಲರಿಗೂ ಧನ್ಯವಾದ ಎಂದು ಹೇಳಿದ್ದಾರೆ.

ಮಹಾನ್ ವತಿಯಿಂದ ಮೌಂಟ್ ಎವರೆಸ್ಟ್ ಶಿಖರವನ್ನೇರಿದ

ಮೈಸೂರಿನ ಡಾ.ಉಷಾ ಹೆಗಡೆ, ನೀಟ್ ಪ್ರಥಮ ರ್‍ಯಾಂಕ್ ವಿಜೇತ ಅರ್ಜುನ್ ಕಿಶೋರ್‌ಗೆ ಅಭಿನಂದನೆ

ಸಾಧಕರಿಬ್ಬರ ಸಾಧನೆಯ ಪ್ರಶಂಸಿಸಿದ ಕೆಬಿಜಿ



ಮೈಸೂರು ಅಸೋಸಿಯೇಷನ್ ಹಾಫ್ ಹಾಸ್ಪಿಟಲ್ ಅಂಡ್ ನರ್ಸಿಂಗ್ ಹೋಮ್ಸ್(ಮಹಾನ್)ವತಿಯಿಂದ ಮೌಂಟ್ ಎವರೆಸ್ಟ್ ಶಿಖರವನ್ನೇರಿದ ಮೈಸೂರಿನ ಮೊಟ್ಟಮೊದಲ ಮಹಿಳಾ ವೈದ್ಯೆ ಡಾ.ಉಷಾ ಹೆಗಡೆ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. 'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ, ಮಹಾನ್ ಅಧ್ಯಕ್ಷ ಡಾ.ಜಾವೀದ್ ನಹಿಮ್, ಮಹಾನ್ ಮಾಜಿ ಅಧ್ಯಕ್ಷ ಡಾ.ಮಹೇಶ್ ಕುಮಾರ್, ಉಪಾಧ್ಯಕ್ಷರಾದ ಡಾ.ವಿಜಯ್ ಚೆಲುವರಾಜ್, ಡಾ.ರಾಜೀವ್, ಕಾರ್ಯದರ್ಶಿ ಡಾ.ಅಭಿಜಿತ್, ಜಂಟಿ ಕಾರ್ಯದರ್ಶಿ ಡಾ.ಬಸವರಾಜು, ಡಾ.ಅಜಯ್ ಮತ್ತಿತರರಿದ್ದರು.



ನೀಟ್ ಪರೀಕ್ಷೆಯಲ್ಲಿ 720ಕ್ಕೆ 720 ಅಂಕ ಪಡೆದು ತೇರ್ಗಡೆ ಹೊಂದಿದ ಅರ್ಜುನ್ ಕಿಶೋರ್ ಅವರನ್ನು ಇದೇ ಸಮಾರಂಭದಲ್ಲಿ ಅಭಿನಂದಿಸಲಾಯಿತು.

ಮೈಸೂರು, ಜೂ.9(ಎಂಕೆ)– ಮೈಸೂರು ಅಸೋಸಿಯೇಷನ್ ಆಫ್ ಹಾಸ್ಪಿಟಲ್ ಅಂಡ್ ನರ್ಸಿಂಗ್ ಹೋಮ್ಸ್ (ಮಹಾನ್)ವತಿಯಿಂದ ಮೌಂಟ್ ಎವರೆಸ್ಟ್ ಶಿಖರವನ್ನೇರಿದ ಮೈಸೂರಿನ ಮೊಟ್ಟಮೊದಲ ಮಹಿಳಾ ವೈದ್ಯರಾದ ಡಾ.ಉಷಾ ಹೆಗಡೆ ಹಾಗೂ ನೀಟ್ ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್ ಪಡೆದ ಡಾ.ರಶ್ಮಿ ಕಿಶೋರ್ ಮತ್ತು ಡಾ.ಕಿಶೋರ್ ಅವರ ಪುತ್ರ ಅರ್ಜುನ್ ಕಿಶೋರ್ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ಮೈಸೂರಿನ ಶ್ರೀ ಕಂಠೀರವ ನರಸಿಂಹರಾಜ ಸ್ಪೋರ್ಟ್ಸ್ ಕ್ಲಬ್(ಮೈಸೂರು ಸ್ಪೋರ್ಟ್ಸ್ ಕ್ಲಬ್)ನಲ್ಲಿ ಭಾನುವಾರ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ (ಕೆಬಿಜಿ), ಮೌಂಟ್ ಎವರೆಸ್ಟ್ ಪರ್ವತಾರೋಹಿಯೂ ಆದ ಡಾ.ಉಷಾ ಹೆಗಡೆ ಹಾಗೂ ನೀಟ್‌ನಲ್ಲಿ ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿ ಅರ್ಜುನ್ ಕಿಶೋರ್ ಅವರನ್ನು ಅಭಿನಂದಿಸಿದರು.

ಬಳಿಕ ಮಾತನಾಡಿದ ಅವರು, ಮಹಿಳಾ ಸಮುದಾಯಕ್ಕೆ ಡಾ.ಉಷಾ ಹೆಗಡೆ ಸ್ಫೂರ್ತಿ ಹಾಗೂ ಪ್ರೇರಣೆಯಾಗಿದ್ದಾರೆ. ಜಗತ್ತಿನ ಅತೀ ಎತ್ತರ ಮತ್ತು ಕ್ಲಿಷ್ಟಕರವಾದ ಮೌಂಟ್ ಎವರೆಸ್ಟ್ ಶಿಖರವನ್ನೇರಿ, ಜಗತ್ತಿನ ತುತ್ತ ತುದಿಯಲ್ಲಿ ದೇಶದ ರಾಷ್ಟ್ರಧ್ವಜ ಹಾರಿಸುವ ಮೂಲಕ ದೇಶಾಭಿಮಾನವನ್ನು ಮೆರೆದಿದ್ದಾರೆ. ಅವರೊಂದು ದಂತಕಥೆಯೇ ಆಗಿದ್ದಾರೆ. ಕಳೆದ 10–15 ವರ್ಷದಲ್ಲಿ ನಮ್ಮ ದೇಶದಲ್ಲಿ ಸಾಕಷ್ಟು ಮಹಿಳೆಯರು, ಪುರುಷರೊಂದಿಗೆ ಸ್ಪರ್ಧಿಸುವ ಪ್ರಯತ್ನ ಮಾಡುವುದರ ಜೊತೆಗೆ ಸಾಧಿಸುವ ಮನೋಭಾವ ಬೆಳೆಸಿಕೊಳ್ಳುತ್ತಿದ್ದಾರೆ. ಪ್ರತಿಯೊಬ್ಬ ಯಶಸ್ವಿ ಪುರುಷನ ಹಿಂದೆ ಒಬ್ಬ ಮಹಿಳೆ ಇದ್ದಾಳೆ ಎಂದು ಮೊದಲು ಹೇಳಲಾಗುತ್ತಿತ್ತು. ಅದರಂತೆ ಮಹಿಳೆಯ ಸಾಧನೆಯ ಹಿಂದೆಯೂ ಪುರುಷ ಇರುತ್ತಾನೆ ಎಂಬುದಕ್ಕೆ ಡಾ.ಉಷಾ ಹೆಗಡೆ ಅವರ ಸಾಧನೆ ಸ್ಪಷ್ಟ ನಿದರ್ಶನವಾಗಿದೆ. ಮ್ಯಾರಥಾನ್ ಪಟುವಾಗಿ, ಸ್ಕೈಕ್ಲಿಂಗ್ ಪಟುವಾಗಿ, ಪರ್ವತಾರೋಹಿಯಾಗಿ ಸಾಧಕರಾಗಿರುವ ಡಾ.ಉಷಾ ಹೆಗಡೆ ಅವರ ಮಾರ್ಗದರ್ಶನ ಮತ್ತು ಪ್ರೋತ್ಸಾಹ ಸಾಹಸ ಕ್ರೀಡೆಯಲ್ಲಿ ತೊಡಗಿಸಿಕೊಂಡಿರುವವರಿಗೆ ಅವಶ್ಯವಾಗಿದೆ ಎಂದು ಶ್ಲಾಘಿಸಿದರು.

ಹಾಗೆಯೇ ನೀಟ್ ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿ ಅರ್ಜುನ್ ಕಿಶೋರ್, ಅದ್ಭುತ ಶೈಕ್ಷಣಿಕ ಸಾಧನೆಯನ್ನು ಮಾಡಿದ್ದಾರೆ. ಅದರಲ್ಲಿ ಯಾವುದೇ ಮಾತಿಲ್ಲ. ದೈಹಿಕ ಶಕ್ತಿ ಹೆಚ್ಚಿಸಲು ಸಾಕಷ್ಟು ಜಿಮ್ ಸೇರಿದಂತೆ ಹಲವು ವಿಧಾನಗಳಿವೆ. ಆದರೆ ಅತೀ ಮುಖ್ಯವಾದ ಬೌದ್ಧಿಕ ಶಕ್ತಿ ಸಂಪಾದನೆ ಮಾಡುವುದು ಬಹಳ ಕಷ್ಟ, ಸ್ವಾಮಿ ವಿವೇಕಾನಂದರು ಹೇಳುವಂತೆ ಜ್ಞಾನವೇ ಶಕ್ತಿ. ಒಮ್ಮೆ ಜ್ಞಾನವನ್ನು ಪಡೆದರೆ ಜೀವನ ಪರ್ಯಂತ ನಿಮ್ಮನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ ಎಂದಿದ್ದಾರೆ. ಅದರಂತೆ ಅರ್ಜುನ್ ಭವಿಷ್ಯಕ್ಕೆ ಸಾಕಷ್ಟು ಬಾಗಿಲುಗಳು ತೆರೆದಿವೆ. ಆದರೆ ಜ್ಞಾನ ಸಂಪಾದನೆಗೆ ಸೂಕ್ತ ಅಧ್ಯಯನದ ಆಯ್ಕೆ ಮಾಡಿಕೊಳ್ಳುವುದು ಮುಖ್ಯವಾಗಿದೆ. ಅರ್ಜುನ್‌ಗೆ ಎಲ್ಲಾ ವೈದ್ಯರ ಪ್ರೋತ್ಸಾಹ ಇರಲಿದ್ದು, ಆರೋಗ್ಯಕರ ದೇಶದ ನಿರ್ಮಾಣಕ್ಕೆ ಕೊಡುಗೆ ನೀಡುವಂತಾಗಲಿ ಎಂದು ಹಾರೈಸಿದರು.

ಇದಕ್ಕೂ ಮುನ್ನ ಪ್ರಾಸ್ತಾವಿಕವಾಗಿ ಮಾತನಾಡಿದ ಮಹಾನ್ ಅಧ್ಯಕ್ಷ ಡಾ. ಜಾವೀದ್ ನಹಿಮ್, ಸಾಧನೆ ಇತರರಿಗೆ ಪ್ರೇರಣೆಯಾಗಲಿ ಎಂಬ ಉದ್ದೇಶದಿಂದ ಮೌಂಟ್ ಎವರೆಸ್ಟ್ ಶಿಖರವನ್ನೇರುವ ಮೂಲಕ ಸಾಧಕ ಮಹಿಳಾ ವೈದ್ಯರಾದ ಡಾ.ಉಷಾ ಹೆಗಡೆ ಹಾಗೂ ನೀಟ್ ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್‌ಗಳಿಸಿದ ಅರ್ಜುನ್ ಕಿಶೋರ್ ಅವರನ್ನು ಮಹಾನ್ ವತಿಯಿಂದ ಅಭಿನಂದಿಸಲಾಗಿದೆ. ಅವರಿಂದ ಮುಂದಿಯೂ ಇನ್ನಷ್ಟು ಸಾಧನೆಗಳಾಗಲಿ ಎಂದು ಆಶಿಸಿದರು.

ಬಳಿಕ ಮೌಂಟ್ ಎವರೆಸ್ಟ್ ಪರ್ವತಾರೋಹಿಯೂ ಆದ ಡಾ.ಉಷಾ ಹೆಗಡೆ, ಮೌಂಟ್ ಎವರೆಸ್ಟ್ ಹತ್ತುವ ಮುನ್ನ ನಡೆಸಿದ ಪೂರ್ವ ತಯಾರಿ, ಪಡೆದ ಮಾರ್ಗದರ್ಶನ, ಮೌಂಟ್ ಎವರೆಸ್ಟ್ ಹತ್ತುವಾಗ ತಮಗಾದ ಅನುಭವ ಹಾಗೂ ಜಗತ್ತಿನ ತುತ್ತ ತುದಿಯನ್ನು ತಲುಪಿದ ಅವಿಸ್ಮರಣೀಯ ಸನ್ನಿವೇಶಗಳನ್ನು ಹಂಚಿಕೊಂಡರು. ಹಾಗೆಯೇ ನೀಟ್‌ನಲ್ಲಿ ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿ ಅರ್ಜುನ್ ಕಿಶೋರ್, ಪರೀಕ್ಷಾ ಪೂರ್ವಸಿದ್ಧತೆ, ಪೋಷಕರ ಪ್ರೋತ್ಸಾಹದ ಜೊತೆಗೆ ರಾಷ್ಟ್ರೀಯ ರಕ್ಷಣಾ ಅಕಾಡೆಮಿಯಲ್ಲಿಯೂ ತರಬೇತಿ ಪಡೆದಿದ್ದು, ಮುಂದೆ ವೈದ್ಯರಾಗಿ ಸೇವೆ ಸಲ್ಲಿಸುವ ಬಯಕೆಯನ್ನು ತಿಳಿಸಿದರು.

ಮಹಾನ್ ಮಾಜಿ ಅಧ್ಯಕ್ಷ ಡಾ.ಮಹೇಶ್ ಕುಮಾರ್, ಉಪಾಧ್ಯಕ್ಷರಾದ ಡಾ.ವಿಜಯ್ ಚೆಲುವರಾಜ್, ಡಾ.ರಾಜೀವ್, ಕಾರ್ಯದರ್ಶಿ ಡಾ.ಅಭಿಜಿತ್, ಜಂಟಿ ಕಾರ್ಯದರ್ಶಿ ಡಾ.ಬಸವರಾಜು ಮತ್ತಿತರರು ಉಪಸ್ಥಿತರಿದ್ದರು.

ವೈದ್ಯರ ಕ್ವಾಟ್ರರ್ಸ್‌ಗಳು ಈಗ ಭೂತ ಬಂಗಲೆಗಳಾಗಿವೆ!





> ಮೈಸೂರಿನ 5 ಸ್ಥಳಗಳಲ್ಲಿ ಸುಮಾರು 110ಕ್ಕೂ ಹೆಚ್ಚು ಕ್ವಾಟ್ರರ್ಸ್‌ಗಳಿವೆ. ವೈದ್ಯರ ವಸತಿ ಗೃಹಗಳು ಹಾಳಾಗಿವೆ. ಜೊತೆಗೆ ಸಿಬ್ಬಂದಿ ವಸತಿಗೃಹಗಳ ನವೀಕರಣ ಕಾರ್ಯವಾಗಬೇಕಿದ್ದು, ಈಗಾಗಲೇ ದುರಸ್ತಿ ಕಾಮಗಾರಿ ಆರಂಭಿಸಲಾಗಿದೆ. ವಸತಿ ಗೃಹಗಳ ನವೀಕರಣ ಕಾಮಗಾರಿಗೆ ಯಾವುದೇ ಅನುದಾನ ಬಂದಿಲ್ಲ. ಹೆಚ್‌ಆರ್‌ಎ ಯಿಂದ ಸಂಗ್ರಹಿಸುವ ಹಣವನ್ನೇ ಬಳಕೆ ಮಾಡಲಾಗುತ್ತಿದೆ. ಎಂಎಂಸಿಆರ್‌ಐನ ಶತಮಾನೋತ್ಸವ ಸಂಭ್ರಮದ ಹೊತ್ತಿನಲ್ಲಿ ಹಾಳಾಗಿರುವ ಎಲ್ಲಾ ವಸತಿ ಗೃಹಗಳ ದುರಸ್ತಿ ಮಾಡಲು ಮುಂದಾಗಿದ್ದೇವೆ.
>
> –ದಾಕ್ಷಾಯಿಣಿ, ಡೀನ್ ಹಾಗೂ ನಿರ್ದೇಶಕರು, ಎಂಎಂಸಿಆರ್‌ಐ









ಮೋಹನ್ ಕಾಯಕ

ಮೈಸೂರು, ಜೂ.9– ಸರ್ಕಾರಿ ವೈದ್ಯರಿಗಿಲ್ಲ ವಸತಿ ಸೌಕರ್ಯ... ಜೀವ ಪೋಷಕರಿಗಿಲ್ಲ ಜೀವ ರಕ್ಷಣೆ... ಆತಂಕದ ನಡುವೆ ದಿನದೂಡುವ ದುಸ್ಥಿತಿ...!

ಶತಮಾನದ ಇತಿಹಾಸವಿರುವ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಅಡಿಯಲ್ಲಿ ಕಾರ್ಯನಿರ್ವಹಿಸುವ ಕೆ.ಆರ್.ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆ, ಪಿಕೆಟಿಬಿ ಆಸ್ಪತ್ರೆ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಟ್ರಾಮಾ ಕೇರ್ ಸೆಂಟರ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು, ವೈದ್ಯಕೀಯ ಸಿಬ್ಬಂದಿ ಹಾಗೂ ಅಧಿಕಾರಿಗಳು ವಸತಿ ಗೃಹಗಳಿಲ್ಲದೇ ಅಲೆದಾಡುವ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ.

ಮೈಸೂರು ಸೇರಿದಂತೆ ಸುತ್ತಮುತ್ತಲಿನ ಜಿಲ್ಲೆಗಳಿಂದಲೂ ಆಗಮಿಸುವ ರೋಗಿಗಳ ಜೀವ ರಕ್ಷಣೆಗೆ ಶ್ರಮಿಸುವ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ವೈದ್ಯಕೀಯ ಸಿಬ್ಬಂದಿ ಹಾಗೂ ಅಧಿಕಾರಿಗಳು ವಸತಿ ಸೌಲಭ್ಯ ವಂಚಿತರಾಗಿದ್ದು, ವಾಸಕ್ಕೆ ಸೂರಿಲ್ಲದೆ ಬಾಡಿಗೆ ಮನೆಯಲ್ಲಿ ವಾಸಿಸುವ ಹಾಗೂ ಮುರುಕಲು ಮನೆಯನ್ನೇ ಅಲ್ಪಮಟ್ಟಿಗೆ ಸರಿಪಡಿಸಿಕೊಂಡು ಆತಂಕದಲ್ಲಿ ದಿನ ದೂಡುವಂತಾಗಿದೆ.

ನೂರು ವರ್ಷಗಳ ಯಶಸ್ವಿ ಸೇವೆ ನೀಡಿರುವ, ನೀಡುತ್ತಿರುವ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಹತ್ತಾರು ವಸತಿ ಗೃಹಗಳು ಪಾಳು ಬಿದ್ದಿದ್ದರೆ, ಬಹುತೇಕ ವಸತಿ ಗೃಹಗಳಿಗೆ ತುರ್ತು ಕಾಯಕಲ್ಪವಾಗಬೇಕಿದೆ. ಅಲ್ಲದೆ ವಾಸವಿರುವ ವಸತಿ ನಿಲಯಗಳಲ್ಲಿ ಕನಿಷ್ಠ ಮೂಲಸೌಕರ್ಯಗಳು ಇಲ್ಲದಿರುವುದು ವೈದ್ಯರು, ವೈದ್ಯಕೀಯ ಸಿಬ್ಬಂದಿ ಹಾಗೂ ಅಧಿಕಾರಿಗಳನ್ನು ಹೈರಾಣಾಗಿಸಿದೆ. ದಾಸಪ್ಪ ವೃತ್ತದ ಸಮೀಪದಲ್ಲಿರುವ ಗುರು ರೆಸಿಡೆನ್ಸಿ ಪಕ್ಕದಲ್ಲಿರುವ ವೈದ್ಯರ ವಸತಿ ಗೃಹಗಳು, ಗೋಕುಲಂ ಹಾಗೂ ಪಿಕೆಟಿಬಿ ಆಸ್ಪತ್ರೆ ಎದುರಲ್ಲಿ (ಕೆಆರ್‌ಎಸ್ ರಸ್ತೆ) ಹಾಗೂ ಮೆಡಿಕಲ್ ಕಾಲೇಜು ಆವರಣ ಸೇರಿ ನಗರದ ಐದು ಸ್ಥಳಗಳಲ್ಲಿ ಸುಮಾರು 110ಕ್ಕೂ ಹೆಚ್ಚು ವಸತಿ ಗೃಹಗಳಿದ್ದು, ಬಹುತೇಕ ವಸತಿ ಗೃಹಗಳನ್ನು ದುರಸ್ತಿ ಮಾಡಲೇಬೇಕಾದ ಅನಿವಾರ್ಯತೆ ಇದೆ.

ಗೋಕುಲಂನಲ್ಲಿರುವ ವಸತಿ ಗೃಹಗಳಲ್ಲಿ ಸುಮಾರು 10ಕ್ಕೂ ಹೆಚ್ಚು ಕ್ವಾಟ್ರರ್ಸ್‌ಗಳು ಪಾಳು ಬಿದ್ದಂತಿದ್ದು, ಒಂದಂತೂ ಹಲವು ದಿನಗಳಿಂದ ಬಳಸದೆ ಪಾಳು ಬಿದ್ದಿದೆ. ಹಾಗೆಯೇ ಕಾಲೇಜು ಆವರಣ, ಪಿಕೆಟಿಬಿ ಆಸ್ಪತ್ರೆ ಎದುರಿನ ವಸತಿ ಗೃಹಗಳ ನವೀಕರಣವಾಗಬೇಕಿದೆ. ಪಿಕೆಟಿಬಿ ಆಸ್ಪತ್ರೆ ಎದುರು ಎಂಎಂಸಿಆರ್‌ಐನ ಉನ್ನತ ಅಧಿಕಾರಿಗಳು ಅಥವಾ ಮೆಡಿಕಲ್ ಸೂಪರಿಂಟೆಂಡೆಂಟ್‌ಗಳಿಗೆ ನೀಡುವ ವಸತಿ ಗೃಹವೊಂದು ಹಲವು ವರ್ಷಗಳಿಂದಲೇ ಪಾಳು ಬಿದ್ದಿದ್ದು, ಇದರ ಸುತ್ತಲೂ ಗಿಡ–ಗಂಟಿಗಳು ಬೆಳೆದು ನಿಂತಿವೆ. ಅಲ್ಲದೆ ಕಾಂಪೌಂಡ್ ಗೋಡೆ ಕುಸಿದು ಬಿದ್ದಿದೆ.

ನೀರವ ಮೌನ: ಗುರು ರೆಸಿಡೆನ್ಸಿ ಪಕ್ಕದಲ್ಲಿರುವ ವೈದ್ಯರ 12 ವಸತಿ ಗೃಹಗಳ ಸಂಕೀರ್ಣ ಕಟ್ಟಡ ಶಿಥಿಲಗೊಂಡಿದ್ದು, ಯಾರೊಬ್ಬರೂ ಇಲ್ಲಿ ವಾಸವಾಗಿಲ್ಲ. ಗಿಡ–ಗಂಟಿಗಳು ಬೆಳೆದು ನಿಂತಿದ್ದು, ಭೂತ ಬಂಗ್ಲೆಯಂತಿದೆ. ಅಲ್ಲದೆ ಗೇಟ್‌ಗೆ ಬೀಗ ಹಾಕಿ ಎಷ್ಟೋ ವರ್ಷಗಳು ಕಳೆದಿರುವಂತಿದೆ.

ನಿರಾಶ್ರಿತನಿಗೆ ಆಶ್ರಯ..!: ಪಿಕೆಟಿಬಿ ಆಸ್ಪತ್ರೆ ಎದುರು ಉನ್ನತ ಅಧಿಕಾರಿ, ವೈದ್ಯಕೀಯ ಅಧೀಕ್ಷಕರಿಗೆ ನೀಡುವ ಪಾಳು ಬಿದ್ದ ವಸತಿ ಗೃಹ ನಿರಾಶ್ರಿತರೊಬ್ಬರಿಗೆ ಆಶ್ರಯ ತಾಣವಾಗಿದೆ. ಪಾರ್ಕಿಂಗ್ ಕಟ್ಟಡದ ಹಿಂಭಾಗದಲ್ಲಿರುವ ಸಣ್ಣ ಕೋಣೆಯಲ್ಲಿ ನಿರಾಶ್ರಿತರೊಬ್ಬರು ಕೆಲ ದಿನಗಳಿಂದ ಆಶ್ರಯ ಪಡೆದಿದ್ದಾರೆ. ಎರಡ್ಮೂರು ತಿಂಗಳಿಂದ ಇಲ್ಲಿಯೇ ಇದ್ದೇನೆ ಎಂದು 'ಮೈಸೂರು ಮಿತ್ರ'ನಿಗೆ ಆತ ತಿಳಿಸಿದರು.

ನಾವೇ ರಿಪೇರಿ ಮಾಡಿಸಿಕೊಳ್ಳುತ್ತಿದ್ದೇವು: ವಸತಿ ಗೃಹಗಳು ಸಾಕಷ್ಟು ಹಾಳಾಗಿವೆ. ಹೆಚ್ಚೆಚ್ಚು ಬಾಡಿಗೆ ಕೊಟ್ಟು ವಾಸ ಮಾಡಲು ಕಷ್ಟ. ಹಾಗಾಗಿ ನೀಡಿರುವ ಕ್ವಾಟ್ರರ್ಸ್ ಅನ್ನೇ ಅಲ್ಪ–ಸ್ವಲ್ಪ ರಿಪೇರಿ ಮಾಡಿಸಿಕೊಂಡು ಆತಂಕದಲ್ಲೇ ದಿನ ದೂಡುತ್ತಿದ್ದೇವೆ. ಮಳೆ ಬಂದಾಗ ನೀರು ಸೋರುತ್ತದೆ. ಗೋಡೆಗಳು ಶಿಥಿಲಗೊಂಡಿವೆ. ಕನಿಷ್ಠ ಮೂಲಸೌಕರ್ಯಗಳು ಇಲ್ಲವೆಂದು ಉಳಿದ ವಸತಿ ಗೃಹಗಳಲ್ಲಿ ವಾಸವಿರುವ ಹಲವರು ತಮ್ಮ ಅಳಲು ತೋಡಿಕೊಂಡರು.

ಶತಮಾನೋತ್ಸವದ ಸಂಭ್ರಮದಲ್ಲಿರುವ ಎಂಎಂಸಿಆರ್‌ಐನ ಪಾರಂಪರಿಕ ಕಟ್ಟಡಗಳಾದ ಕೆ.ಆರ್.ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆ ನವೀಕರಣದ ಜೊತೆಗೆ ಹೊಸ ಆಸ್ಪತ್ರೆಗಳ ನಿರ್ಮಾಣವೂ ಆಗುತ್ತಿದೆ. ಇದೇ ವೇಳೆ ವಸತಿ ಗೃಹಗಳ ನವೀಕರಣವೂ ಆಗಬೇಕು ಎಂದು ಕೆಲ ವೈದ್ಯರು, ವೈದ್ಯಕೀಯ ಸಿಬ್ಬಂದಿ ಹಾಗೂ ಅಧಿಕಾರಿಗಳು ಒತ್ತಾಯಿಸಿದ್ದಾರೆ.

ಮೈಸೂರಲ್ಲಿ ವಿಶ್ವ ಆಹಾರ ಸುರಕ್ಷತಾ ದಿನಾಚರಣೆ




ಮೈಸೂರು,ಜೂ.9(ಪಿಎಂ)– ಸುರಕ್ಷಿತ ಮತ್ತು ಗುಣಮಟ್ಟ ಆಹಾರೋದ್ಯಮ ಸಂಬಂಧ ಭಾರತೀಯ ಆಹಾರ ಸುರಕ್ಷೆ ಮತ್ತು ಗುಣಮಟ್ಟ ಪ್ರಾಧಿಕಾರದ (ಎಫ್‌ಎಸ್‌ಎಸ್‌ಎಐ) 'ನೋಂದಣಿ ಮತ್ತು ಪರವಾನಗಿ ಶಿಬಿರ' ಆಯೋಜಿಸುವ ಮೂಲಕ ಇತ್ತೀಚೆಗೆ ಮೈಸೂರಿನಲ್ಲಿ ವಿಶ್ವ ಆಹಾರ ಸುರಕ್ಷತಾ ದಿನವನ್ನು ಆಚರಿಸಲಾಯಿತು.

ಎಫ್‌ಎಸ್‌ಎಸ್‌ಎಐ, ಮೈಸೂರು ಮಹಾನಗರ ಪಾಲಿಕೆ, ಸುವರ್ಣ ಕರ್ನಾಟಕ ಕೆಮಿಸ್ಟ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್ ಅಸೋಸಿಯೇಷನ್ ಸಂಯುಕ್ತಾಶ್ರಯದಲ್ಲಿ ಜೂ.7ರಂದು ನಗರದ ಹೋಟೆಲ್ ಗುರು ರೆಸಿಡೆನ್ಸಿಯಲ್ಲಿ ಕಾರ್ಯಕ್ರಮ ನಡೆಯಿತು.

ಇದೇ ವೇಳೆ ಎಫ್‌ಎಸ್‌ಎಸ್‌ಎಐ ಮೈಸೂರು ನಗರದ ನಿಯೋಜಿತ ಅಧಿಕಾರಿ ಡಾ.ಎಸ್.ಎಲ್.ರವೀಂದ್ರ ಅವರು ಮೂರು ಪರವಾನಗಿಗಳನ್ನು ವಿತರಿಸಿ, ಬಳಿಕ ಪ್ರಾಧಿಕಾರದ ವಿವಿಧ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಕೆಮಿಸ್ಟ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್ ಅಸೋಸಿಯೇಷನ್ ಅಧ್ಯಕ್ಷ ಮಂಜುನಾಥ್, ರಘುಲಾಲ್ ಕಂಪನಿಯ ಮಾಲೀಕರಾದ ಎನ್.ರಾಘವನ್, ಉಪ ಔಷಧ ನಿಯಂತ್ರಣಾಧಿಕಾರಿ ಅರುಣ್, ಪ್ರಾಧಿಕಾರದ ಮೈಸೂರು ಗ್ರಾಮಾಂತರದ ನಿಯೋಜಿತ ಅಧಿಕಾರಿ ಡಾ.ಎ.ಎನ್.ಕಾಂತರಾಜು ಮತ್ತಿತರರು ಹಾಜರಿದ್ದರು.

ನೂತನ ಎಂಎಲ್‌ಸಿ ಡಾ.ಯತೀಂದ್ರರಿಗೆ ಅಭಿನಂದನೆ



ವಿಧಾನಪರಿಷತ್ ನೂತನ ಸದಸ್ಯರಾದ ಡಾ.ಯತೀಂದ್ರ ಅವರನ್ನು ಭಾನುವಾರ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಕೆಪಿಸಿಸಿ ವಕ್ತಾರ ಹಾಗೂ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಪರಾಜಿತ ಅಭ್ಯರ್ಥಿ ಎಂ.ಲಕ್ಷ್ಮಣ, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿ ವಕ್ತಾರ ಕೆ.ಮಹೇಶ್ ಇತರರು ಆತ್ಮೀಯವಾಗಿ ಅಭಿನಂದಿಸಿದರು.

ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎಸ್.ಸೋಮಣ್ಣ ನಿಧನ



ಮೈಸೂರು, ಜೂ.9–ಮೈಸೂರು ಗಾಂಧಿ ವೃತ್ತದ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಹಾಗೂ ದೊಡ್ಡ ಒಕ್ಕಲಗೇರಿ ನಿವಾಸಿ ಎಸ್.ಸೋಮಣ್ಣ(70) ಅವರು ಇಂದು ಬೆಳಿಗ್ಗೆ ನಿಧನರಾದರು. ಸೋಮಣ್ಣ 1989ರಿಂದ 94ರವರೆಗೆ ಮೈಸೂರು ನಗರ ಪಾಲಿಕೆ ಸದಸ್ಯರಾಗಿದ್ದರು. ಅಲ್ಲದೆ 40 ವರ್ಷಗಳಿಂದ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದರು. ಈಗ ಮೂರನೇ ಬಾರಿಗೆ ಬ್ಯಾಂಕ್ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದರು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಪುತ್ರ ಮತ್ತು ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಸಂಜೆ ಚಾಮುಂಡಿಬೆಟ್ಟದ ತಪ್ಪಲಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಉಗ್ರರಿಂದ ಗುಂಡಿನ ದಾಳಿ; ಒಂಬತ್ತು ಮಂದಿ ಸಾವು

ಜಮ್ಮು: ಜಮ್ಮು ಮತ್ತು ಕಾಶ್ಮೀರದ ರಿಯಾಸಿ ಜಿಲ್ಲೆಯಲ್ಲಿ ಭಾನುವಾರ ಸಂಜೆ ಯಾತ್ರಾರ್ಥಿಗಳನ್ನು ಹೊತ್ತೊಯ್ಯುತ್ತಿದ್ದ ಬಸ್ಸಿನ ಮೇಲೆ ಭಯೋತ್ಪಾದಕರು ಗುಂಡಿನ ದಾಳಿ ನಡೆಸಿದ್ದು, ಘಟನೆಯಲ್ಲಿ 9 ಮಂದಿ ಸಾವನ್ನಪ್ಪಿದ್ದಾರೆ ಮತ್ತು 33 ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. 53 ಆಸನಗಳ ಬಸ್, ಶಿವ ಖೋರಿ ದೇವಸ್ಥಾನದಿಂದ ಕತ್ರಾ ಮಾರ್ಗವಾಗಿ ತೆರಳುತ್ತಿದ್ದ ವೇಳೆ ಉಗ್ರರು ಗುಂಡಿನ ದಾಳಿ ನಡೆಸಿದ್ದಾರೆ ಎಂದು ವರದಿಗಳು ತಿಳಿಸಿವೆ.

ಹಣ ವರ್ಗಾವಣೆ ನೆಪದಲ್ಲಿ ವೈದ್ಯರಿಗೆ ಬೆದರಿಸಿ 2.50 ಲಕ್ಷ ಸುಲಿಗೆ

ನಿಮಗೂ ಇಂತಹ ಬೆದರಿಕೆ ಕರೆಗಳು ಬರಬಹುದು ಎಚ್ಚರ...!

ಮೈಸೂರು, ಜೂ.9(ಎಸ್‌ಬಿಡಿ)– ಮನಿ ಲಾಂಡರಿಂಗ್ ಪ್ರಕರಣವೊಂದರಲ್ಲಿ ನಿಮ್ಮ ಬ್ಯಾಂಕ್ ಖಾತೆಯಿಂದ ಹಣ ವರ್ಗಾವಣೆಯಾಗಿದೆ ಎಂದು ಮೈಸೂರಿನ ವೈದ್ಯರೊಬ್ಬರನ್ನು ಬೆದರಿಸಿ, ಪರಿಶೀಲನೆ ನೆಪದಲ್ಲಿ ಅವರಿಂದ 2.5 ಲಕ್ಷ ರೂ. ಲಪಟಾಯಿಸಿರುವುದು ತಡವಾಗಿ ಬೆಳಕಿಗೆ ಬಂದಿದೆ.

ಮೈಸೂರಿನಲ್ಲಿ ನೆಲೆಸಿರುವ ಹಾವೇರಿ ಮೂಲದ ಡಾ.ಪವನ್ ವಂಚನೆಗೊಳಗಾಗಿದ್ದು, ಈ ಬಗ್ಗೆ ಕೃಷ್ಣರಾಜ ಪೊಲೀಸ್ ಠಾಣೆಯಲ್ಲಿ ಶನಿವಾರ ದೂರು ದಾಖಲಿಸಿದ್ದಾರೆ.

ಏಪ್ರಿಲ್ 25ರಂದು ಮಧ್ಯಾಹ್ನ 12.30ಕ್ಕೆ ಡಾ.ಪವನ್‌ಗೆ ಕರೆ ಮಾಡಿದ ವ್ಯಕ್ತಿಯೊಬ್ಬ, ತನ್ನನ್ನು ಟೆಲಿಕಾಂ ಅಥಾರಿಟಿ ಆಫ್ ಇಂಡಿಯಾ ಪ್ರತಿನಿಧಿಯೆಂದು ಪರಿಚಯಿಸಿಕೊಂಡಿದ್ದಾನೆ. ವಿಷಯ ಏನೆಂದು ಕೇಳಿದಾಗ ನಿಮ್ಮ ಆಧಾರ್ ಸಂಖ್ಯೆಯೊಂದಿಗೆ ಬೇರೊಂದು ಮೊಬೈಲ್ ನಂಬರ್ ಲಿಂಕ್ ಆಗಿದ್ದು, ಅದು ಅಕ್ರಮ ಚಟುವಟಿಕೆಗಳಿಗೆ ಬಳಕೆಯಾಗುತ್ತಿದೆ. ಆಧಾರ್ ಸಂಖ್ಯೆ ಆಧಾರದಲ್ಲಿ ನಿಮ್ಮ ಮೇಲೆ ಎಫ್‌ಐಆರ್ ದಾಖಲಿಸಲಾಗಿದ್ದು, ನೀವು ಕೂಡಲೇ ಮುಂಬೈನ ತಿಲಕ್‌ನಗರ ಪೊಲೀಸ್ ಠಾಣೆಗೆ ಭೇಟಿ ನೀಡುವಂತೆ ತಿಳಿಸಿದ್ದಾನೆ.

ಆಗ ಡಾ.ಪವನ್ ಅವರು ನಾನು ವೈದ್ಯನಾಗಿದ್ದು, ತಕ್ಷಣ ಅಲ್ಲಿಗೆ ಬರಲು ಆಗುವುದಿಲ್ಲ ಎಂದಿದ್ದಾರೆ. ಹಾಗಾದರೆ ಪೊಲೀಸ್ ಠಾಣೆಗೆ ಫೋನ್ ಕನೆಕ್ಟ್ ಮಾಡುವುದಾಗಿ ಹೇಳಿ ಮತ್ತೊಬ್ಬರಿಗೆ ಸಂಪರ್ಕ ಕಲ್ಪಿಸಿದ್ದಾನೆ. ಬಳಿಕ ಸಬ್‌ಇನ್ಸ್‌ಪೆಕ್ಟರ್ ದೀಕ್ಷಿತ್ ಹಾಗೂ ಐಪಿಎಸ್ ಅಧಿಕಾರಿ ವಿಶ್ವಾಸ್ ಪಾಟೀಲ್ ಎಂದು ಹೇಳಿಕೊಂಡು ಇಬ್ಬರು ಮಾತನಾಡಿದ್ದಾರೆ. ನಿಮ್ಮ ಕೆನರಾ ಬ್ಯಾಂಕ್ ಅಕೌಂಟ್‌ನಿಂದ 2.5 ಕೋಟಿ ಅಕ್ರಮ ವಹಿವಾಟು ನಡೆದಿದೆ ಎಂದು ಬೆದರಿಸಿದ್ದಾರೆ. ಕೆಲವು ಬ್ಯಾಂಕ್ ಸ್ಟೇಟ್‌ಮೆಂಟ್ ಹಾಗೂ ಎಫ್‌ಐಆರ್ ಮಾದರಿ ಪ್ರತಿಯನ್ನು ವಾಟ್ಸಾಪ್ ಮಾಡಿದ್ದಾನೆ.

ಬಳಿಕ ಏಪ್ರಿಲ್ 27ರಂದು ಬೇರೊಂದು ನಂಬರ್‌ನಿಂದ ವಾಟ್ಸಾಪ್ ಕರೆ ಮಾಡಿ, ಮನಿ ಲಾಂಡರಿಂಗ್ ಕೇಸ್‌ನಲ್ಲಿ ನಿಮ್ಮ ಅಕೌಂಟ್‌ನಿಂದ ಹಣ ವರ್ಗಾವಣೆ ಆಗಿದೆ. ನಿಮ್ಮ ಅಕೌಂಟ್‌ನಲ್ಲಿರುವ ಹಣ ಲೀಗಲ್ ಆಗಿದೆಯೇ ಎಂದು ಪರಿಶೀಲಿಸಬೇಕು. ಇದಕ್ಕಾಗಿ ನಿಮ್ಮ ಅಕೌಂಟ್‌ನಲ್ಲಿರುವ ಹಣವನ್ನು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾಗೆ ಕಳುಹಿಸಬೇಕೆಂಬ ನಿಯಮವಿದೆ ಎಂದು ಆರ್‌ಬಿಐ ಹೆಸರಿನ ನಕಲಿ ಆದೇಶ ಪ್ರತಿಯನ್ನು ವಾಟ್ಸಾಪ್ ಮಾಡಿದ್ದಾನೆ. ನಿಯಮ ಉಲ್ಲಂಘಿಸಿದ ನಿಮಗೆ ಅರೆಸ್ಟ್ ವಾರಂಟ್ ಜಾರಿ ಮಾಡಬೇಕಾಗುತ್ತದೆ ಎಂದು ಮತ್ತಷ್ಟು ಹೆದರಿಸಿದ್ದಾನೆ.

ಇದನ್ನು ನಂಬಿದ ಪವನ್, 50 ಸಾವಿರ ರೂ.ಗಳಂತೆ ಐದು ದಿನ ಒಟ್ಟು 2.5 ಲಕ್ಷ ರೂ.ಗಳನ್ನು ಅವರು ತಿಳಿಸಿದ ಬೇರೆ ಬೇರೆ ಅಕೌಂಟ್‌ಗಳಿಗೆ ಆನ್‌ಲೈನ್ ಮೂಲಕ ವರ್ಗಾವಣೆ ಮಾಡಿದ್ದಾರೆ. ಮೇ 8ರಂದು ಹಾವೇರಿಗೆ ಹೋಗಿದ್ದಾಗ ಅಲ್ಲಿನ ಸೈಬರ್ ಪೊಲೀಸ್ ಸ್ಟೇಷನ್‌ಗೆ ತೆರಳಿ ಈ ಬಗ್ಗೆ ತಿಳಿಸಿದಾಗ ತಾವು ಮೋಸ ಹೋಗಿರುವುದು ತಿಳಿದು ಬಂದಿದೆ. ಕೂಡಲೇ ಆನ್‌ಲೈನ್ ಮೂಲಕ ದೂರು ದಾಖಲಿಸಿ, ನಿನ್ನೆ ಕೃಷ್ಣರಾಜ ಠಾಣೆಗೆ ಲಿಖಿತ ದೂರು ನೀಡಿದ್ದಾರೆ. ಇತ್ತೀಚೆಗೆ ಈ ರೀತಿಯ ಪ್ರಕರಣಗಳು ಹೆಚ್ಚಾಗುತ್ತಿವೆ. ಆಧಾರ್ ಸಂಖ್ಯೆ, ಮೊಬೈಲ್ ಸಂಖ್ಯೆಯನ್ನು ಹೇಗೋ ಸಂಗ್ರಹಿಸಿ ವಂಚನೆ ಮಾಡಲಾಗುತ್ತಿದೆ. ನಕಲಿ ದಾಖಲೆಗಳನ್ನು ಕಳುಹಿಸಿ, ಪೊಲೀಸ್ ಅಧಿಕಾರಿಗಳೆಂದು ನಂಬಿಸಿ ಹಣ ದೋಚಲಾಗುತ್ತಿದೆ. ಯಾರಿಗಾದರೂ ಕರೆ ಮಾಡಿ, ಬೆದರಿಸಿದರೆ ಕೂಡಲೇ ಸಮೀಪದ ಪೊಲೀಸ್ ಠಾಣೆಗೆ ತೆರಳಿ ನೆರವು ಪಡೆಯುವುದು ಸೂಕ್ತ.

ಬಾಮೈದನ ಕೊಂದ ಬಾವನನ್ನು ಬಂಧಿಸಿದ ಪೊಲೀಸರು; ಉಳಿದವರಿಗಾಗಿ ಶೋಧ



ರವಿಚಂದ್ರ

ಮೈಸೂರು, ಜೂ.9(ಎಸ್‌ಬಿಡಿ)– ಬಾಮೈದನನ್ನು ಹತ್ಯೆ ಮಾಡಿದ ರವಿಚಂದ್ರನನ್ನು ಪೊಲೀಸರು ಭಾನುವಾರ ಬಂಧಿಸಿದ್ದು, ನಾಪತ್ತೆಯಾಗಿರುವ ನಾಲ್ವರ ಪತ್ತೆಗೆ ಶೋಧ ಮುಂದುವರೆಸಿದ್ದಾರೆ.

ರಾಮಕೃಷ್ಣನಗರ ಐ ಬ್ಲಾಕ್‌ನಲ್ಲಿ ಶನಿವಾರ ನಡೆದ ಅಭಿಷೇಕ್ ಹತ್ಯೆ ಪ್ರಕರಣದ ಪ್ರಮುಖ ಆರೋಪಿ ರವಿಚಂದ್ರನನ್ನು ಬಂಧಿಸಲಾಗಿದೆ. ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿರುವ ಆತನನ್ನು ಸೋಮವಾರ ಡಿಸ್ಚಾರ್ಜ್ ಮಾಡುವುದಾಗಿ ವೈದ್ಯರು ತಿಳಿಸಿದ್ದು, ನಂತರ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗುವುದು. ತಲೆಮರೆಸಿಕೊಂಡಿರುವ ಕುಮಾರ್, ಶಾರದಾ, ಪದ್ಮಾ ಹಾಗೂ ಕಾರ್ತಿಕ್ ಬಗ್ಗೆ ಸುಳಿವು ಸಿಕ್ಕಿದ್ದು, ಬಂಧಿಸಲು ಕ್ರಮ ವಹಿಸಲಾಗಿದೆ ಎಂದು ಕುವೆಂಪುನಗರ ಠಾಣೆ ಇನ್ಸ್‌ಪೆಕ್ಟರ್ ಯೋಗೀಶ್ ತಿಳಿಸಿದ್ದಾರೆ.

ಗಂಡನ ಮನೆಯವರ ವರದಕ್ಷಿಣೆ ಕಿರುಕುಳದಿಂದ ತೀವ್ರವಾಗಿ ನೊಂದಿದ್ದ ತಂಗಿ ವಿದ್ಯಾ ಅವರನ್ನು ತವರಿಗೆ ಕರೆದೊಯ್ಯಲೆಂದು ಬಂದಿದ್ದ ಕೂರ್ಗಳ್ಳಿಯ ಅಭಿಷೇಕ್‌ನನ್ನು ಭಾವ ರವಿಚಂದ್ರ, ಆತನ ತಮ್ಮ ಕುಮಾರ್, ತಾಯಿ ಶಾರದಾ, ಚಿಕ್ಕಮ್ಮ ಪದ್ಮಾ ಹಾಗೂ ಆಕೆಯ ಮಗ ಕಾರ್ತಿಕ್ ಚಾಕು ಇನ್ನಿತರ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ, ಹತ್ಯೆ ಮಾಡಿದ್ದಲ್ಲದೆ, ಅಭಿಷೇಕ್ ಸ್ನೇಹಿತ ಗೌತಮ್ ಮೇಲೂ ಮಾರಣಾಂತಿಕ ಹಲ್ಲೆ ನಡೆಸಿದ್ದರು. ಗಲಾಟೆಯಲ್ಲಿ ತನಗೂ ಗಾಯವಾಗಿದೆ ಎಂದು ಪ್ರಮುಖ ಆರೋಪಿ ರವಿಚಂದ್ರ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರೆ ಉಳಿದ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ. ವಿದ್ಯಾ ನೀಡಿದ ದೂರಿನ್ವಯ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಕ್ರಮ ಕೈಗೊಂಡಿದ್ದಾರೆ. ಭಾನುವಾರ ಬೆಳಗ್ಗೆ ವೈದ್ಯಕೀಯ ಪರೀಕ್ಷೆ ನಡೆಸಿ ಅಭಿಷೇಕ್ ದೇಹವನ್ನು ವಾರಸುದಾರರಿಗೆ ಒಪ್ಪಿಸಿದ ನಂತರ ಅಂತ್ಯಕ್ರಿಯೆ ನಡೆಸಲಾಯಿತು.

ಕಿವುಡ ಮಕ್ಕಳ ಸರ್ಕಾರಿ ಪಾಠಶಾಲೆಯ ದಾಖಲಾತಿ ಆರಂಭ

ಮೈಸೂರು, ಜೂ.9– 2024–25ನೇ ಶೈಕ್ಷಣಿಕ ಸಾಲಿಗೆ 1ನೇ ತರಗತಿಗೆ 6 ವರ್ಷ ದಿಂದ 9 ವರ್ಷದೊಳಗಿನ ಕಿವುಡ ಬಾಲಕ ಅಥವಾ ಬಾಲಕಿಯರು, ವಿಕಲಚೇತನ ಕಾರಣದಿಂದಾಗಿ ಇದುವರೆಗೂ ಶಾಲೆಗೆ ದಾಖಲಾಗದವರನ್ನು ಹಾಗೂ ಈಗಾಗಲೇ ಇತರೆ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣ ಪಡೆಯುತ್ತಿರುವ ಕಿವುಡ ಗಂಡು ಮಕ್ಕಳ ದಾಖಲಾತಿ ಪ್ರಕ್ರಿಯೆಗೆ ಅರ್ಜಿ ಆಹ್ವಾನಿಸಲಾಗಿದೆ. ಸದರಿ ಶಾಲೆಗೆ ಶ್ರವಣದೋಷವುಳ್ಳ ಮಕ್ಕಳನ್ನು ಸೇರಿಸಲು ಇಚ್ಛಿಸುವ ಪೋಷಕರು ಪ್ರವೇಶದ ಅರ್ಜಿಯನ್ನು ಶಾಲಾ ಕಚೇರಿಯಲ್ಲಿ ಪಡೆಯಬಹುದು. ಮಾಹಿತಿಗಾಗಿ ಕಿವುಡ ಮಕ್ಕಳ ಸರ್ಕಾರಿ ಪಾಠಶಾಲೆಯ ಕಚೇರಿಯ ದೂ.ಸಂ: 0821–2494104, ಅಧೀಕ್ಷಕರ ಮೊ.ಸಂ: 9449010499 ಅನ್ನು ಸಂಪರ್ಕಿಸಬಹುದು.

ಸೋಸಲೆ ಶ್ರೀವಿದ್ಯಾಶ್ರೀಶ ತೀರ್ಥರಿಗೆ ನದಿಗಳ ಪವಿತ್ರ ಜಲದ ಅಭಿಷೇಕ

ಸಹಸ್ರ ಚಂದ್ರ ದರ್ಶನ ಶಾಂತಿ ಹೋಮದ ಪೂರ್ಣಾಹುತಿ



ಮೈಸೂರಿನ ಜೆಪಿ ನಗರದ ವಿಟ್ಠಲಧಾಮದ ಆವರಣದಲ್ಲಿ ಸಹಸ್ರ ಚಂದ್ರ ದರ್ಶನ ಶಾಂತಿ ಅಂಗವಾಗಿ ಸೋಸಲೆ ಶ್ರೀವಿದ್ಯಾಶ್ರೀಶ ತೀರ್ಥರಿಗೆ ವಿವಿಧ ಮಠಾಧೀಶರು ರಾಷ್ಟ್ರದ ಪ್ರಮುಖ ನದಿಗಳ ಪವಿತ್ರ ಜಲದ ಅಭಿಷೇಕವನ್ನು ಭಾನುವಾರ ನೆರವೇರಿಸಿದರು.

ಮೈಸೂರು,ಜೂ.9(ಪಿಎಂ)–ಸೋಸಲೆ ಶ್ರೀ ವ್ಯಾಸರಾಜ ಮಠದ ಪೀಠಾಧಿಪತಿಗಳಾದ ಶ್ರೀ 1008 ಶ್ರೀವಿದ್ಯಾಶ್ರೀಶತೀರ್ಥ ಸ್ವಾಮೀಜಿಯವರ ಸಹಸ್ರ ಚಂದ್ರದರ್ಶನ ಶಾಂತಿ ಮಹೋತ್ಸವ ಪ್ರಯುಕ್ತ ಭಾನುವಾರ ವಿವಿಧ ಕಾರ್ಯಕ್ರಮಗಳು ನಡೆದವು.

ಮೈಸೂರಿನ ಜೆಪಿ ನಗರದ ವಿಟ್ಠಲ ಧಾಮದ ಆವರಣದಲ್ಲಿ ವಿವಿಧ ಮಠಗಳ ಪೀಠಾಧೀಶರಿಂದ ಬೆಳಗ್ಗೆ ಸಂಸ್ಥಾನ ಪೂಜೆ ನೆರವೇರಿತು. 72 ಪ್ರತ್ಯೇಕ ಕುಂಡಗಳಲ್ಲಿ ತಂತ್ರ ಸಾರೋಕ್ತ ಮಂತ್ರಗಳಿಂದ ಹೋಮ, ಸಹಸ್ರ ಚಂದ್ರ ದರ್ಶನ ಶಾಂತಿ ಹೋಮದ ಪೂರ್ಣಾಹುತಿ ನೆರವೇರಿತು.

ಸೋಸಲೆ ಶ್ರೀಗಳ ಸಹಸ್ರ ಚಂದ್ರ ದರ್ಶನ ಶಾಂತಿ ಕಾರ್ಯಕ್ರಮ ಮತ್ತು ಮುತ್ತು ರತ್ನಗಳ ಅಭಿಷೇಕದಲ್ಲಿ ಮಂತ್ರಾಲಯದ ಶ್ರೀ ರಾಘವೇಂದ್ರಸ್ವಾಮಿಗಳ ಮಠದ ಶ್ರೀಸುಬುಧೇಂದ್ರ ತೀರ್ಥರು, ಮುಳಬಾಗಿಲು ಮಠದ ಶ್ರೀಸುಜಯನಿಧಿ ತೀರ್ಥರು, ಬಾಳಗಾರು ಕಿರಿಯ ಶ್ರೀ ರಾಮಪ್ರಿಯ ತೀರ್ಥರು, ಕಣ್ವಮಠದ ಶ್ರೀ ವಿದ್ಯಾಕಣ್ವವಿರಾಜ ತೀರ್ಥರು, ಶ್ರೀ ಅದಮಾರು ಕಿರಿಯ ಶ್ರೀ ಈಶಪ್ರಿಯ ತೀರ್ಥರು ಉಪಸ್ಥಿತರಿದ್ದರು.

ಸಹಸ್ರ ಚಂದ್ರ ದರ್ಶನ ಶಾಂತಿ ಅಂಗವಾಗಿ ಸೋಸಲೆ ಶ್ರೀ ವಿದ್ಯಾಶ್ರೀಶ ತೀರ್ಥರಿಗೆ ವಿವಿಧ ಮಠಾಧೀಶರು ರಾಷ್ಟ್ರದ ಪ್ರಮುಖ ನದಿಗಳ ಪವಿತ್ರ ಜಲದ ಅಭಿಷೇಕವನ್ನು ನೆರವೇರಿಸಿದರು. ಇದೇ ಸಂದರ್ಭ ದೇಶದ ವಿವಿಧ ಪುಣ್ಯ ಕ್ಷೇತ್ರದ ಪ್ರಸಾದ ಮತ್ತು ದೇವರ ವಸ್ತ್ರಗಳನ್ನು ಸೋಸಲೆ ಶ್ರೀಗಳಿಗೆ ಸಮರ್ಪಿಸಲಾಯಿತು. ಸಂಜೆ ನಾದಸ್ವರ, ವಿವಿಧ ವಾದ್ಯಗಳ ಮೇಳ, ವೇದಘೋಷ, ಭಜನೆ ಸಹಿತ ಶ್ರೀ ಸೋಸಲೆ ಶ್ರೀ ವಿದ್ಯಾಶ್ರೀಶ ತೀರ್ಥರಿಗೆ ದರ್ಬಾರ್ ನೆರವೇರಿತು.

ಬಳಿಕ ನಡೆದ ಸಹಸ್ರ ಚಂದ್ರ ದರ್ಶನ ಶಾಂತಿಯ ಸಭಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ವಿಧಾನ ಪರಿಷತ್ ನೂತನ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ತಿ.ನರಸೀಪುರದ ಸೋಸಲೆಯಲ್ಲಿರುವ ವ್ಯಾಸರಾಜ ಮಠವು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪ್ರತಿನಿಧಿಸುವ ವರುಣ ಕ್ಷೇತ್ರಕ್ಕೆ ಹತ್ತಿರಲ್ಲೇ ಇದೆ. ಮಠಕ್ಕೂ ಕ್ಷೇತ್ರದ ನಮ್ಮ ಪಕ್ಷದ ಕಾರ್ಯಕರ್ತರಿಗೂ ಉತ್ತಮ ಒಡನಾಟವಿದೆ. ಮಠದವರು ನಮ್ಮ ಕಾರ್ಯಕರ್ತರು, ನಾಯಕರನ್ನು ಪ್ರೀತಿಯಿಂದ ಕಾಣುತ್ತಾರೆ ಎಂದರು.

ಶೀಘ್ರ ಸಿಎ ನಿವೇಶನ: ಮೈಸೂರಿನಲ್ಲಿ ಒಂದು ಸಿಎ ನಿವೇಶನ ಬೇಕೆಂದು ವ್ಯಾಸರಾಜ ಮಠದಿಂದ ಕೇಳಿದ್ದರು. ನಮ್ಮ ಪಕ್ಷದ ರಮೇಶ್ ಮುದ್ದೇಗೌಡ ಇದನ್ನು ಮಾಡಿಕೊಡಬೇಕೆಂದು ನನ್ನಲ್ಲಿ ಹೇಳಿದ್ದರು. ಮಠಕ್ಕೆ ಕೊಡುವುದರಿಂದ ಸಮಾಜಕ್ಕೆ ಒಳ್ಳೆಯದಾಗಲಿದೆ. ಏಕೆಂದರೆ ಮಠಮಾನ್ಯಗಳು ಸಮಾಜಕ್ಕೆ ಮಾರ್ಗದರ್ಶನ ನೀಡುತ್ತವೆ. ಹಾಗಾಗಿ ಕೂಡಲೇ ಮುಖ್ಯಮಂತ್ರಿಗಳಿಂದ ಪತ್ರ ಹಾಕಿಸಿ, ಮುಡಾ ಆಯುಕ್ತರೊಂದಿಗೂ ದೂರವಾಣಿಯಲ್ಲಿ ಮಾತನಾಡಿ ಸಿಎ ನಿವೇಶನವನ್ನು ವ್ಯಾಸರಾಜ ಮಠಕ್ಕೆ ಕೊಡಲೇಬೇಕೆಂದು ಹೇಳಿದ್ದೆ. ಅದರ ಪ್ರಕ್ರಿಯೆ ಈಗ ಕೊನೆ ಹಂತದಲ್ಲಿದೆ. ಖಂಡಿತ ಸಿಎ ನಿವೇಶನ ಕೊಡಿಸುತ್ತೇನೆ ಎಂದು ಡಾ.ಯತೀಂದ್ರ ಭರವಸೆ ನೀಡಿದರು.

ನಂತರ ಮಾತನಾಡಿದ ನಿರೂಪಕರು, ಜೆಪಿ ನಗರದ ಸಮೀಪದ ಎರಡೂ ಮುಕ್ಕಾಲು ಎಕರೆ ಸಿಎ ನಿವೇಶನದಲ್ಲಿ ವಿದ್ಯಾಪೀಠವನ್ನು ದೊಡ್ಡಮಟ್ಟದಲ್ಲಿ ನಿರ್ಮಾಣ ಮಾಡಬೇಕೆಂಬುದು ಶ್ರೀಗಳ ಉದ್ದೇಶವಾಗಿದೆ ಎಂದು ಇದೇ ವೇಳೆ ಪ್ರಕಟಿಸಿದರು.


ವಿಜಯನಗರ ರಾಜವಂಶಸ್ಥ ಕೃಷ್ಣದೇವರಾಯ ಮಾತನಾಡಿ, ನಮ್ಮ ವಂಶದ ಪ್ರಖ್ಯಾತ ಸಾಮ್ರಾಟ ಕೃಷ್ಣದೇವರಾಯರು ಹಾಕಿಕೊಟ್ಟ ಮಾರ್ಗದಲ್ಲೇ ನಾವು ಗುರು ಪರಂಪರೆಗೆ ಬದ್ಧವಾಗಿ ಇದ್ದೇವೆ ವ್ಯಾಸರಾಜರಿಂದ ಅಂದು ನಮ್ಮ ಕೃಷ್ಣದೇವರಾಯರು ಆಯಸ್ಸು ಪಡೆದರು. ಸಾಮ್ರಾಜ್ಯ ಉಳಿಸಿದರು. ಯತಿಗಳು ಸಿಂಹಾಸನದಲ್ಲಿ ಕುಳಿತು ಸಾಮ್ರಾಟರಾಗಿಯೂ ಜವಾಬ್ದಾರಿ ನಿರ್ವಹಿಸಿದರು. ವ್ಯಾಸರಾಜರೂ ಮತ್ತೆ ಮರಳಿ ಸಂಸ್ಥಾನವನ್ನು ನಮ್ಮ ವಂಶಜರಿಗೇ ನೀಡಿ ತ್ಯಾಗ ಮನೋಭಾವ ಮೆರೆದರು. ಇಂಥ ಯತಿಗಳು ಜಗತ್ತಿನಲ್ಲಿ ಎಲ್ಲೂ ಕಾಣ ಸಿಗರು ಎಂದು ಸ್ಮರಿಸಿದರು.

ವಿವಿಧ ರಂಗದ ಗಣ್ಯರಿಗೆ ಪ್ರಶಸ್ತಿ ಪ್ರದಾನ ನೆರವೇರಿತು. ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಅಸಗೋಡು ಜಯಸಿಂಹ, ಮೈಸೂರು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ವ್ಯಾಸತೀರ್ಥ ವಿದ್ಯಾಪೀಠದ ಗೌರವ ಕಾರ್ಯದರ್ಶಿ ಡಾ.ಡಿ.ಪಿ.ಮಧುಸೂದನಾಚಾರ್ಯ, ಪ್ರಾಂಶುಪಾಲ ಡಾ.ಶ್ರೀನಿಧಿ ಪ್ಯಾಟಿ, ವಿದ್ವಾಂಸ ಮಾತರಿಶ್ವಾಚಾರ್ಯ ಮತ್ತಿತರರು ಹಾಜರಿದ್ದರು.

ಮೈಸೂರು ಮಿತ್ರ ಸೋಮವಾರ 10 ಜೂನ್ 2024

ಬೆಳ್ಳಂಬೆಳಗ್ಗೆ ಹೆದ್ದಾರಿಯಲ್ಲಿ ಕಾಡಾನೆಗಳ ದಾಂಧಲೆ

• ರಸ್ತೆಯಲ್ಲಿ ಮನಸೋಇಚ್ಛೆ ಸಂಚಾರ • ನಿವಾಸಿಗಳು, ವಾಹನ ಸವಾರರಿಗೆ ಆತಂಕ



ಸುಂಟಿಕೊಪ್ಪ, ಜೂ.9–ಇಲ್ಲಿನ 7ನೇ ಹೊಸಕೋಟೆ ರಾಷ್ಟ್ರೀಯ ಹೆದ್ದಾರಿ ಬದಿಯ ಕಾಫಿ ತೋಟದಿಂದ ಭಾನುವಾರ ಬೆಳ್ಳಂಬೆಳಗ್ಗೆ ಹೊರಬಂದ ಎರಡು ಕಾಡಾನೆಗಳು ರಸ್ತೆಯಲ್ಲಿ ಮನಸೋಇಚ್ಛೆ ಸಂಚರಿಸಿ, ಅಕ್ಕಪಕ್ಕದ ನಿವಾಸಿಗಳು ಹಾಗೂ ವಾಹನ ಸವಾರರಲ್ಲಿ ಕೆಲಕಾಲ ಆತಂಕ ಸೃಷ್ಟಿಸಿದವು.

ಬೆಳಗ್ಗೆ 6.45ರಲ್ಲಿ 7ನೇ ಹೊಸಕೋಟೆ ನಿವಾಸಿ ಜುನಾಯಿತ್ ಅವರು ಮಸೀದಿಗೆ ತೆರಳಿ ವಾಪಸ್ಸಾಗುತ್ತಿದ್ದ ಸಂದರ್ಭ ಏಕಾಏಕಿ ಕಾಫಿ ತೋಟದಿಂದ ದಿಢೀರ್ ಹೊರ ಬಂದ ಕಾಡಾನೆ, ಕಾರಿನ ಮೇಲೆ ದಾಳಿ ನಡೆಸಿದ್ದು, ಜುನಾಯಿತ್ ಕೂದಲೆಳೆ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕಾರಿನ ಹಿಂಭಾಗಕ್ಕೆ ದಂತದಿಂದ ತಿವಿದ ಪರಿಣಾಮ ಕಾರಿಗೆ ಹಾನಿಯಾಗಿದೆ.

ಇದೇ ಸಂದರ್ಭ ಮತ್ತೊಂದು ಕಾಡಾನೆ ಹೆದ್ದಾರಿಯಲ್ಲಿ ಅಡ್ಡಾದಿಡ್ಡಿ ಸಂಚರಿಸಿ ಘೀಳಿಟ್ಟು ಪಕ್ಕದಲ್ಲಿದ್ದ ಕಾಫಿ ತೋಟದೊಳಗೆ ಮರೆಯಾಗಿದೆ. ಹೆದ್ದಾರಿಯಲ್ಲಿ ವಾಹನಗಳು ಸಂಚರಿಸುತ್ತಿದ್ದು, ಯಾವುದೇ ವಾಹನಗಳ ಮೇಲೆ ದಾಳಿ ಮಾಡದೆ ಕಾಡಾನೆ ಹೊರಟು ಹೋಗಿದೆ. ಆದರೆ, ವಾಹನ ಚಾಲಕರು ಮತ್ತು ಹೆದ್ದಾರಿ ಬದಿ ನಿವಾಸಿಗಳಲ್ಲಿ ಆತಂಕ ಸೃಷ್ಟಿಸಿತು.

ಆನೆಗಳ ಉಪಟಳ: ಕೊಡಗರಹಳ್ಳಿ, ಉಪ್ಪುತೋಡು, 7ನೇ ಹೊಸಕೋಟೆ, ಕಂಬಿಬಾಣೆ ವ್ಯಾಪ್ತಿಯಲ್ಲಿ ಕಾಡಾನೆಗಳ ಉಪಟಳ ಮಿತಿಮೀರಿದ್ದು, ಕಾಫಿ ಬೆಳೆಗಾರರು, ಕೂಲಿ, ಕೃಷಿಕರಲ್ಲಿ ಮತ್ತಷ್ಟು ಆತಂಕ ಉಂಟಾಗಿದೆ. ಇದರಿಂದ ಈ ಭಾಗದ ಜನರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಆನೆ ಮತ್ತು ಮಾನವ ಸಂಘರ್ಷ ಮಾಡು ಇಲ್ಲವೇ ಮಡಿ ಎಂಬ ಸ್ಥಿತಿ ಕೊಡಗಿನಲ್ಲಿದ್ದು, ಕಾಡಾನೆ ಹಾವಳಿ ಶಾಶ್ವತ ತಡೆಗೆ ಜನರು ಸಂಘಟಿತರಾಗಿ ಬೀದಿಗೆ ಇಳಿಯಲು ಸಜ್ಜಾಗುತ್ತಿದ್ದಾರೆ. ಇತ್ತೀಚೆಗೆ ನಡೆದ ಆನೆ ಗಣತಿಯ ಪ್ರಕಾರ ಕೊಡಗಿನಲ್ಲಿ 1103ರಷ್ಟು ಕಾಡಾನೆಗಳು ನೆಲೆ ಕಂಡುಕೊಂಡಿದ್ದು, ಹಂತ ಹಂತವಾಗಿ ಆನೆ ಮತ್ತು ಮಾನವ ಸಂಘರ್ಷ ಮತ್ತಷ್ಟು ಏರಿಕೆಯಾಗಲಿದೆ ಎಂದು ಸಾರ್ವಜನಿಕರು ಆಕ್ರೋಶ ಹೊರ ಹಾಕಿದ್ದಾರೆ.

ರೇಡಿಯೋ ಕಾಲರ್ ಅಳವಡಿಕೆ, ಆನೆಗಳನ್ನು ಕಾಡಿಗೆ ಓಡಿಸುವ ಕಾರ್ಯಾಚರಣೆ, ಮಾನವ ಜೀವ ಹಾನಿ, ಕೃಷಿ ಫಸಲು ನಷ್ಟಕ್ಕೆ ಪರಿಹಾರ ನೀಡುವುದೇ ಅರಣ್ಯ ಇಲಾಖೆಯ ಪರಿಹಾರವಾಗಿದೆ ಎಂದು ಜಿಲ್ಲೆಯ ಜನರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಅರಣ್ಯ ವಾಹನದಲ್ಲಿ ಮನೆ ತಲುಪಿದ ವಿದ್ಯಾರ್ಥಿಗಳು

ಮಡಿಕೇರಿ: ನಿರೀಕ್ಷೆಯಂತೆ ಕೊಡಗು ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿ ಮಿತಿ ಮೀರಿದ್ದು, ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಆತಂಕ ಎದುರಾಗಿದೆ.

ಮಡಿಕೇರಿ ತಾಲೂಕಿನ ಅರೆಕಾಡು ಶಾಲೆಯ ಸಮೀಪ ಶನಿವಾರ ಕಾಡಾನೆಗಳು ಪ್ರತ್ಯಕ್ಷಗೊಂಡಿದ್ದವು. ಅಪಾಯದ ಮುನ್ಸೂಚನೆ ಅರಿತ ಸ್ಥಳೀಯರು ತಕ್ಷಣ ಅರಣ್ಯ ಇಲಾಖೆಗೆ ದೂರು ನೀಡಿದ್ದರು. ನಂತರ ಸ್ಥಳಕ್ಕೆ ಬಂದ ಅರಣ್ಯ ಸಿಬ್ಬಂದಿ ಕಾಡಾನೆಗಳನ್ನು ಕಾಡಿಗಟ್ಟುವ ಕಾರ್ಯಾಚರಣೆ ನಡೆಸಿದರು. ನಂತರ ಮುಂಜಾಗ್ರತಾ ಕ್ರಮವಾಗಿ ಅರಣ್ಯ ಇಲಾಖೆ ವಾಹನದಲ್ಲಿ ಶಾಲಾ ವಿದ್ಯಾರ್ಥಿಗಳನ್ನು ಮನೆ ಮನೆಗಳಿಗೆ ಬಿಡಲಾಯಿತು. ಸಕಾಲದಲ್ಲಿ ಕಾರ್ಯೋನ್ಮುಖರಾಗಿ ವಿದ್ಯಾರ್ಥಿಗಳ ಬಗ್ಗೆ ಕಾಳಜಿ ತೋರಿದ ಅರಣ್ಯ ಇಲಾಖೆಯ ಸಿಬ್ಬಂದಿ ಕಾರ್ಯವನ್ನು ಗ್ರಾಮಸ್ಥರು ಶ್ಲಾಘಿಸಿದ್ದಾರೆ.

ಬಿಜೆಪಿ ಕಾರ್ಯಕರ್ತರ ವಿಶೇಷ ಪೂಜೆ



ಚೌಡೇಶ್ವರಿ ದೇವಾಲಯದಲ್ಲಿ ಜಿಲ್ಲಾ ಬಿಜೆಪಿ ಕಾರ್ಯಕರ್ತರು ವಿಶೇಷ ಪೂಜೆ ಸಲ್ಲಿಸಿದರು.

ಮಡಿಕೇರಿ, ಜೂ.9– ನರೇಂದ್ರ ಮೋದಿ 3ನೇ ಬಾರಿಗೆ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಅಂಗವಾಗಿ ಜಿಲ್ಲಾ ಬಿಜೆಪಿ ಕಾರ್ಯಕರ್ತರು ಭಾನುವಾರ ನಗರದ ಶ್ರೀ ಚೌಡೇಶ್ವರಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ ನೇತೃತ್ವದಲ್ಲಿ ಪಕ್ಷದ ಕಾರ್ಯಕರ್ತರು, ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಸುಭದ್ರವಾಗಿ ದೇಶದ ಅಭಿವೃದ್ಧಿ ಕಾರ್ಯ ನಡೆಯುವಂತಾಗಲಿ ಎಂದು ಹಾರೈಸಿ ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಸಿಹಿ ಹಂಚಿ ಸಂಭ್ರಮಿಸಿದರು.

ಇದೇ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ನರೇಂದ್ರ ಮೋದಿ ನೇತೃತ್ವದಲ್ಲಿ ಕೇಂದ್ರ ಸರ್ಕಾರ ಕಳೆದ 10 ವರ್ಷ ದೇಶಾದ್ಯಂತ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ನಡೆಸಿದೆ. ಈ ಬಾರಿಯೂ ಎನ್‌ಡಿಎ ಮೈತ್ರಿಕೂಟಕ್ಕೆ ಬಹುಮತ ಸಿಕ್ಕಿದೆ ಎಂದು ಹೇಳಿದರು.

ಬಿಜೆಪಿಗೆ ಮೊದಲೇ ಗೊತ್ತಿತ್ತು: ಕಾಂಗ್ರೆಸ್‌ಗೆ ಉಚಿತ ಗ್ಯಾರಂಟಿ ಯೋಜನೆಗಳನ್ನು ಮುಂದುವರೆಸಲು ಸಾಧ್ಯವಿಲ್ಲ ಎಂಬುದು ಮೊದಲೇ ಬಿಜೆಪಿಗೆ ಗೊತ್ತಿತ್ತು. ಅವರ ಮನಸ್ಥಿತಿ ಇದೀಗ ಅನಾವರಣವಾಗುತ್ತಿದೆ. ಕಾಂಗ್ರೆಸ್ ಸರ್ಕಾರ ರಾಜ್ಯವನ್ನು ದಿವಾಳಿ ಮಾಡಿದೆ. ಲೋಕಸಭಾ ಚುನಾವಣೆಯಲ್ಲಿ ಹಿನ್ನಡೆಯಾಗಿರುವುದನ್ನು ಕಾಂಗ್ರೆಸ್ ಒಪ್ಪಿಕೊಳ್ಳಬೇಕು ಎಂದು ತಿಳಿಸಿದರು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಮತದಾರರು ಪ್ರಜ್ಞಾವಂತರಾಗಿದ್ದು, ಉತ್ತಮ ಅಭ್ಯರ್ಥಿಯನ್ನು ಆಯ್ಕೆ ಮಾಡಿದ್ದಾರೆ. ಅಂತಹ ಪ್ರಜ್ಞಾವಂತ ಮತದಾರರನ್ನು ಕಾಂಗ್ರೆಸ್ ಅಭ್ಯರ್ಥಿ ಎಂ. ಲಕ್ಷ್ಮಣ ಅವಮಾನಿಸಿರುವುದು ಖಂಡನೀಯ. ಎಂ.ಲಕ್ಷ್ಮಣ ಹತಾಶರಾಗಿ ಹೇಳಿಕೆ ನೀಡುವುದು ಮತ್ತು ಕೀಳಾಗಿ ಕಾಣುವುದು ಖಂಡನೀಯ ಎಂದರು.

ಈ ಸಂದರ್ಭ ಪಕ್ಷ ಪ್ರಮುಖರಾದ ಕನ್ನಂಡ ಸಂಪತ್, ಬಿ.ಎಂ.ರಾಜೇಶ್, ಹರೀಶ್ ಅಣ್ವೇಕರ್, ಬೊಳ್ಳಜ್ಜಿರ ಅಪ್ಪಯ್ಯ, ಅಜಯ್ ಮತ್ತಿತರರು ಉಪಸ್ಥಿತರಿದ್ದರು.

ಕಂಪ್ಯೂಟರ್ ಲೆಕ್ಕ ಪತ್ರ ನಿರ್ವಹಣೆ ತರಬೇತಿಗೆ ಅರ್ಜಿ ಆಹ್ವಾನ

ಕುಶಾಲನಗರ: ತಾಲೂಕಿನ ಕೂಡಿಗೆಯಲ್ಲಿರುವ ಕೊಡಗು ಯೂನಿಯನ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆಯಲ್ಲಿ ಕಂಪ್ಯೂಟರ್ ಲೆಕ್ಕ ಪತ್ರ ನಿರ್ವಹಣೆ ಕುರಿತು ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಜು.11 ರಿಂದ 30 ದಿನಗಳ ನಡೆಯುವ ಉಚಿತ ತರಬೇತಿಗೆ ಆಸಕ್ತ ನಿರುದ್ಯೋಗಿ ಯುವಕ, ಯುವತಿಯರು ಅರ್ಜಿ ಸಲ್ಲಿಸಬಹುದಾಗಿದೆ. 18 ರಿಂದ 45 ವರ್ಷ ವಯೋಮಿತಿಯೊಳಗಿದ್ದು, ಕನ್ನಡ ಮತ್ತು ಆಂಗ್ಲ ಭಾಷೆಯನ್ನು ಓದಲು ಮತ್ತು ಬರೆಯಲು ಬಲ್ಲವರಾಗಿರಬೇಕು. ಆಧಾರ್ ಮತ್ತು ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ಆದ್ಯತೆ ನೀಡಲಾಗುತ್ತದೆ.

ತರಬೇತಿ ಸಮಯದಲ್ಲಿ ಊಟ ಮತ್ತು ವಸತಿಯನ್ನು ಸಂಪೂರ್ಣವಾಗಿ ಉಚಿತವಾಗಿ ನೀಡಲಾಗುತ್ತದೆ. ತರಬೇತಿ ಪೂರ್ಣಗೊಂಡ ನಂತರ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯದಿಂದ ಪ್ರಮಾಣ ಪತ್ರವನ್ನು ನೀಡಲಾಗುತ್ತದೆ. ತರಬೇತಿ ಅವಧಿಯು ಒಂದು ತಿಂಗಳಾಗಿದ್ದು, ಒಂದು ಬ್ಯಾಚ್‌ಗೆ ಕೇವಲ 35 ಅಭ್ಯರ್ಥಿಗಳಿಗೆ ಮಾತ್ರ ಅವಕಾಶವಿರುತ್ತದೆ.

ಮಾಹಿತಿಗಾಗಿ ದೂ.ಸಂ.9686406181, 9449402081, 7676407792 ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕೊಡಗು ಜಿಲ್ಲಾ ಆಮ್ ಆದ್ಮಿ ಪಾರ್ಟಿ ಅಧ್ಯಕ್ಷ, ಕಾರ್ಯದರ್ಶಿ ನೇಮಕ



ಮಡಿಕೇರಿ: ಕೊಡಗು ಜಿಲ್ಲಾ ಆಮ್ ಆದ್ಮಿ ಪಾರ್ಟಿಯ ಅಧ್ಯಕ್ಷರಾಗಿ ಎಂ.ಕೆ.ಅಪ್ಪಯ್ಯ ಅವರನ್ನು ನೇಮಕ ಮಾಡಲಾಗಿದೆ.

ಮಾಜಿ ಅಧ್ಯಕ್ಷ ಭೋಜಣ್ಣ ಸೋಮಯ್ಯ ಅವರನ್ನು ರಾಜ್ಯ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಲಾಗಿದೆ ಎಂದು ಆಮ್ ಆದ್ಮಿ ಪಾರ್ಟಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಸಂಚಿತ್ ಸಹಾನೀ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿಗಳು ರಸ್ತೆ ನಿಯಮ ತಪ್ಪದೆ ಪಾಲಿಸಿ



ಸುಂಟಿಕೊಪ್ಪದಲ್ಲಿ ಮಿತಿಗಿಂತ ಹೆಚ್ಚು ಮಕ್ಕಳನ್ನು ಕರೆದೊಯ್ಯದಂತೆ ಆಟೋ ಚಾಲಕರಿಗೆ ಸುಂಟಿಕೊಪ್ಪ ಪೊಲೀಸ್ ಠಾಣಾಧಿಕಾರಿ ಎಂ.ಸಿ.ಶ್ರೀಧರ್ ಸೂಚಿಸಿದರು.

ಸುಂಟಿಕೊಪ್ಪ: ಶಾಲಾ–ಕಾಲೇಜು ವಿದ್ಯಾರ್ಥಿಗಳು ರಸ್ತೆ ನಿಯಮಗಳನ್ನು ಚಾಚು ತಪ್ಪದೆ ಪಾಲಿಸಬೇಕು ಎಂದು ಸುಂಟಿಕೊಪ್ಪ ಪೊಲೀಸ್ ಠಾಣಾಧಿಕಾರಿ ಎಂ.ಸಿ.ಶ್ರೀಧರ್ ತಿಳಿಸಿದರು.

ಮಾದಾಪುರ ರಸ್ತೆಯಲ್ಲಿ ಶಾಲಾ ಮಕ್ಕಳಿಗೆ ರಸ್ತೆ ನಿಯಮ ಪಾಲನೆ ಹಾಗೂ ದ್ವಿಚಕ್ರ ಸವಾರರಿಗೆ ಕಡ್ಡಾಯವಾಗಿ ಹೆಲ್ಮೆಟ್ ಧರಿಸುವಂತೆ ತಿಳಿಸಿ ಮಾತನಾಡಿದ ಅವರು, ಸವಾರರು ವಾಹನ ಚಾಲನೆ ಮಾಡುವ ಸಂದರ್ಭದಲ್ಲಿ ಪರವಾನಗಿಯನ್ನು ಕಡ್ಡಾಯವಾಗಿ ಹೊಂದಿರಬೇಕು. ಆಟೋ ಚಾಲಕರು ಮಿತಿಗಿಂತ ಅಧಿಕ ಸಂಖ್ಯೆಯಲ್ಲಿ ಮಕ್ಕಳನ್ನು ಕರೆದೊಯ್ಯುವುದು ಕಂಡು ಬಂದಲ್ಲಿ ಅಂತವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ವಾಹನ ಚಾಲನೆ ವೇಳೆ ಮೊಬೈಲ್ ಬಳಸುವುದರಿಂದ ಚಾಲಕರು ಹಾಗೂ ಪ್ರಯಾಣಿಕರ ಪ್ರಾಣಕ್ಕೆ ಕುತ್ತು ಬರುತ್ತಿದೆ. ದ್ವಿಚಕ್ರ ವಾಹನದ ಇಬ್ಬರೂ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ಕಾರು ಚಾಲಕರು ಸೀಟು ಬೆಲ್ಟ್ ಹಾಕುವುದರೊಂದಿಗೆ ರಸ್ತೆ ನಿಯಮ ಪಾಲಿಸಿ, ಇತರರಿಗೆ ಮಾದರಿಯಾಗಬೇಕು ಎಂದು. ಈ ಸಂದರ್ಭ ಅಪರಾಧ ವಿಭಾಗದ ಎಸ್‌ಐ ನಾಗರಾಜು, ಪೊಲೀಸ್ ಸಿಬ್ಬಂದಿ ಕೆ.ಆರ್.ಜಗದೀಶ್, ಪ್ರವೀಣ್, ಹೊನ್ನರಾಜಪ್ಪ, ಅಭಿಷೇಕ್ ಹಾಗೂ ಶಿಕ್ಷಕರು ಹಾಜರಿದ್ದರು.

3ನೇ ಬಾರಿ ಮೋದಿ ಪ್ರಧಾನಿ; ಪಾಡಿ ಶ್ರೀ ಇಗ್ಗುತಪ್ಪ ದೇವಾಲಯದಲ್ಲಿ ವಿಶೇಷ ಪೂಜೆ



ನರೇಂದ್ರ ಮೋದಿ 3ನೇ ಬಾರಿ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಹಿನ್ನೆಲೆಯಲ್ಲಿ ಪಾಡಿ ಶ್ರೀ ಇಗ್ಗುತಪ್ಪ ಸಾನ್ನಿಧಿಯಲ್ಲಿ ನಾಪೋಕ್ಲು ಸಮೀಪದ ಮರಂದೋಡ ಬಿಜೆಪಿ ಶಕ್ತಿ ಕೇಂದ್ರದ ಕಾರ್ಯಕರ್ತರು ವಿಶೇಷ ಪೂಜೆ ಸಲ್ಲಿಸಿದರು. ಮುಖಂಡರಾದ ಚಂಡೀರ ಜಗದೀಶ್, ಚಂಡೀರ ಮುದ್ದಪ್ಪ, ಬೂತ್ ಮಟ್ಟದ ಕಾರ್ಯದರ್ಶಿ ಬಾರಿಕೆ ನಂದ, ಯುವ ಮೋರ್ಚಾ ಪದಾಧಿಕಾರಿಗಳಾದ ಚಂಡೀರ ರೋಷನ್, ಮೇರಿಯಂಡ ಆದೇಶ ಬೋಪಯ್ಯ, ಮಾರ್ಚಂಡ ಪಳಂಗಪ್ಪ, ಚಂಡೀರ ವಿಜಯ್, ಚಂಡೀರ ನಂದ, ಮೇರಿಯಂಡ ನೀತಾ ಆದೇಶ್, ಕೊಲೆಯಂಡ ಅಶೋಕ ಇದ್ದರು.

ಸುಂಟಿಕೊಪ್ಪ ಸಂತೆಯಲ್ಲಿ ನಾಗರ ಹಾವು



ಸುಂಟಿಕೊಪ್ಪ: ಇಲ್ಲಿನ ಭಾನುವಾರದ ಸಂತೆಯಲ್ಲಿ ನಾಗರ ಹಾವು ಪತ್ತೆಯಾಗಿ ವ್ಯಾಪಾರಸ್ಥರು ಹಾಗೂ ಗ್ರಾಹಕರಲ್ಲಿ ಭಯ ಮೂಡಿಸಿದೆ.

ಸಂತೆಯಲ್ಲಿ ದಿನಸಿ ವ್ಯಾಪಾರ ಮಾಡಲು ಇರ್ಫಾನ್ ಬೆಳಗ್ಗೆ 8 ಗಂಟೆಯಲ್ಲಿ ಪ್ಲಾಸ್ಟಿಕ್ ಟ್ರೇಗಳನ್ನು ಜೋಡಿಸುತ್ತಿದ್ದರು. ಈ ವೇಳೆ ಟ್ರೇವೊಂದರಲ್ಲಿ ನಾಗರ ಹಾವು ಪತ್ತೆಯಾಗಿದೆ. ಇದರಿಂದ ಕೆಲಕಾಲ ವ್ಯಾಪಾರಸ್ಥರು ಹಾಗೂ ಗ್ರಾಹಕರಲ್ಲಿ ಭಯ ಉಂಟಾಗಿದೆ.

ನಂತರ ಸುಂಟಿಕೊಪ್ಪದ ಪಂಪ್‌ಹೌಸ್ ರಸ್ತೆ ನಿವಾಸಿ, ಉರಗ ಪ್ರೇಮಿ ವಿ.ಕೆ.ರಾಜ ಸ್ಥಳಕ್ಕಾಗಮಿಸಿ ಹಾವನ್ನು ಸೆರೆ ಹಿಡಿದು ಸುರಕ್ಷಿತವಾಗಿ ಆನೆಕಾಡು ಅರಣ್ಯಕ್ಕೆ ಬಿಟ್ಟರು.

ಉರುಳಿ ಬಿದ್ದ ವಿದ್ಯುತ್ ಕಂಬ ತಪ್ಪಿದ ಭಾರೀ ಅನಾಹುತ



ರಾಮಸಮುದ್ರದ ಹೊಸದುರ್ಗಿ ಬಡಾವಣೆಯಲ್ಲಿ ವಿದ್ಯುತ್ ಕಂಬ ಉರುಳಿ ಬಿದ್ದಿರುವುದು.

ಚಾಮರಾಜನಗರ, ಜೂ.9–ಇಲ್ಲಿನ ರಾಮಸಮುದ್ರದ ಹೊಸದುರ್ಗಿ ಬಡಾವಣೆಯಲ್ಲಿ ಭಾನುವಾರ ವಿದ್ಯುತ್ ಕಂಬ ಉರುಳಿ ಬಿದ್ದಿದ್ದು, ಸೆಸ್ಕ್ ಸಿಬ್ಬಂದಿಯ ಸಮಯ ಪ್ರಜ್ಞೆಯಿಂದ ಭಾರೀ ಅನಾಹುತ ತಪ್ಪಿದೆ.

ಮಧ್ಯಾಹ್ನ 1 ಗಂಟೆಯಲ್ಲಿ ಹೊಸದುರ್ಗಿ ಬಡಾವಣೆಯಲ್ಲಿ ದಿಢೀರನೇ ವಿದ್ಯುತ್ ಕಂಬ ಉರುಳಿ ಬಿದ್ದಿದೆ. ಇದನ್ನು ಗಮನಿಸಿದ ನಿವಾಸಿಗಳು ಸೆಸ್ಕ್ ಇಂಜಿನಿಯರ್ ಮಂಜುನಾಥ ಅವರಿಗೆ ದೂರವಾಣಿ ಮೂಲಕ ವಿಷಯ ತಿಳಿಸಿದ್ದಾರೆ. ನಂತರ ತಕ್ಷಣ ಕಾರ್ಯಪ್ರವೃತ್ತರಾದ ಅಧಿಕಾರಿಗಳು ಹಾಗೂ ಸಿಬ್ಬಂದಿ ಈ ಮಾರ್ಗ ಎಲ್ಲಾ ವಿದ್ಯುತ್ ಸಂಪರ್ಕ ಕಡಿತಗೊಳಿಸಿ, ಸ್ಥಳಕ್ಕೆ ಆಗಮಿಸಿ ವಿದ್ಯುತ್ ತಂತಿ ಹಾಗೂ ಕಂಬವನ್ನು ತೆರವುಗೊಳಿಸಿದರು.

ಸೆಸ್ಕ್ ಸಿಬ್ಬಂದಿಯ ಸಮಯ ಪ್ರಜ್ಞೆಯೊಂದಿಗೆ ಭಾರೀ ಅನಾಹುತ ತಪ್ಪಿದೆ. ಈಗ ಮಳೆಗಾಲ ಇರುವುದರಿಂದ ಕೆಲ ವಿದ್ಯುತ್ ಕಂಬಗಳು ಉರುಳಿ ಬೀಳುತ್ತವೆ. ಕಂಬಗಳು ಬೀಳುವ ಸ್ಥಿತಿಯಲ್ಲಿದ್ದರೆ ಹಾಗೂ ತಂತಿಗಳ ಮೇಲೆ ಮರದ ಕೊಂಬೆಗಳು ಮುರಿದು ಬಿದ್ದಿದ್ದರೆ ತಕ್ಷಣ ಸೆಸ್ಕ್ ಕಚೇರಿಗೆ ಮಾಹಿತಿ ತಿಳಿಸುವಂತೆ ಇಂಜಿನಿಯರ್ ಮಂಜುನಾಥ ತಿಳಿಸಿದ್ದಾರೆ.

ಪ್ರತಿಯೊಬ್ಬರೂ ಪರಿಸರ ಸಂರಕ್ಷಣೆಗೆ ಮುಂದಾಗಬೇಕು



ಚಾಮರಾಜನಗರ, ಜೂ.9– ತಾಲೂಕಿನ ಸಿದ್ದಯ್ಯನಪುರದಲ್ಲಿ ಉನ್ನತಿ ಟ್ರಸ್ಟ್ ಮತ್ತು ಶ್ರೀನಿವಾಸನ್ ಸರ್ವಿಸಸ್ ಟ್ರಸ್ಟ್ (ಟಿವಿಎಸ್) ವತಿಯಿಂದ ಗಿಡ ನೆಡುವ ಮೂಲಕ ಪರಿಸರ ದಿನ ಆಚರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಉನ್ನತಿ ಟ್ರಸ್ಟ್ ಅಧ್ಯಕ್ಷ ಎಂ.ರಮೇಶ್ ಮಾತನಾಡಿ, ಗಿಡ, ಮರಗಳು ನಮಗೆ ಆಮ್ಲಜನಕ ನೀಡುತ್ತವೆ. ಮರಗಳಲ್ಲಿ ಪರಿಸರ ಸಮತೋಲನಕ್ಕೆ ಸಹಕಾರಿಯಾಗುವ ಸೂಕ್ಷ್ಮಾಣು ಜೀವಿಗಳು ಇರುತ್ತವೆ. ಕಾಲಕಾಲಕ್ಕೆ ಮಳೆಯಾಗಿ ಬೆಳೆ ಬೆಳೆಯಲು ಮರಗಳು ಅವಶ್ಯ. ಆದ್ದರಿಂದ ಅರಣ್ಯ ಮತ್ತು ಪರಿಸರ ಸಂರಕ್ಷಣೆಗೆ ಪ್ರತಿಯೊಬ್ಬರೂ ಮುಂದಾಗ ಬೇಕಿದೆ ಎಂದರು

ಇದೇ ವೇಳೆ ಗ್ರಾಮದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳಿಗೆ ಪುಸ್ತಕ, ಲೇಖನಿ, ಒಂದು ಗಿಡ ನೀಡಿ ಪರಿಸರ ಪ್ರೇಮ ಮೆರೆದರು.

ಕಾರ್ಯಕ್ರಮದಲ್ಲಿ ಎಸ್.ವಿನೋದ್‌ಗೌಡ, ನಲ್ಲೂರು ವಲಯ ಅರಣ್ಯಾಧಿಕಾರಿ, ಕೆ.ಗುಡಿ ವನ್ಯಜೀವಿ ವಲಯದ ಮಹದೇವಸ್ವಾಮಿ, ಸಮುದಾಯ ಅಭಿವೃದ್ಧಿ ಅಧಿಕಾರಿಗಳು, ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಚಾಮರಾಜನಗರ ಕೆ.ಗುಡಿ ವನ್ಯಜೀವಿ ವಲಯ ಅರಣ್ಯ ಅಧಿಕಾರಿಗಳು ಹಾಗೂ ಸಿಬ್ಬಂದಿ, ಗ್ರಾಮ ಪಂಚಾಯಿತಿ ಸದಸ್ಯರು, ರೈತರು ಭಾಗವಹಿಸಿದ್ದರು.

ಕಾರ್ಯದರ್ಶಿಯಾಗಿ ಗಂಗಾಧರ್ ನೇಮಕ



ಚಾಮರಾಜನಗರ, ಜೂ.9– ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ನಗರ ಕಾರ್ಯದರ್ಶಿಯಾಗಿ ವಿ. ಗಂಗಾಧರ್ ಅವರನ್ನು ನೇಮಕ ಮಾಡಲಾಗಿದೆ ಎಂದು ಸಂಘದ ಅಧ್ಯಕ್ಷ ದೇವರಾಜ್ ಕಪ್ಪಸೋಗೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೂರನೇ ಬಾರಿಗೆ ಪ್ರಧಾನಿಯಾಗಿ ಮೋದಿ ಪ್ರಮಾಣ ವಚನ ಸ್ವೀಕಾರ ಹಿನ್ನೆಲೆ

ಚಾ.ನಗರದಲ್ಲಿ ಬಿಜೆಪಿ ಕಾರ್ಯಕರ್ತರ ಸಂಭ್ರಮಾಚರಣೆ



ಮೋದಿ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಹಿನ್ನೆಲೆಯಲ್ಲಿ ಬಿಜೆಪಿ ಕಾರ್ಯಕರ್ತರು ಚಾಮರಾಜನಗರದಲ್ಲಿ ಸಂಭ್ರಮಾಚರಿಸಿದರು.

ಚಾಮರಾಜನಗರ, ಜೂ.9–ಮೂರನೇ ಬಾರಿ ಪ್ರಧಾನಿಯಾಗಿ ನರೇಂದ್ರ ಮೋದಿ ಪ್ರಮಾಣ ವಚನ ಸ್ವೀಕರಿಸಿದ ಹಿನ್ನೆಲೆಯಲ್ಲಿ ಬಿಜೆಪಿ ಕಾರ್ಯಕರ್ತರು ಜಿಲ್ಲೆಯಲ್ಲಿ ಭಾನುವಾರ ಸಂಭ್ರಮಾಚರಿಸಿದರು.

ಚಾಮರಾಜನಗರದ ಸಂತೇಮರಹಳ್ಳಿ ವೃತ್ತದಲ್ಲಿ ಪಕ್ಷದ ಕಾರ್ಯಕರ್ತರು ಹಾಗೂ ಮೋದಿ ಅಭಿಮಾನಿಗಳು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಇದೇ ವೇಳೆ ಪ್ರಮುಖ ವೃತ್ತಗಳಲ್ಲಿ ಮೋದಿ ಭಾವಚಿತ್ರಕ್ಕೆ ಪುಷ್ಪ ವೃಷ್ಟಿ ಮಾಡಿದರು. ಯುವಕರು ಬಿಜೆಪಿ ಬಾವುಟ ಹಿಡಿದು ಬೈಕ್ ರ‍್ಯಾಲಿ ನಡೆಸಿದರು.

ಈ ಸಂದರ್ಭ ಮಾತನಾಡಿದ ಬಿಜೆಪಿ ಜಿಲ್ಲಾ ಕಾರ್ಯದರ್ಶಿ ನಟರಾಜು, ನರೇಂದ್ರ ಮೋದಿ ಮೂರನೇ ಅವಧಿಗೆ ಪ್ರಧಾನಿಯಾಗಿರುವುದು ಹೆಮ್ಮೆ ತಂದಿದೆ. ಕಳೆದ ಎರಡು ಅವಧಿಯಲ್ಲಿ ಅವರು ಮಾಡಿರುವ ಸಾಧನೆಯಿಂದ ದೇಶದ ಜನರು ಮತ್ತೊಮ್ಮೆ ಅವರು ಪ್ರಧಾನಿಯಾಗಬೇಕೆಂದು ಕನಸು ಕಂಡಿದ್ದರು. ಅದರಂತೆ ಇಂದು ಪ್ರಮಾಣ ವಚನ ಸ್ವೀಕರಿಸಿದ್ದಾರೆ ಎಂದರು.

ಇದೇ ವೇಳೆ ಬಿಜೆಪಿ ನಗರ ಮಂಡಲ ಅಧ್ಯಕ್ಷ ಶಿವರಾಜು, ಮುಖಂಡರಾದ ಕೆಲ್ಲಂಬಳ್ಳಿ ಸೋಮನಾಯಕ, ನಗರಸಭಾ ಮಾಜಿ ಅಧ್ಯಕ್ಷ ಸುರೇಶ್ ನಾಯಕ, ಡಾ.ಬಾಬು, ಎಸ್.ಬಾಲಸುಬ್ರಹ್ಮಣ್ಯ, ಎಪಿಎಂಸಿ ಮಾಜಿ ಅಧ್ಯಕ್ಷ ಮನೋಜ್ ಪಟೇಲ್, ವಿಜಯೇಂದ್ರ, ಎ.ಸೂರ್ಯ ಬಾಲರಾಜು, ಕೂಸಣ್ಣ, ಜಯಸುಂದರ್, ಮಾರ್ಕೆಟ್ ಕುಮಾರ್, ಉತ್ತುವಳ್ಳಿ ಮಹೇಶ್, ಪರಶಿವ, ಕೇಬಲ್ ರಂಗಸ್ವಾಮಿ ಮಂಜುನಾಥ್ ಮೊದಲಾದವರು ಇದ್ದರು.

ಮೋದಿ ಪ್ರಮಾಣ ವಚನದಲ್ಲಿ ಚಾಮರಾಜನಗರದ ಯುವತಿ ಭಾಗಿ

ಚಾಮರಾಜನಗರ, ಜೂ.9–ನರೇಂದ್ರ ಮೋದಿ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮದಲ್ಲಿ ಚಾಮರಾಜನಗರದ ಉಮ್ಮತ್ತೂರಿನ ಯುವತಿ ವರ್ಷಾ ಯುವತಿ ಭಾಗವಹಿಸಿದ್ದರು.

ಮೋದಿ ಅವರ ಮನ್ ಕೀ ಬಾತ್ ಕಾರ್ಯಕ್ರಮದಿಂದ ಪ್ರೇರಣೆಗೊಂಡು ಯುವತಿ ವರ್ಷಾ, ಬಾಳೆ ದಿಂಡಿನಿಂದ ಅಲಂಕಾರಿಕ ವಸ್ತುಗಳನ್ನು ತಯಾರಿಸುವ ಉದ್ಯಮ ಆರಂಭಿಸಿದ್ದರು. ನಂತರ ಹಲವು ಮಹಿಳೆಯರಿಗೆ ಉದ್ಯೋಗ ನೀಡುವ ಜೊತೆಗೆ ಸ್ವಾವಲಂಬಿ ಬದುಕು ನಡೆಸುತ್ತಿದ್ದಾರೆ. ವರ್ಷಾಳ ಈ ಸಾಧನೆಯನ್ನು ಮನ್ ಕೀ ಬಾತ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ 'ವೋಕಲ್ ಫಾರ್ ಲೋಕಲ್' ಎಂದು ಪ್ರಶಂಸಿದ್ದರು. 3ನೇ ಬಾರಿಗೆ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮಕ್ಕೆ ವರ್ಷಾಳನ್ನು ಆಹ್ವಾನಿಸಲಾಗಿತ್ತು.

ನಾಗಪ್ಪಶೆಟ್ಟರ ಚೌಕದಲ್ಲಿ ವಿಜಯೋತ್ಸವ

ಚಾಮರಾಜನಗರ: ಪ್ರಧಾನಿಯಾಗಿ ನರೇಂದ್ರ ಮೋದಿ ಪ್ರಮಾಣ ವಚನ ಸ್ವೀಕರಿಸಿದ ಹಿನ್ನೆಲೆಯಲ್ಲಿ ನಗರದ ನಾಗಪ್ಪಶೆಟ್ಟರ ಚೌಕದಲ್ಲಿ ಬಿಜೆಪಿ ಕಾರ್ಯಕರ್ತರು ಹಾಗೂ ಮೋದಿ ಅಭಿಮಾನಿಗಳು ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು.

ನಗರಸಭಾ ಮಾಜಿ ಸದಸ್ಯ ರಾಜೇಶ್ ನೇತೃತ್ವದಲ್ಲಿ ಪಕ್ಷದ ಕಾರ್ಯಕರ್ತರು, ಮೋದಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಮೋದಿ ಪರ ಘೋಷಣೆ ಕೂಗಿದರು. ಈ ಸಂದರ್ಭದಲ್ಲಿ ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಆರ್.ಸುಂದರ್, ಜಿಲ್ಲಾ ಉಪಾಧ್ಯಕ್ಷ ವಿರಾಟ್ ಶಿವು, ಜಿಲ್ಲಾ ಸಹ ವಕ್ತಾರ ಎನ್.ಮಂಜುನಾಥ್, ನಗರ ಉಪಾಧ್ಯಕ್ಷ ಕಿರಣ್‌ಕುಮಾರ್, ಮುಖಂಡರಾದ ವೆಂಕಟೇಶ್, ಪ್ರಜ್ವಲ್, ಉಲ್ಲಾಸ್, ಮಾದೇವನಾಯಕ, ಬಂಗಾರು, ಶರವಣ, ಹರೀಶ್, ಲೋಕೇಶ್, ಗಗನ, ಸಂತೋಷ್, ಮಣಿ ಮೊದಲಾದವರು ಇದ್ದರು.

ಪರಿಸರ ರಕ್ಷಣೆಯಿಂದ ಉತ್ತಮ ಆರೋಗ್ಯ ವೃದ್ಧಿ



ಚಾಮರಾಜನಗರ: ನಮ್ಮ ಸುತ್ತಮುತ್ತಲಿನ ಪರಿಸರ ಸ್ವಚ್ಛವಾಗಿಟ್ಟುಕೊಂಡು ಮರ ಗಿಡಗಳನ್ನು ಬೆಳೆಸಿ, ಹಸಿರಿನ ವಾತಾವರಣ ನಿರ್ಮಾಣ ಮಾಡಿದರೆ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಾಧ್ಯ ಎಂದು ಶ್ರೀಕ್ಷೇತ್ರದ ಧರ್ಮಸ್ಥಳ ಗ್ರಾಮಾಭಿವೃದ್ಧಿ ತಾಲೂಕು ಯೋಜನಾಧಿಕಾರಿ ಹರೀಶ್‌ಕುಮಾರ್ ತಿಳಿಸಿದರು.

ತಾಲೂಕಿನ ಬಿಸಲವಾಡಿ ಎಂಸಿಎಸ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಾಗೂ ಬಿಸಿ ಟ್ರಸ್ಟ್ ವತಿಯಿಂದ ನಡೆದ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಸಸಿ ನೆಟ್ಟು ನೀರೆರೆದು ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಪರಿಸರವನ್ನು ನಿರಂತರವಾಗಿ ಹಾಳು ಮಾಡಲಾಗುತ್ತಿದೆ. ಮಾನವನ ಅತಿ ಆಸೆಯಿಂದಾಗಿ ಅರಣ್ಯ, ಬೆಟ್ಟ–ಗುಡ್ಡಗಳು, ಮರ–ಗಿಡಗಳು ಹಾಗೂ ಜಲ ಮೂಲಗಳು ಹಾಳಾಗುತ್ತಿದೆ. ಈ ಬಗ್ಗೆ ಎಚ್ಚರ ವಹಿಸದಿದ್ದರೆ ಮುಂದಿನ ದಿನಗಳಲ್ಲಿ ಆಪತ್ತು ಕಾದಿದೆ. ದೆಹಲಿಯಲ್ಲಿ ಹೆಚ್ಚು ಕೈಗಾರೀಕರಣದ ಪರಿಣಾಮ ಪರಿಸರ ನಾಶವಾಗಿದೆ. ಹೀಗಾಗಿ ಎಲ್ಲರೂ ಜಾಗೃತರಾಗಿ ಪರಿಸರ ಸಂರಕ್ಷಣೆಗೆ ಪಣತೊಡೋಣ. ನಮ್ಮ ಮನೆಗಳ ಬಳಿಯ ರಸ್ತೆ ಬದಿಗಳಲ್ಲಿ ಸಸಿಗಳನ್ನು ನೆಟ್ಟು ಪೋಷಣೆ ಮಾಡುವ ಹವ್ಯಾಸವನ್ನು ರೂಢಿಸಿಕೊಳ್ಳಬೇಕು ಎಂದರು.

ಬಿಸಲವಾಡಿ ಮಹಾಒಕ್ಕೂಟದ ಅಧ್ಯಕ್ಷ ಎಂ.ರವಿ ಮಾತನಾಡಿ, ಅರಣ್ಯ ನಾಶದಿಂದ ಪರಿಸರದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಕೈಗಾರಿಕೆಗಳು ಹಾಗೂ ನಗರೀಕರಣದ ಪರಿಣಾಮದಿಂದ ಹಳ್ಳಿಗಳ ಪರಿಸರವೂ ಮಾಯವಾಗುತ್ತಿದೆ. ಜಮೀನುಗಳು ನಿವೇಶನಗಳಾಗಿ ಪರಿವರ್ತನೆಯಾಗುತ್ತಿವೆ. ಈ ನಿಟ್ಟಿನಲ್ಲಿ ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ. ನಮ್ಮ ಪೂರ್ವಿಕರು ಗ್ರಾಮದ ಮುಖ್ಯದ್ವಾರ ಹಾಗೂ ಕೆರೆ ಕಟ್ಟೆ, ದೇವಸ್ಥಾನಗಳ ಮೈದಾನದಲ್ಲಿ ಅರಳಿ ಮರ, ಬೇವಿನ ಮರ ಸೇರಿದಂತೆ ಅನೇಕ ಆರೋಗ್ಯ ವೃದ್ಧಿಸುವಂತಹ ಮರಗಳನ್ನು ಬೆಳೆಸುವ ಮೂಲಕ ಉತ್ತಮ ಗಾಳಿ, ನೆರಳು ಪಡೆದುಕೊಳ್ಳುತ್ತಿದ್ದರು. ಇದರಿಂದ ಗ್ರಾಮಸ್ಥರ ಆರೋಗ್ಯವು ಸಹ ವೃದ್ಧಿಸುತ್ತಿತ್ತು. ಈ ನಿಟ್ಟಿನಲ್ಲಿ ಮಕ್ಕಳು ಸಹ ತಮ್ಮ ಹುಟ್ಟುಹಬ್ಬದ ದಿನದಂದು ಸಸಿಗಳನ್ನು ನೆಟ್ಟು ಬೆಳೆಸುವ ಕೆಲಸ ಮಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯ ಶಿಕ್ಷಕ ಮಹದೇವ ಪ್ರಸಾದ್, ಕೃಷಿ ಮೇಲ್ವಿಚಾರಕರಾದ ಗೋವಿಂದಪ್ಪ ಶಶಿಕುಮಾರ್, ಸೇವಾ ಪ್ರತಿನಿಧಿ ಶಿವಕುಮಾರ್, ಸಂಘದ ಸದಸ್ಯರು, ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಬಿಳಿಗಿರಿರಂಗನಬೆಟ್ಟದಲ್ಲಿ ರಿಯಲ್ ಎಸ್ಟೇಟ್ ಉದ್ಯಮಿ ಶವ ಪತ್ತೆ



ಯಳಂದೂರು: ನಾಪತ್ತೆ ಯಾಗಿದ್ದ ರಿಯಲ್ ಎಸ್ಟೇಟ್ ಉದ್ಯಮಿ ಶವ ತಾಲೂಕಿನ ಬಿಳಿಗಿರಿರಂಗನ ಬೆಟ್ಟದಲ್ಲಿ ಶನಿವಾರ ಪತ್ತೆಯಾಗಿದ್ದು, ಸಾವಿಗೆ ನಿಖರ ಕಾರಣ ತಿಳಿದುಬಂದಿಲ್ಲ.

ನಂಜನಗೂಡು ತಾಲೂಕಿನ ಕವಲಂದೆ ಕುಂಬಾರಹಳ್ಳಿಯ ರಿಯಲ್ ಎಸ್ಟೇಟ್ ಉದ್ಯಮಿ ಮಹದೇವನಾಯಕ ಶವ ಪತ್ತೆಯಾಗಿದ್ದು, ಈತ ಮೇ 5ರಂದು ನಾಪತ್ತೆಯಾಗಿದ್ದಾರೆ ಎಂದು ಕವಲಂದೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ಜೂ.6ರಂದು ಬಿಳಿಗಿರಿರಂಗನ ಬೆಟ್ಟದ ಬಳಿ ಈತನ ಬೈಕ್ ಪತ್ತೆಯಾಗಿತ್ತು. ನಂತರ ಪೊಲೀಸರು ಶನಿವಾರ ಡ್ರೋನ್ ಕ್ಯಾಮರಾ ಬಳಸಿ ಹುಡುಕಾಟ ನಡೆಸಿದಾಗ ಬೆಟ್ಟದ ಕಡಿದಾದ ಜಾಗ ಕಮರಿನ ನಡುವೆ ಶವ ಪತ್ತೆಯಾಗಿದೆ. ಇದೊಂದು ಆತ್ಮಹತ್ಯೆ ಎಂದು ಹೇಳಲಾಗುತ್ತಿದ್ದು, ಆದರೆ ಸಾಕಷ್ಟು ಅನುಮಾನಕ್ಕೆ ಆಸ್ಪದ ನೀಡಿದೆ. ಈ ಸಂಬಂಧ ಯಳಂದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹದೇವ್ ನಿಧನ



ಚಾಮರಾಜನಗರ, ಜೂ.9– ಚಾಮರಾಜನಗರ ಸರ್ಕಾರಿ ಜಿಲ್ಲಾಸ್ಪತ್ರೆ ಶುಶ್ರೂಷಕ ಅಧೀಕ್ಷಕ ಎಲ್. ಮಹದೇವ್ (47) ಶನಿವಾರ ರಾತ್ರಿ ಹೃದಯಾಘಾತದಿಂದ ನಿಧನರಾದರು. ಗುಂಡ್ಲುಪೇಟೆ ತಾಲೂಕಿನ ಕಬ್ಬಹಳ್ಳಿ ಗ್ರಾಮದ ಮೃತ ಮಹದೇವ್, ಹಲವು ವರ್ಷಗಳಿಂದ ವಿವಿಧ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸಿ ನಗರದ ಜಿಲ್ಲಾಸ್ಪತ್ರೆಯಲ್ಲಿ ಶುಶ್ರೂಷಕರಾಗಿದ್ದರು. ಮೃತರು ಪತ್ನಿ, ಶುಶ್ರೂಷಕಿ ಸೌಮ್ಯ, ಇಬ್ಬರು ಪುತ್ರರು ಹಾಗೂ ಬಂಧು–ಬಳಗ ಅಗಲಿದ್ದಾರೆ.

ಭಾನುವಾರ ಸಂಜೆ ಸ್ವಗ್ರಾಮ ಕಬ್ಬಳ್ಳಿಯಲ್ಲಿ ಅಂತ್ಯಕ್ರಿಯೆ ನೆರವೇರಿತು.

ರಷ್ಯಾದಲ್ಲಿ ನದಿಯಲ್ಲಿ ಮುಳುಗಿ 4 ಭಾರತೀಯ ವಿದ್ಯಾರ್ಥಿಗಳು ಸಾವು

ಮಾಸ್ಕೋ: ರಷ್ಯಾದ ನದಿಯಲ್ಲಿ ಮುಳುಗಿ ನಾಲ್ವರು ಭಾರತೀಯ ಮೂಲದ ವೈದ್ಯಕೀಯ ವಿದ್ಯಾರ್ಥಿಗಳು ಮೃತಪಟ್ಟಿದ್ದು, ಓರ್ವನನ್ನು ರಕ್ಷಿಸಲಾಗಿದೆ.

ಸೈಂಟ್ ಪೀಟರ್ಸ್‌ಬರ್ಗ್ ಬಳಿ ನದಿಯಲ್ಲಿ ಈ ಅವಘಡ ಸಂಭವಿಸಿದೆ ಎಂದು ರಷ್ಯಾದಲ್ಲಿರುವ ಭಾರತೀಯ ರಾಯ ಭಾರ ಕಚೇರಿ ಶುಕ್ರವಾರ ದೃಢಪಡಿಸಿದೆ. ಶವಗಳನ್ನು ಆದಷ್ಟು ಬೇಗ ಭಾರತಕ್ಕೆ ಕಳುಹಿಸಲು ರಷ್ಯಾದ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸುತ್ತಿರುವುದಾಗಿ ತಿಳಿಸಿದೆ. ಘಟನೆಯಲ್ಲಿ ಇಬ್ಬರು ವಿದ್ಯಾರ್ಥಿಗಳು ಮತ್ತು ಇಬ್ಬರು ವಿದ್ಯಾರ್ಥಿನಿಯರು ಮೃತಪಟ್ಟಿದ್ದು, ಇವರ ವಯಸ್ಸು ಅಂದಾಜು 18–20 ವರ್ಷ. ಇವರು ವೆಲಿಕಿ ನೊವ್ಗೊರೊಡ್ ನಗರದ ಸಮೀಪದಲ್ಲಿರುವ ನೊವ್ಗೊರೊಡ್ ಸ್ಟೇಟ್ ಯೂನಿವರ್ಸಿಟಿಯಲ್ಲಿ ಅಧ್ಯಯನ ಮಾಡುತ್ತಿದ್ದರು ಎಂದು ಮೂಲಗಳು ವರದಿ ಮಾಡಿವೆ. ವೋಲ್ಖೋವ್ ನದಿಗೆ ಬಿದ್ದ ವಿದ್ಯಾರ್ಥಿನಿಯನ್ನು ರಕ್ಷಿಸಲು ಆಕೆಯ ನಾಲ್ವರು ಸ್ನೇಹಿತರು ಯತ್ನಿಸಿದ ವೇಳೆ ಈ ದುರಂತ ನಡೆದಿದೆ ಈ ಪೈಕಿ ಓರ್ವನನ್ನು ಸ್ಥಳೀಯರು ರಕ್ಷಿಸಿದ್ದಾರೆ. ಸದ್ಯ ಆತನಿಗೆ ಚಿಕಿತ್ಸೆ ನೀಡಲಾಗುತ್ತಿದೆ ಎಂದು ರಷ್ಯಾದ ಮಾಧ್ಯಮಗಳು ಹೇಳಿವೆ. ಸಾಧ್ಯ ವಾದಷ್ಟು ಬೇಗ ಶವಗಳನ್ನು ಸಂಬಂಧಿಕರಿಗೆ ಕಳುಹಿಸಲು ನಾವು ಕಾರ್ಯಪ್ರವೃತ್ತರಾಗಿದ್ದೇವೆ. ಅಪಾಯದಿಂದ ಪಾರಾದ ವಿದ್ಯಾರ್ಥಿಗೆ ಸೂಕ್ತ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಮಾಸ್ಕೋದಲ್ಲಿನ ಭಾರತೀಯ ರಾಯಭಾರ ಕಚೇರಿ ತಿಳಿಸಿದೆ

ಇಸ್ರೇಲ್ ವೈಮಾನಿಕ ದಾಳಿ: 274 ಪ್ಯಾಲೆಸ್ತೀನಿಯರು ಸಾವು!

ಜೆರುಸಲೇಂ: ಹಮಾಸ್ ಮತ್ತು ಇಸ್ರೇಲ್ ನಡುವೆ ನಡೆಯುತ್ತಿರುವ ಯುದ್ಧ ನಿಲ್ಲುವ ಲಕ್ಷಣಗಳು ಕಾಣುತ್ತಿಲ್ಲ. ಹಮಾಸ್ ಇಸ್ರೇಲಿಗರನ್ನು ಒತ್ತೆಯಾಳಾಗಿ ಇರಿಸಿಕೊಂಡಿದೆ. ಇಸ್ರೇಲ್ ತನ್ನ ಒತ್ತೆಯಾಳುಗಳನ್ನು ರಕ್ಷಿಸಲು ಕಾರ್ಯಾಚರಣೆಯನ್ನು ನಡೆಸುತ್ತಿದ್ದು ಈ ಕಾರಣದಿಂದಾಗಿ ಇಸ್ರೇಲ್ ಕೇಂದ್ರ ಗಾಜಾದಲ್ಲಿ ನೆಲ ಮತ್ತು ವಾಯುದಾಳಿಗಳನ್ನು ನಡೆಸುತ್ತಿದೆ.

ಈ ಇಸ್ರೇಲ್ ಒತ್ತೆಯಾಳು ರಕ್ಷಣಾ ಕಾರ್ಯಾಚರಣೆಯಲ್ಲಿ ತಮ್ಮ ನಾಲ್ಕು ಜನರನ್ನು ಸುರಕ್ಷಿತವಾಗಿ ರಕ್ಷಿಸಿದೆ. ಇಸ್ರೇಲಿ ದಾಳಿಯಲ್ಲಿ ಮಕ್ಕಳು ಸೇರಿದಂತೆ 274 ಪ್ಯಾಲೆಸ್ಟೀನಿಯರು ಸಾವನ್ನಪ್ಪಿದ್ದಾರೆ. 26 ವರ್ಷದ ನೋಹ್ ಅರ್ಗಾಮಣಿ, 22 ವರ್ಷದ ಅಲ್ಮೊಗ್ ಮೀರ್ ಜಾನ್, 27 ವರ್ಷದ ಆಂಡ್ರೆ ಕೊಜ್ಲೋವ್ ಮತ್ತು 41 ವರ್ಷದ ಶ್ಲೋಮಿ ಝಿವ್ ಅವರನ್ನು ರಕ್ಷಿಸಲಾಗಿದೆ ಎಂದು ಇಸ್ರೇಲ್ ಸೇನೆ ತಿಳಿಸಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821– 2496522/23

ಮನೆ ಮಾರಾಟಕ್ಕಿದೆ
20X30 ಅಳತೆ ಎರಡು ಅಂತಸ್ತು ಒಂದು ಮಳಿಗೆ ಇರುವ ಪೂರ್ವ ದಿಕ್ಕಿನ ಕಾರ್ನರ್ ಮನೆ ಶಾರದಾದೇವಿನಗರದಲ್ಲಿ ಮಾರಾಟಕ್ಕಿದೆ.
ಸಂಪರ್ಕಿಸಿ 9845395000 | 9916283454



ಅಪ್ಪು ಸರ್ ಸ್ಫೂರ್ತಿ
ಉಚಿತ ಕಂಪ್ಯೂಟರ್ ಶಿಕ್ಷಣಕ್ಕೆ ಅರ್ಜಿ
Basic, MS Office, Excel (A) Photoshop, HTML, C++ Coreldraw, Nudi, Tally, Typing Class, Hardware, Networking, Pagemaker,
CALL: 7760240575
ಮಂಡಿ ಮೊಹಲ್ಲಾ, ಮೈಸೂರು *T&C Apply

ಬೇಕಾಗಿದ್ದಾರೆ
Full Time / Part Time ಕುವೆಂಪುನಗರದಲ್ಲಿರುವ ಲಸ್ಸಿಶಾಪ್‌ಗೆ
9448054151, 9742792518

ಸೈಟ್ ಮಾರಾಟಕ್ಕಿದೆ
30x40 S/F ಅಭಿವೃದ್ಧಿ ಬಡಾವಣೆ, ಜಯಪುರ, ಹೆಚ್.ಡಿ.ಕೋಟೆ ಮುಖ್ಯರಸ್ತೆ, Opp to Petrol Bunk and Choultry
8971261355

WANTED
COMPUTER TYPIST (Male / Female) FOR ADVOCATE OFFICE
Qualification: Typing - English & Kannada (Kan - Nudi / Baraha) in M.S. Word & Excel / Page Maker 9.30 am to 2 pm. Sunday: 10.30 to 3 pm. Salary: 10,000/- per month. For evening: (Male only). 6.30 pm to 11.30 pm. Salary: Rs. 10,000/- per month.
7349337469, 9448525072

EAST FACE MUDA APPROVED 40X60 SITE FOR SALE
NITYANANDASAGARA HUILALU MYSORE
8217851695

ಮೆಕ್ಯಾನಿಕ್ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿಯಲ್ಲಿರುವ ಸಣ್ಣ ಕೈಗಾರಿಕಾ ಘಟಕಕ್ಕೆ, ಕೈಗಾರಿಕಾ ಘಟಕದಲ್ಲಿ ಕನಿಷ್ಠ 3 ವರ್ಷ ಅನುಭವವಿರುವ ITI ಯಾದವರು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ:
90350 08247

ನಮ್ಮಲ್ಲಿ ಎಲ್ಲಾ ತರಹದ ಕಾಂಚಿಪುರಂ ಮತ್ತಿತರ ಸೀರೆಗಳು ಲಭ್ಯವಿದ್ದು, ಮನೆ ಬಾಗಿಲಿಗೆ ತಲುಪಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ
7975026220

ADMISSION OPEN
Govt.of Karnataka Dept. of Tourism FOOD CRAFT INSTITUTE-MYSURU EXHIBITION GROUND. ITTEGEGUDU
HOTEL MANAGEMENT
100% Job Placements | Govt. College | 80% Practical Classes
www.fcimysuru.com
6362018821

INVESTMENT REQUIRED
INVEST 6 TO 8 LAKHS FOR REAL ESTATE PROJECT GET 50% RETURNS + INVESTMENT AMOUNT IN JUST SIX MONTHS
GENUINE PEOPLE CALL 8722582235

30x40 / 30x50 Corner & Middle Muda Approved Sites
ನಮ್ಮ ಬಡಾವಣೆಗಳಲ್ಲಿ ತಕ್ಷಣ ಮನೆ ಕಟ್ಟಲು 80 % ಲೋನ್ ಕೂಡ ಲಭ್ಯ
SBM / ರೂಪನಗರ ಪಕ್ಕ–58 ಲಕ್ಷ
Police/JSS Layout ಪಕ್ಕ – 46.5 ಲಕ್ಷ
ಶ್ರೀರಾಂಪುರ ರಿಂಗ್ ರಸ್ತೆ ಪಕ್ಕ– 60 ಲಕ್ಷ
Broker Excuse
7892445689

MODULAR KITCHEN @ ₹99,000/-*
Home Space Mart
*T&C Apply
91089 23123

ಸುವರ್ಣ ಯಾತ್ರ
1) ಗುಜರಾತ್ ಪ್ರವಾಸ 8 ದಿನಗಳು 18–7–2024.
2) ನೇಪಾಳ, ಪಶುಪತಿನಾಥ, ಮುಕ್ತಿನಾಥ, ಅಯೋಧ್ಯೆ ಪ್ರವಾಸ 9 ದಿನಗಳು 18–6–2024 ಹಾಗೂ 24–7–2024.
3) ಕಾಶಿ, ಗಯಾ, ಬಾಬಾ ಬೈದ್ಯನಾಥ್, ಅಯೋಧ್ಯೆ 7 ದಿನಗಳು 23–7–2024.
8660233673, 9480843945

ಸೈಟ್ ಮಾರಾಟಕ್ಕಿದೆ ಮೂಡಾ ಅಪ್ರೂವ್ಡ್ 40X60
ಪೂರ್ವ ದಿಕ್ಕು, ನಿತ್ಯಾನಂದಸಾಗರ ಹುಯಿಲಾಳು ಮೈಸೂರು
8217851695

WANTED
Driver & Delivery Boys for E-Commerce Four & Two wheller
8310381391
9035757342
8867366268

ಮನೆ ಮಾರಾಟಕ್ಕಿದೆ
ಹುಣಸೂರು ಟೌನ್ ಮಂಜುನಾಥ ಬಡಾವಣೆಯಲ್ಲಿರುವ ಮನೆ ನಂ.30/31ರಲ್ಲಿ 50x30 ಅಳತೆಯ Ground Floor ಹಾಗೂ 1st Floorನಲ್ಲಿ ನಿರ್ಮಿತವಾಗಿರುವ ಹಾಗೂ ಎಲ್ಲಾ ಸೌಕರ್ಯ ಇರುವ ಮನೆ ಮಾರಾಟಕ್ಕಿದೆ ಆಸಕ್ತಿಯುಳ್ಳವರು ಸಂಪರ್ಕಿಸಬೇಕಾಗಿರುವ ನಂ.
8951845253

ಬೇಕಾಗಿದ್ದಾರೆ ಸೆಕ್ಯೂರಿಟಿ ಗಾರ್ಡುಗಳು
ಸ್ಥಳ: ನಜರ್‌ಬಾದ್, ವಿದ್ಯಾರಣ್ಯಪುರಂ ಪಡುವಾರಹಳ್ಳಿ, ಕೆ.ಆರ್.ಎಸ್., ಅಗ್ರಹಾರ, ಸಾತಗಳ್ಳಿ, ಬೆಳಗೊಳ, ಇಂಡಸ್ಟ್ರಿಯಲ್ ಏರಿಯಾ ಉಚಿತ ವಸತಿ / ESI/PF ಹಾಗೂ ಆಕರ್ಷಕ ಸಂಬಳ ನಿಗದಿತ ಸಮಯಕ್ಕೆ
9686422400
9242406261

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

FOR SALE
1. 20x30, 30x40, 30x50 Near Defence Apartments, HD Kote Road
2. 30x50 Near Varuna Lake
3. 2&3 BHK Flats at RK Nagar
4. 70x140 Farm House Plots @ KRS Back Water Attach 20L
5. 50x30 Site@Saraswathi Puram Semi Commercial
6. 20x30, Sites For Sale At Yelwala 30x40 Sites at Bogadi Rainbow School
PRAKRUTHI PROPERTIES
95386 90359, 90359 90359

ಬೇಕಾಗಿದ್ದಾರೆ
1) ಕಂಪ್ಯೂಟರ್ ಜ್ಞಾನ ಉಳ್ಳವರು (ಹುಡುಗಿಯರು – Unmarried)
2) ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ. Unmarried)
ವಿಚಾರಿಸಿ : ಚೇತನ ಬುಕ್ ಹೌಸ್ ನಾರಾಯಣಶಾಸ್ತ್ರಿ ರಸ್ತೆ, ಮೈಸೂರು

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981



GEMINI ROLLING SHUTTER
MANUFACTURER OF : ROLLING SHUTTER MATERIALS & PARTS
9740788263

ಬೋಳು ತಲೆಯ ಸಮಸ್ಯೆಯೇ?



ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಹೊಸ ಮನೆ ಮಾರಾಟಕ್ಕೆ ಹಾಗೂ ಸೈಟುಗಳು ಮಾರಾಟಕ್ಕಿವೆ
ಶ್ರೀರಾಂಪುರ ರಿಂಗ್ ರಸ್ತೆ ಹಾಗೂ ಶ್ರೀನಗರ ಹಿಂಭಾಗ, ಮೈಸೂರು
8050345574

ಸಪ್ತಪದಿ ಮ್ಯಾಟ್ರಿಮೋನಿ (ರಿ.)
BE/MBA/M.TECH/MCA/MBBS/ MD/MS AND ANY DEGRE ಯ INDIA/USA/UK/GERMANY/ CANADA/AUSTRALIA/BANGALORE /MYSORE ನ ವಧು–ವರರ ಮಾಹಿತಿ/ ನೊಂದಣಿಗಾಗಿ ಸಂಪರ್ಕಿಸಿ
9663199511
ಕಂಪ್ಯೂಟರ್ ತಿಳಿದಿರುವ ಮಹಿಳೆ ಕೆಲಸಕ್ಕೆ ಬೇಕಾಗಿದ್ದಾರೆ.

ಬೇಕಾಗಿದ್ದಾರೆ
24 ಅಡಿ CNG ಮತ್ತು ಕಂಟೈನರ್ ವಾಹನಗಳನ್ನು ಚಲಾಯಿಸಲು ಟ್ರಕ್ ಡ್ರೈವರ್ ಬೇಕಾಗಿದ್ದಾರೆ. PF & ESI ಸೌಲಭ್ಯವಿದೆ. 50 ವರ್ಷಕ್ಕಿಂತ ಮೇಲ್ಪಟ್ಟವರು ಸಹ ಅರ್ಜಿ ಸಲ್ಲಿಸಬಹುದು. ಮೈಸೂರಿನ ಸ್ಥಳೀಯರಿಗೆ ಆದ್ಯತೆ
ಸಂಪರ್ಕಿಸಿ 9341623350

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ: 7406375196, 9880548596

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8880558064

WANTED IMMEDIATELY
Boiler Operator Class 2 Male Exp: 1 to 2 years.
Cooks Male Exp 1 to 2 years.
Quality Executive (Qualification B.Sc., Food Science) Male Exp: Min. 1 year.
Address: The Akshayapatra Foundation, Mysore, No. 31, 18th Cross, Jayanagar, Mysore.
9964451366

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8861401315

SITE FOR SALE
40X60 at Kuvempunagar & Dattagalli
40x60 G&F House at Ramakrishnanagar
9844911156
9663136318

ಬೇಕಾಗಿದ್ದಾರೆ
1) ಹೌಸ್ ಕೀಪರ್‌ಗಳು (ಮಹಿಳೆಯರು ಹಾಗೂ ಪುರುಷರು)
ಸ್ಥಳ: 1) ಸಾತಗಳ್ಳಿ 2) ಅಗ್ರಹಾರ ಆಸ್ಪತ್ರೆ 3) ಮೇಟಗಳ್ಳಿ ಕಾಲೇಜ್
2) ಸೆಕ್ಯೂರಿಟಿ ಗಾರ್ಡುಗಳು
ಸ್ಥಳ: 1) ಪಡುವಾರಹಳ್ಳಿ 2) ನಜರ್‌ಬಾದ್ 3) ಮೈಸೂರು ಸಿಟಿ ಸುತ್ತಮುತ್ತ 4) ಶ್ರೀರಂಗಪಟ್ಟಣ ESI /PF / Salary
9686566261,7259526261

20x30 ಮನೆ ಮಾರಾಟಕ್ಕಿದೆ
20x30 ಎರಡು ವರ್ಷದ ಟ್ರಿಪ್ಲೆಕ್ಸ್, ಫುಲ್ ಟೀಕ್, 3 ಬೆಡ್ ರೂಂ, 3 ಹಾಲ್, ಯುಟಿಲಿಟಿ, ಸಿಟ್‌ಔಟ್ ಎಲ್ಲಾ ಇರುವ ಉತ್ತಮವಾದ ಮನೆ, ಆಂದೋಲನ ಸರ್ಕಲ್ ಹತ್ತಿರ ಮಾರಾಟಕ್ಕಿದೆ. ಸಂಪರ್ಕಿಸಿ:
Mob: 9945245946

neem BOND PLATINUM PLYWOOD DOORS
10 YEARS WARRANTY
@ FACTORY DEPOT RATES
9731591267, 9901291267

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್‌ಗಳು
2) ಸೆಕ್ಯೂರಿಟಿ ಫೀಲ್ಡ್ ಆಫೀಸರ್
ವಯೋಮಿತಿ: 25 ರಿಂದ 45 ವರ್ಷದೊಳಗಿನ SSLC & ಮೇಲ್ಪಟ್ಟ ವಿದ್ಯಾರ್ಹತೆವುಳ್ಳ ಅಭ್ಯರ್ಥಿಗಳು ಬೇಕಾಗಿದ್ದಾರೆ. ESI & PF ಸೌಲಭ್ಯವಿದೆ. ಸಂಪರ್ಕಿಸಿ:
9739199355, 9844235981

ತಕ್ಷಣವೇ ಬೇಕಾಗಿದ್ದಾರೆ
ಮೈಸೂರು ಹೆಬ್ಬಾಳಿನ ಕಂಪನಿಯಲ್ಲಿ ಕೆಲಸ ಮಾಡಲು ಹುಡುಗರು, ಹುಡುಗಿಯರು, ಗಂಡಸರು, ಹೆಂಗಸರು, ಟೈಲರುಗಳು ಮತ್ತು ಹೆಲ್ಪರ್‌ಗಳು, ಸೆಕ್ಯೂರಿಟಿಗಳು ಬೇಕಾಗಿದ್ದಾರೆ. ESI & PF. ವಾರದ ರಜೆ ಇರುತ್ತದೆ.
7795285485, 8105249880

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಯುವಕರು (ಹುಡುಗರು) ಬೇಕಾಗಿದ್ದಾರೆ. ಆಕರ್ಷಕ ಸಂಬಳ. ESI and PF ನೊಂದಿಗೆ ಉಚಿತ ವಸತಿ ಸೌಲಭ್ಯವಿರುತ್ತದೆ. 6 ತಿಂಗಳಿಗೊಮ್ಮೆ ವೇತನವನ್ನು ಹೆಚ್ಚು ಮಾಡಲಾಗುವುದು. ಸ್ಥಳ: ಬಂಡಿಪಾಳ್ಯ, ಮೈಸೂರು. ಸಂಪರ್ಕಿಸಿ:
Mob: 9739294107

SITE FOR SALE
40X40 Corner Vishwamanava Enclave Vijayanagar 4th Stage
8050821108
8792207164

AVAILABLE
Shop No.3 For Rent (West Side) Measuring 10x10 ft Rent Rs. 3500/- Advance Rs.35,000/-
Godown For Rent (North Side) Measuring 10x40x ft Rent Rs.10.000/- Advance Rs.1,00,000/- (Both are Negotiable)
No.894/A, 4th Main Road, 27th Cross Corner, Vidyaranyapuram, Near Sterling Theatre, Mysore
9448872684,9900079871

LAND FOR SALE IN CHAMARAJANAGAR TOWN
1 ಎಕರೆ ಕಮರ್ಷಿಯಲ್ ಅಲಿನೆಟೆಡ್ ಲ್ಯಾಂಡ್ ಮಾರಾಟಕ್ಕಿದೆ. ಬಂಜಾರ್ ಶಾಲೆ, ಹೊಸ ಬೈಪಾಸ್ ಹತ್ತಿರ, ರೂ. 3ಲಕ್ಷ ಪ್ರತಿ ಗುಂಟೆಗೆ
9483637770 (ಮೆಸೇಜ್ ಮಾತ್ರ)

ವಿವಾಹ ಭಾಗ್ಯ
ಎಲ್ಲಾ ಧರ್ಮದ, ಭಾಷೆಯ ಹಾಗೂ ಜಾತಿಯ ವಧು ವರರಿಗಾಗಿ ಸಂಪರ್ಕಿಸಿ
1) ಮೊದಲನೆ ಮದುವೆ
2) ಎರಡನೆ ಮದುವೆ
3) ವಿಧವೆ / ವಿಧುರರು
MRJ Matrimony
8904890413, 8904890419

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡಿ ಪ್ರತಿ ತಿಂಗಳಿಗೆ ರೂ. 15,000 ಸಂಪಾದಿಸಿ.
Mob: 9731891409

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

HOUSE Sale Niveditanagar
4 BHK,10 Yrs Old 30x40, E/F Door, S/F Site, Fully Renovated Price - 1.69 Cr
8660105902

MYSORE DIAGNOSTIC CENTRE PVT.LTD. WANTED
1) Administrator (2-3 Experience in Dignotic Centre (Female / Male)
2) Marketing Executive (2-3 year Experience in - Male Dignostic Centre - 3)
3) CT - Technician - Male / Female
4) Sample Boy
9845272844, 9739400641

TEACHERS WANTED
Sadviveka English Medium School Vijayanagar 4th Stage, Basavanapura, Mysore-32
NST, PUC, D.Ed, BA, B.Sc B.Ed, MA, M.Sc ಆದ ಶಿಕ್ಷಕರು ಬೇಕಾಗಿದ್ದಾರೆ.
Contact: I.E. Manjunatha, Secratory
9986567404

HOUSE SALE VIJAYANAGAR,
4 Floors Rent Earning 1 Year Old House, 30x40,MUDA, Price - 1.95 Cr,
Vijayanagar 4th Stage, 1st Phase
500 Mtrs From Aishwarya Hospital
8660105902

SITES for SALE
JP Nagar Ring Road 30 x 40 - 33 Lakhs, Near Gurur Bus Stop, Ramabainagar,Mysore.
DTCP approved (Corporation limits)
1.5 Kms from JP Nagar Ring Road
8660105902

HOUSE SALE at GOKULAM
40x60, 2+2 BHK Old House,East South Corner, MUDA Price - 2.79 Cr,
Near Star Bucks
8660105902

ಬಾಡಿಗೆಗೆ ಲಭ್ಯವಿದೆ
1.5 ಎಕರೆ ಜಮೀನಿನಲ್ಲಿ (ಸುತ್ತ ಬೇಲಿ) ಮನೆ/ಬೌರ್ ನೀರು ಸೌಲಭ್ಯವಿದೆ. ಬಿಳಿಕೆರೆ ಹತ್ತಿರ, ಕುಪ್ಪೆ ಗ್ರಾಮ, ಮೈಸೂರು–ಹುಣಸೂರು ಮುಖ್ಯ ರಸ್ತೆ ಹತ್ತಿರವಿರುತ್ತದೆ. (ಹೈನುಗಾರಿಕೆ / ವ್ಯವಸಾಯಕ್ಕೆ ಲಭ್ಯವಿದೆ.)
9972837203
9945419648

ತೇಜಸ್ವಿನಿ ಟೂರಿಸ್ಟ್
25–6–24 ರಿಂದ 12 ದಿನ ಕಾಶಿ, ಗಯಾ, ಅಯೋಧ್ಯೆ, ಪ್ರಯಾಗ್‌ರಾಜ್, ನೈಮಿಷಾರಣ್ಯ, ಸಾರಾನಾಥ್, ಇತ್ಯಾದಿ.
6–9–24 ರಿಂದ 18 ದಿನ ಚಾರ್‌ಧಾಮ್ ಯಾತ್ರೆ, ಕಾಶಿ, ಅಯೋಧ್ಯೆ, ಆಗ್ರ, ದೆಹಲಿ, ಹರಿದ್ವಾರ್, ಉತ್ತರಕಾಶಿ, ಗುಪ್ತಕಾಶಿ, ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯಮುನೋತ್ರಿ, ಇತ್ಯಾದಿ.
Mob: 9379792644

ಸೈಟ್ ಫಾರ್ ಸೇಲ್
ಏರ್‌ಪೋರ್ಟ್ ಹಿಂಭಾಗದ ಸ್ಟೇಟ್ ಹೈವೇನಲ್ಲಿರುವ ಲೇಔಟ್, ಮುಡಾ ಖಾತೆ, ಈಸ್ಟ್ ಫೇಸಿಂಗ್ ಕಾರ್ನರ್ ಸೈಟ್, 30x40. ಅಂದಾಜು 35 ಲಕ್ಷ.
9342123373

ಸೈಟುಗಳು ಮಾರಾಟಕ್ಕಿವೆ
ಸುಲಭವಾಗಿ 15 ಕಂತುಗಳಲ್ಲಿ ಪಾವತಿಸಿ Govt ಹೈಸ್ಕೂಲ್ & ಕಾಲೇಜು ಹತ್ತಿರ Yelwala ನಂತರ
8050009696

HOUSE FOR SALE
Preethi Layout, Srirampura, IIStage Mysore
GF- 2 Shops + 2BHK
FF- 3BHK
SF- Room with Attached Bathroom & Kitechan
Borewell + Solar
9342183724

WANTED
FOR AN INDUSTRY IN MYSORE @ METAGALLI
1. TECHNICIANS, ITI ELECTRICAL / ELECTRONICS
2. DIPLOMA - ELECTRICAL / ELECTRONICS
CONTACT BETWEEN : 10.00 AM TO 5.00PM
9901178588

ಮನೆ ಬಾಡಿಗೆಗೆ ಇದೆ
ಮಹಡಿಯಲ್ಲಿ 1 ಬೆಡ್ ರೂಂ ಮನೆ ಮತ್ತು 2 ಬೆಡ್ ರೂಂನ ಮನೆ, ಶ್ರೀರಾಂಪುರ ಮುಖ್ಯ ರಸ್ತೆ, ವಿವೇಕಾನಂದ ಸರ್ಕಲ್ ಬಳಿ, ವಾಣಿಜ್ಯೋದ್ದೇಶಕ್ಕೂ ಸೂಕ್ತವಾಗಿದೆ.
9448047419

ಬೇಕಾಗಿದ್ದಾರೆ
ಹೆಬ್ಬಾಳು, ಮೇಟಗಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ ITI, Diploma, B.Com, 8th to 2nd PUC, ವರೆಗೆ ಊಟ ವಸತಿ. ESI & PF ಮತ್ತು ವಾಹನ ಸೌಲಭ್ಯ ಇರುತ್ತದೆ. ಸಂಬಳ 11500 ರಿಂದ 18000 ಇರುತ್ತದೆ.
8951869646
9902645646

WANTED
B.Sc, B.Ed. Science Teacher (CBZ)
Apply to: The Head Master St. Philomena's High School N.R.Mohalla, Mysore
7406860694

ತಕ್ಷಣ ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹೆಲ್ಪರ್ ಮತ್ತು ಕ್ಯಾಷಿಯರ್ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು
6364748485

ಬೇಕಾಗಿದ್ದಾರೆ
18 ರಿಂದ 35 ವಯಸ್ಸಿನ SSLC ಉತ್ತೀರ್ಣ / ಅನುತ್ತೀರ್ಣ ಮೈಸೂರಿನಿಂದ 10 ಕಿಮೀ ಒಳಗೆ ವಾಸಮಾಡುವ ಮಹಿಳೆಯರು ಕಾರ್ಖಾನೆಗೆ 7am to 3pm Shift ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ವೇತನ 13158/-ESI, PF ಸೌಲಭ್ಯವಿರುತ್ತದೆ.
ರಮೇಶ್: 9986859930
ಪ್ರಕಾಶ್: 8971460235
KOMAL ENTERPRISES
GRS Fantacy Park Back SIde, Metagalli, Mysore

WANTED
Supervisors- M/F Candidate
Education : Below SSLC / PUC
Part Time Work
Age Limit Below 40 Yrs
Salary 8 K to 10 K
9148067355
8971415100

ಕಳೆದಿದೆ
ಶ್ರೀ ಎಂ.ಆರ್.ಶಂಕರ್ ನಂ. 443 ಎಂ. ಸಪ್ತಮಾತೃಕಾ ಲೇಔಟ್, ಯಾಂದಹಳ್ಳಿ ಗ್ರಾಮ ವರುಣಾ ಹೋಬಳಿ, ಮೈಸೂರು ತಾಲ್ಲೂಕು, ಈ ನಿವೇಶನದ ನೋಂದಾಯಿತ ಕ್ರಯಪತ್ರವು ಕಳೆದು ಹೋಗಿರುತ್ತದೆ. ಯಾರಿಗಾದರೂ ಸಿಕ್ಕಿದಲ್ಲಿ ಸಂಪರ್ಕಿಸಿ:
9880553079
ನಂ.677, 17ನೇ ಕ್ರಾಸ್, ಸರಸ್ವತಿಪುರಂ, ಮೈಸೂರು

ಸೆಕ್ಯೂರಿಟಿ ಗಾರ್ಡ್/ಹೌಸ್ ಕೀಪಿಂಗ್
ಸೆಕ್ಯೂರಿಟಿ ಗಾರ್ಡ್ – 10 ನಂ. (ಪ್ರತಿ ದಿನ 500 ರೂಪಾಯಿಗಳು) (ವಯಸ್ಸು 21 ರಿಂದ 55 ವರ್ಷದವರಿಗೆ)
ಹೌಸ್ ಕೀಪಿಂಗ್ ಡ್ಯೂಟಿ (ಪ್ರತಿ ದಿನ 500 ರೂಪಾಯಿಗಳು)
ಊಟ, 8 ಗಂಟೆ ಕೆಲಸ, ಇತರೆ ಸೌಲಭ್ಯವಿದೆ
9900749104
9036745292

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ಯುವಕ/ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. ಯಾವುದೇ ರೀತಿಯ ಶುಲ್ಕ ಇರುವುದಿಲ್ಲ (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ ಉಚಿತ ಊಟ ವಸತಿಯೊಂದಿಗೆ 15000 ರಿಂದ 20000ರವರೆಗೆ
9845010281

ಮಳಿಗೆ ಬಾಡಿಗೆಗೆ ಇದೆ SHOP FOR RENT
14x21 ft Near Sangam Bhandar Bus Stop, Prashanth Nagar, Bogadi 2nd Stage, Mysore-570026
8762988145
9481057802

FOR RENT/LEASE
I Floor-4BHK - 18 Sq
II Floor - 4 BHK 18 Sq
GF Shop Rent-3 Sq
No. 1555, Vijayanagar II Stage, HT Double Road, Mysore-570017
9663604699

ಬೇಕಾಗಿದ್ದಾರೆ
ಸೀರೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗ ಬೇಕಾಗಿದ್ದಾರೆ. (ವಯಸ್ಸು 22–35 ವರ್ಷಗಳು) ಮತ್ತು ಬೊಟಿಕ್‌ನಲ್ಲಿ ಕೆಲಸ ಮಾಡಲು ಹುಡುಗಿ ಬೇಕಾಗಿದ್ದಾರೆ.
8296695765
9164140808

ಬೇಕಾಗಿದ್ದಾರೆ
ಮೈಸೂರಿನ ಹುಲ್ಲಹಳ್ಳಿಯಲ್ಲಿರುವ ಕಪಿಲಾ ರಿವರ್ ಫ್ರಂಟ್ ರೆಸಾರ್ಟ್‌ನಲ್ಲಿ ಕೆಲಸ ಮಾಡಲು ಅಡುಗೆ ಸಿಬ್ಬಂದಿ ಬೇಕಾಗಿದ್ದಾರೆ. ನಾರ್ತ್ ಹಾಗೂ ಸೌತ್ ಇಂಡಿಯನ್ ಅಡುಗೆ ಮಾಡಲು ಬರಬೇಕು. ಕನಿಷ್ಠ 4 ವರ್ಷಗಳ ಅನುಭವ ಅಗತ್ಯ. ವಸತಿ ವ್ಯವಸ್ಥೆ ಉತ್ತಮ ಸಂಬಳ ನೀಡಲಾಗುತ್ತದೆ. ಆಸಕ್ತಿ ಇದ್ದವರು ಸಂಪರ್ಕಿಸಬೇಕಾದ ಸಂಖ್ಯೆ
7259588826

ಅನುಬಂಧ ಮ್ಯಾರೇಜಸ್
ಒಕ್ಕಲಿಗ MA ಸರ್ಕಾರಿ ಅಧಿಕಾರಿ ಕೋಟ್ಯಾಧೀಶ್ವರ ಸುಂದರ ಶ್ರೀಮಂತ ವರನಿಗೆ ಸುಂದರ ವಿದ್ಯಾವಂತ ವಧು, ವಿಧವೆ, ವಿಚ್ಛೇದಿತರು ನೇರ ಸಂಪರ್ಕಿಸಿ ಜಾತಿ ಅಭ್ಯಂತರ ಇಲ್ಲ
6361740552

ಬೇಕಾಗಿದ್ದಾರೆ
ಹಾಸ್ಟೆಲ್‌ಗೆ ಅಡುಗೆ ಹೆಲ್ಪರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸ್ಥಳ: ಸುಳ್ಯ
9902176566

ಟೈಲರ್‌ಗಳು ಬೇಕಾಗಿದ್ದಾರೆ
ಜೆ.ಎಸ್.ಎಸ್ ಮಹಿಳೆಯರ ಕಾಲೇಜು ಹಿಂಬಾಗ ಸರಸ್ವತಿಪುರಂ, ಮೈಸೂರು
ಮಹಿಳೆಯರ ಉಡುಪುಗಳನ್ನು ಹೊಲೆಯಲು ಟೈಲರ್‌ಗಳು ಬೇಕಾಗಿದ್ದಾರೆ
ಸಂಪರ್ಕಿಸಿ: 70229 42916

ಮೈಸೂರು ಮಿತ್ರ ಸೋಮವಾರ 10 ಜೂನ್ 2024

ಮೂರನೇ ಪುಟದಿಂದ

ಉಪ ಪಂಗಡಗಳು ಒಂದಾಗಬೇಕು

ಮಂಟಪ ವಿಶ್ವದ ಮೊದಲ ಸಂಸತ್ ಆಗಿದೆ. ಕಾಯಕ ಸಮುದಾಯವನ್ನು ಒಂದುಗೂಡಿ ಸಿದ ಬಸವಣ್ಣ ಅನುಭವ ಮಂಟಪದಲ್ಲಿ ಅವರಿಗೆ ಸ್ಥಾನ ನೀಡಿದರು. ಈ ಮೂಲಕ ಸುಂದರ ಹಾಗೂ ಸುಖಿ ಸಮಾಜ ನಿರ್ಮಾಣ ಮಾಡಲು ಪ್ರಯತ್ನಿಸಿದರು. ಆದರೆ 800 ವರ್ಷ ವಾದರೂ ಬಸವಣ್ಣನವರ ಜಾತ್ಯಾ ತೀತ ಸಮಾಜ ಪರಿಕಲ್ಪನೆ ಇನ್ನೂ ಪೂರ್ಣ ಪ್ರಮಾಣ ದಲ್ಲಿ ಈಡೇರಿಲ್ಲ ಎಂದರು. ಅಸಮಾನತೆ, ಜಾತಿ ವ್ಯವಸ್ಥೆ ವಿರುದ್ಧ ಬಸವಣ್ಣ ದನಿ ಎತ್ತಿದರು. ಸಂಸ್ಕೃತದ ಪ್ರಭಾವ ಇದ್ದ ಸಮಯದಲ್ಲಿ ಶುದ್ಧ ಕನ್ನಡದಲ್ಲಿ ವಚನ ಕ್ರಾಂತಿ ಮಾಡಿದರು. ಈ ಮೂಲಕ ಸಮಾನತೆಯ ಸಮಾಜ ಚಳವಳಿಗೆ ಸ್ಫೂರ್ತಿಯಾದರು ಎಂದು ತಿಳಿಸಿದರು.

ಜಾತ್ಯಾತೀತ ಸಮಾಜ ನಿರ್ಮಾಣ ಆಗದಿದ್ದರೆ ಭವಿಷ್ಯವಿಲ್ಲ: ಜಾತ್ಯಾತೀತ ಸಮಾಜ ನಿರ್ಮಾಣವಾಗದಿದ್ದರೆ ಭವಿಷ್ಯತ್ತಿನಲ್ಲಿ ಮನುಕುಲಕ್ಕೆ ಉಜ್ವಲ ಭವಿಷ್ಯವಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಎಚ್ಚರಿಸಿದರು. ಜಾತಿ ಶ್ರೇಷ್ಠತೆ ವಿರುದ್ಧ ಬಸವಣ್ಣ ದನಿ ಎತ್ತಿದರು. ವಚನ ಕ್ರಾಂತಿ ಮೂಲಕ ಸಮಾಜದಲ್ಲಿರುವ ಅಸಮಾನತೆ ತೊಡೆದು ಹಾಕಲು ಬುನಾದಿ ಹಾಕಿದರು. ಈ ಹಿನ್ನೆಲೆಯಲ್ಲಿ ಮೌಢ್ಯತೆ, ಶೋಷಣೆ, ಜಾತೀಯತೆ ವಿರುದ್ಧ ಬಸವ ಜಯಂತಿ ಆಚರಣೆ ಮಾಡಲಾಗುತ್ತಿದೆ. ಈ ಮೂಲಕ ಸಮಾನತೆಯ ಸಮಾಜ ನಿರ್ಮಾಣಕ್ಕಾಗಿ ಪ್ರಯತ್ನಿಸಲಾಗು ತ್ತಿದೆ ಎಂದು ಡಾ.ಮಹದೇವಪ್ಪ ಹೇಳಿದರು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದ ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ಶಾಸಕರಾದ ವಿನಯ್ ಕುಲಕರ್ಣಿ, ಡಾ.ತಿಮ್ಮಯ್ಯ, ಡಾ.ಯತೀಂದ್ರ, ಗಣೇಶ್ ಪ್ರಸಾದ್, ಮುಡಾ ಅಧ್ಯಕ್ಷ ಕೆ.ಮರಿಗೌಡ, ವಕೀಲ ಚಂದ್ರಮೌಳಿ, ಚಿತ್ರನಟರಾದ ಡಾಲಿ ಧನಂಜಯ್, ನಾಗಭೂಷಣ್, ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಪ್ರದೀಪ್ ಕುಮಾರ್, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಬಸವಣ್ಣನವರ ವಿಚಾರಧಾರೆಯನ್ನು ಅಳವಡಿಸಿಕೊಳ್ಳಬೇಕು

ಬಸವ ಜಯಂತಿ ಆಚರಣೆ ಜೊತೆಗೆ ಕ್ರಾಂತಿಕಾರಿ ಬಸವಣ್ಣನವರ ವಿಚಾರಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಮುನ್ನಡೆಯಬೇಕು ಎಂದು ಚಿತ್ರನಟ ಡಾಲಿ ಧನಂಜಯ್ ಸಲಹೆ ನೀಡಿದರು. ಬಸವಣ್ಣನವರ ವಿಚಾರಧಾರೆಗಳು ಅವರ ಜಯಂತಿಗೆ ಮಾತ್ರ ಸೀಮಿತವಾಗಬಾರದು. ಬಸವಣ್ಣನವರ ತತ್ವಾದರ್ಶಗಳನ್ನು ಪ್ರತಿದಿನ ಅಳವಡಿಸಿಕೊಳ್ಳಬೇಕು. ವಚನಗಳ ಮೂಲಕ ಕ್ರಾಂತಿ ಮಾಡಿದ ಬಸವಣ್ಣನವರ ಪ್ರತಿಯೊಂದು ವಿಚಾರಗಳು ಜೀವನಕ್ಕೆ ಹತ್ತಿರವಾಗಿದೆ. ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ ಬಸವಣ್ಣನವರ ವಿಚಾರಗಳು ಎಂದೆಂದಿಗೂ ಪ್ರಸ್ತುತವಾಗಿದೆ. ಪ್ರತಿಯೊಂದು ವಿಚಾರಗಳನ್ನು ಶುದ್ಧ ಕನ್ನಡದಲ್ಲಿ ಮನದಟ್ಟಾಗುವಂತೆ ವಿವರಿಸಿದ್ದಾರೆ ಎಂದರು.

ಮೋದಿ ಪಟ್ಟಾಭಿಷೇಕ

ಬಾಂಗ್ಲಾದೇಶ ಪ್ರಧಾನಿ ಹಸೀನಾ, ಭೂತಾನ್ ಮುಖ್ಯಸ್ಥ ಶೇರಿಂಗ್ ತಾಬ್ಗೆ, ಮಾರಿಷಸ್ ಅಧ್ಯಕ್ಷ ಪರ್ವಿಂದ್‌ಕುಮಾರ್ ಜುಗ್ನುನಾಥ್, ಮಾಲ್ಡೀವ್ಸ್ ಅಧ್ಯಕ್ಷ ಮುಯಿಜು, ಸೀಶೆಲ್ಸ್ ಉಪಾಧ್ಯಕ್ಷ ಅಹಮ್ಮದ್ ಆಸಿಫ್ ಪಾಲ್ಗೊಂಡಿದ್ದರು. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಟಿಡಿಪಿ ಅಧ್ಯಕ್ಷ ಚಂದ್ರಬಾಬು ನಾಯ್ಡು ಸೇರಿದಂತೆ ವಿವಿಧ ರಾಜಕೀಯ ಪಕ್ಷದ ಗಣ್ಯರು ಪದಗ್ರಹಣ ಕಾರ್ಯಕ್ರಮಕ್ಕೆ ಆಗಮಿಸಿದ್ದರು. ಈ ಬಾರಿ ದೇಶದ ಕೆಲವು ವಿವಿಧ ಸ್ತರಗಳ ಜನಸಾಮಾನ್ಯರನ್ನೂ ಪದಗ್ರಹಣ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿತ್ತು.

ರಾಷ್ಟ್ರಪತಿ ಭವನ ಹಾಗೂ ಗಣ್ಯರು ವಾಸ್ತವ್ಯ ಹೂಡಿದ್ದ ರೈಸೀನಾ ಹಿಲ್ಸ್ ಸುತ್ತಮುತ್ತ ಮೂರು ಸ್ತರದ ಭದ್ರತಾ ವ್ಯವಸ್ಥೆಯನ್ನು ಏರ್ಪಡಿಸಲಾಗಿತ್ತು.

ನರೇಂದ್ರ ಮೋದಿಯವರು ಪ್ರಧಾನಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ನಂತರ ಕ್ಯಾಬಿನೆಟ್ ದರ್ಜೆ ಸಚಿವರಾಗಿ ರಾಜನಾಥ ಸಿಂಗ್, ಅಮಿತ್ ಷಾ, ನಿತಿನ್ ಗಡ್ಕರಿ, ಜೆ.ಪಿ. ನಡ್ಡಾ, ಶಿವರಾಜ್ ಸಿಂಗ್ ಚವಾಣ್, ನಿರ್ಮಲಾ ಸೀತಾಮನ್, ಎನ್. ಜೈಶಂಕರ್, ಮನೋಹರ್ ಲಾಲ್ ಕಟ್ಟರ್, ಹೆಚ್.ಡಿ. ಕುಮಾರಸ್ವಾಮಿ, ಪಿಯೂಷ್ ಗೋಯಲ್, ಧರ್ಮೇಂದ್ರ ಪ್ರಧಾನ್, ಜಿತನ್ ರಾಮ್ ಮಾಂಝಿ, ರಾಜೀವ್ ರಂಜನ್ ಸಿಂಗ್, ಸರ್ಬಾನಂದ ಸೋನಾವಾಲ್, ಬೀರೇಂದ್ರಕುಮಾರ್, ರಾಮ್‌ಮೋಹನ್ ನಾಯ್ಡು. ಪ್ರಹ್ಲಾದ್ ಜೋಶಿ, ಜುಯೆಲ್ ಓರಮ್, ಗಿರಿರಾಜ್ ಸಿಂಗ್, ಅಶ್ವಿನ್ ವೈಷ್ಣವ್, ಜ್ಯೋತಿರಾಧಿತ್ಯ ಸಿಂಧ್ಯಾ, ಭೂಪೇಂದರ್ ಯಾದವ್, ಗಜೇಂದ್ರ ಸಿಂಗ್ ಶೇಖಾವತ್, ಅನ್ನಪೂರ್ಣದೇವಿ, ಕಿರಣ್ ರಿಜೀಜು, ಹರ್‌ದೀಪ್‌ಸಿಂಗ್ ಪುರಿ, ಮನ್ಸುಖ್ ಮಾಂಡವ್ಯ, ಜಿ. ಕಿಷನ್ ರೆಡ್ಡಿ, ಚಿರಾಗ್ ಪಾಸ್ವಾನ್, ಸಿ.ಆರ್. ಪಾಟೀಲ್.

ಸ್ವತಂತ್ರ ನಿರ್ವಹಣೆ: ರಾವ್ ಇಂದ್ರಜಿತ್ ಸಿಂಗ್, ಜಿತೇಂದ್ರ ಸಿಂಗ್, ಅರ್ಜುನ್ ರಾಮ್ ಮೇಘಾವಾಲ್, ಪ್ರತಾಪ್‌ರಾವ್ ಗಣಪತ್‌ರಾವ್ ಜಾಧವ್, ಜಯಂತ್ ಚೌಧರಿ.

ರಾಜ್ಯ ಸಚಿವರು: ಜಿತಿನ್ ಪ್ರಸಾದ, ಶ್ರೀಪಾದ್ ನಾಯಕ್, ಪಂಕಜ್‌ರಾವ್ ಚೌಧರಿ, ಕೃಷ್ಣಪಾಲ್ ಗುರ್ಜಾರ್, ರಾಮದಾಸ್ ಅಟಾವಲೆ, ರಾಮ್‌ನಾಥ್ ಠಾಕೂರ್, ನಿತ್ಯಾನಂದ ರೈ, ಅನುಪ್ರಿಯಾ ಪಟೇಲ್, ವಿ. ಸೋಮಣ್ಣ, ಚಂದ್ರಶೇಖರ ಭೀಮಸಾನಿ, ಎಸ್.ಪಿ. ಸಿಂಗ್ ಬಘೇಲಾ, ಶೋಭಾ ಕರಂದ್ಲಾಜೆ, ಕೀರ್ತಿವರ್ಧನ್ ಸಿಂಗ್, ಬಿ.ಎಲ್. ವರ್ಮಾ, ಸಾಂತಾನು ಠಾಕೂರ್, ಸುರೇಶ್ ಗೋಪಿ, ಎಲ್. ಮುರುಗನ್, ಅಜಯ್ ಟಮ್ಟಾ, ಬಂಡಿ ಸಂಜಯ್‌ಕುಮಾರ್, ಕಮಲೇಶ್ ಪಾಸ್ವಾನ್, ಭಗೀರಥ್ ಚೌಧರಿ, ಸತೀಶ್‌ಚಂದ್ರ ದುಬೆ, ಸಂಜಯ್ ಸೇಟ್, ರಣವೀತ್ ಸಿಂಗ್ ಬಿಟ್ಟು, ದುರ್ಗಾದಾಸ್ ಯುಕ್ಕಿ, ರಾಕೇಶ್ ಖಡ್ಸೆ, ಸುಖಾಂತ ಮುಜುಂದಾರ್, ಸಾವಿತ್ರಿ ಠಾಕೂರ್, ಟೋಖಾನ್ ಸಾಹು, ರಘೂಷನ್ ಚೌಧರಿ, ಶ್ರೀನಿವಾಸ ವರ್ಮಾ, ಹರೀಶ್ ಮಲ್ಹೋತ್ರ ನಿಮೂಬೆನ್ ಬಂಭಾನಿಯಾ, ಮುರಳೀಧರ್ ಮೊಹೊಲ್, ಜಾರ್ಜ್ ಕುರಿಯನ್, ಪವಿತ್ರ ಮಾರ್ಗರಿಟಾ ಅವರುಗಳು ಪ್ರಮಾಣವಚನ ಸ್ವೀಕರಿಸಿದರು. ಇಂದು ಸಂಜೆ ಸರಿಯಾಗಿ 7.15ಕ್ಕೆ ರಾಷ್ಟ್ರಗೀತೆಯೊಂದಿಗೆ ಪ್ರಾರಂಭವಾದ ಪ್ರಮಾಣವಚನ ಕಾರ್ಯಕ್ರಮ ರಾತ್ರಿ 9.45ಕ್ಕೆ ಮುಕ್ತಾಯಗೊಂಡಿತು. ನಂತರ ನೂತನ ಸಚಿವರು ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ನರೇಂದ್ರ ಮೋದಿಯವರೊಂದಿಗೆ ಗ್ರೂಪ್ ಫೋಟೋ ತೆಗೆಸಿಕೊಂಡರು.

ಶೋಭಾ, ಸೋಮಣ್ಣರಿಗೆ ರಾಜ್ಯ ಸಚಿವ ಸ್ಥಾನ

ಶೋಭಾ ಕರಂದ್ಲಾಜೆ ಅವರು ರಾಜ್ಯ ಸಚಿವೆಯಾಗಿ ಮೋದಿ ಸಂಪುಟದಲ್ಲಿ ಎರಡನೇ ಬಾರಿಗೆ ಸ್ಥಾನ ಪಡೆದಿದ್ದಾರೆ. 2019ರಲ್ಲಿ ಉಡುಪಿ–ಚಿಕ್ಕಮಗಳೂರು ಕ್ಷೇತ್ರದಿಂದ ಆಯ್ಕೆಯಾಗಿದ್ದ ಅವರು, ಕೃಷಿ ಮತ್ತು ರೈತ ಕಲ್ಯಾಣ ಖಾತೆ ರಾಜ್ಯ ಸಚಿವರಾಗಿದ್ದರು. ಈ ಬಾರಿ ಬೆಂಗಳೂರು ಉತ್ತರ ಕ್ಷೇತ್ರದಿಂದ ಆಯ್ಕೆಯಾಗಿ ಎರಡನೇ ಬಾರಿಗೆ ಮೋದಿ ಸಂಪುಟದಲ್ಲಿ ಸ್ಥಾನ ಪಡೆದಿದ್ದಾರೆ. ತುಮಕೂರು ಲೋಕಸಭಾ ಕ್ಷೇತ್ರದಿಂದ ಮೊದಲ ಬಾರಿ ಸಂಸದರಾಗಿ ಆಯ್ಕೆಯಾಗಿರುವ ವಿ.ಸೋಮಣ್ಣ ಮೊದಲ ಪ್ರಯತ್ನದಲ್ಲೇ ನರೇಂದ್ರ ಮೋದಿ ಸಂಪುಟದಲ್ಲಿ ಸ್ಥಾನ ಪಡೆದಿದ್ದಾರೆ. ಇವರು 2023ರ ವಿಧಾನಸಭಾ ಚುನಾವಣೆಯಲ್ಲಿ ವರುಣ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಚಾಮರಾಜನಗರದಲ್ಲಿ ಸಿ.ಪುಟ್ಟರಂಗಶೆಟ್ಟಿ ವಿರುದ್ಧ ಸ್ಪರ್ಧಿಸಿ, ಎರಡೂ ಕ್ಷೇತ್ರಗಳಲ್ಲೂ ಪರಾಭವಗೊಂಡಿದ್ದರು. ಸಂಪುಟದಲ್ಲಿ ಸ್ಥಾನ ದೊರೆಯುವುದು ಖಚಿತವಾಗುತ್ತಿದ್ದಂತೆಯೇ ವಿ.ಸೋಮಣ್ಣ ಮತ್ತು ಪ್ರಹ್ಲಾದ್ ಜೋಷಿ ಅವರು ದೆಹಲಿಯಲ್ಲಿದ್ದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಭೇಟಿ ಮಾಡಿ, ಆಶೀರ್ವಾದ ಪಡೆದಿದ್ದರು. ಈ ವೇಳೆ ಯಡಿಯೂರಪ್ಪ ಇವರಿಬ್ಬರಿಗೂ ಸಿಹಿ ತಿನಿಸಿ, ಹಾರೈಸಿದ್ದರು.

ಆರೋಪಿ ಲೋಕೇಶ್ ಬಂಧನ

ಮಾಡುವ ಎಚ್ಚರಿಕೆ ನೀಡಿದ್ದರು. ಅಲ್ಲದೇ ಈ ವೇಳೆ ಶಾಸಕ ಡಿ.ರವಿಶಂಕರ್ ಆರೋಪಿ ಬಂಧಿಸುವಂತೆ ಪೊಲೀಸರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದರು. ಅಲ್ಲದೇ ಮಾಜಿ ಸಚಿವ ಸಾ.ರಾ.ಮಹೇಶ್ ದೆಹಲಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿ, ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಆರೋಪಿ ಬಂಧಿಸಿ, ಕರ್ತವ್ಯ ಲೋಪ ಎಸಗಿದ ಪೊಲೀಸರನ್ನು ಅಮಾನತು ಮಾಡದಿದ್ದರೆ, ಠಾಣೆ ಎದುರು ಮಹದೇವನಾಯಕರ ಶವ ಇಟ್ಟು ಪ್ರತಿಭಟನೆ ನಡೆಸುವ ಎಚ್ಚರಿಕೆ ನೀಡಿದ್ದರು. ಇದರಿಂದ ಎಚ್ಚೆತ್ತ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ. ಆರೋಪಿ ವಿರುದ್ಧ ಪೋಕ್ಸೋ, ಎಸ್‌ಸಿ–ಎಸ್ಟಿ ದೌರ್ಜನ್ಯ ಮತ್ತು ಆತ್ಮಹತ್ಯೆಗೆ ಪ್ರಚೋದಿಸಿದ ಪ್ರಕರಣದಡಿ ಪ್ರಕರಣ ದಾಖಲಿಸಿದ್ದು, ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಜಿಲ್ಲಾ ಗ್ರಾಮಾಂತರ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಲ್.ನಾಗೇಶ್ ತಿಳಿಸಿದ್ದಾರೆ.

ಸಂತೋಷ್ ಸೇರಿ ಮೂವರ ಅಮಾನತು

ಹೋದಾಗ ಹತಾಶೆಗೊಂಡ ಮಹದೇವನಾಯಕ, ಪತ್ನಿ ಗೌರಮ್ಮ, ಪುತ್ರಿ ಲೀಲಾವತಿ ಮತ್ತು ಅಪ್ರಾಪ್ತ ಮೊಮ್ಮಗಳು ಶನಿವಾರ ಬೆಳಗ್ಗೆ ಮಹದೇಶ್ವರ ಬೆಟ್ಟದ ತಾಳಬೆಟ್ಟ ಬಳಿ ಆತ್ಮಹತ್ಯೆಗೆ ಯತ್ನಿಸಿದ್ದು, ಮಹದೇವನಾಯಕ ಮೃತಪಟ್ಟು ಉಳಿದ ಮೂವರು ಚಿಂತಾಜನಕ ಸ್ಥಿತಿಯಲ್ಲಿ ಕಾಮಗೆರೆಯ ಹೋಲಿಕ್ರಾಸ್ ಆಸ್ಪತ್ರೆಗೆ ದಾಖಲಾಗಿದ್ದರು.

ಘಟನೆಗೆ ಸಂಬಂಧಿಸಿದಂತೆ ನಾಯಕ ಸಮಾಜದ ಮುಖಂಡರು ಮತ್ತು ಇತರರು ಪೊಲೀಸರ ಕರ್ತವ್ಯ ಲೋಪದ ವಿರುದ್ಧ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಮತ್ತು ಇಲಾಖೆ ಮೇಲಾಧಿಕಾರಿಗಳಿಗೆ ದೂರು ನೀಡಿ, ಇನ್ಸ್‌ಪೆಕ್ಟರ್ ಪಿ.ಪಿ.ಸಂತೋಷ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳದಿದ್ದರೆ ಉಗ್ರ ಹೋರಾಟ ಮಾಡುವ ಎಚ್ಚರಿಕೆ ನೀಡಿದ್ದರು.

ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ನೊಂದ ಕುಟುಂಬದ ದೂರು ಪಡೆಯದೆ ಕರ್ತವ್ಯ ಲೋಪವೆಸಗಿ, ಆತ್ಮಹತ್ಯೆಗೆ ಕಾರಣರಾಗಿದ್ದ ಸರ್ಕಲ್ ಇನ್ಸ್‌ಪೆಕ್ಟರ್ ಪಿ.ಪಿ.ಸಂತೋಷ್, ಎಎಸ್‌ಐ ಗಿರೀಶ್ ಮತ್ತು ಮುಖ್ಯಪೇದೆ ರಾಘವೇಂದ್ರ ಅವರನ್ನು ಅಮಾನತುಗೊಳಿಸಿ ಸಾಲಿಗ್ರಾಮ ಠಾಣೆ ಪೊಲೀಸ್ ಇನ್ಸ್‌ಪೆಕ್ಟರ್ ಆರ್.ಕೃಷ್ಣರಾಜು ಅವರಿಗೆ ಕೆ.ಆರ್.ನಗರ ಠಾಣೆಯ ಹೆಚ್ಚುವರಿ ಜವಾಬ್ದಾರಿ ನೀಡಿ ಆದೇಶ ಹೊರಡಿಸಿದ್ದಾರೆ. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥರನ್ನು ಸೇವೆಯಿಂದ ಅಮಾನತು ಮಾಡಿದ್ದಲ್ಲದೆ ಆರೋಪಿ ಬಂಧಿಸುವ ಜೊತೆಗೆ ಆತನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಜಿಲ್ಲಾ ಗ್ರಾಮಾಂತರ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಲ್.ನಾಗೇಶ್ ಮಾಹಿತಿ ನೀಡಿದ್ದಾರೆ.

ಮೈಸೂರಲ್ಲಿ ವಿಜೃಂಭಣೆಯ ಬಸವ ಜಯಂತಿ ಮೆರವಣಿಗೆ

•ಮೊದಲ ಬಾರಿಗೆ ಆನೆ ಮೇಲೆ ಬಸವಣ್ಣ ಪುತ್ಥಳಿ ಮೆರವಣಿಗೆ •ಗಮನ ಸೆಳೆದ ವಿವಿಧ ಸ್ತಬ್ಧಚಿತ್ರಗಳು; ಮೇಳೈಸಿದ ಜಾನಪದ ಸೊಬಗು





ಮೈಸೂರು, ಜೂ.9(ಎಂಟಿವೈ)– ಕ್ರಾಂತಿಕಾರಿ ಬಸವಣ್ಣ ಜಯಂತಿ ಅಂಗವಾಗಿ ಮೈಸೂರಲ್ಲಿ ಭಾನುವಾರ ವಿವಿಧ ಜಾನಪದ ಕಲಾತಂಡಗಳೊಂದಿಗೆ ಆನೆ ಮೇಲೆ ಬಸವಣ್ಣರ ಪ್ರತಿಮೆಯನ್ನು ವಿಜೃಂಭಣೆಯಿಂದ ಮೆರವಣಿಗೆ ಮಾಡಲಾಯಿತು.

ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ, ವೀರಶೈವ–ಲಿಂಗಾಯತ ಅಸೋಸಿಯೇಷನ್ ಹಾಗೂ ಬಸವ ಬಳಗಗಳ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಬಸವ ಜಯಂತಿ ಮೆರವಣಿಗೆಗೆ, ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಬಸವಣ್ಣನವರ ಭಾವಚಿತ್ರ ಹಾಗೂ ಪುತ್ಥಳಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು.

ಬಳಿಕ ಆರಂಭವಾದ ವರ್ಣರಂಜಿತ ಮೆರವಣಿಗೆ ಪಾಠಶಾಲೆ ವೃತ್ತ, ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ವೃತ್ತದ ಮೂಲಕ ಮಹಾರಾಜ ಕಾಲೇಜು ಮೈದಾನ ತಲುಪಿತು. ಮಹಿಳೆಯರು ಕಳಸ ಹೊತ್ತು ಸಾಗಿದ ಮೆರವಣಿಗೆಯಲ್ಲಿ ಬಸವಣ್ಣನವರ ವೇಷಧಾರಿ ಮಕ್ಕಳು, ವೀರಗಾಸೆ ಕುಣಿತ, ನಂದಿಧ್ವಜ, ಕೀಲು ಕುದುರೆ, ಗೊಂಬೆ ಕುಣಿತ, ಮಂಗಳವಾದ್ಯ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳು ಸಾಗಿದವು. ಅಲ್ಲದೆ, ಬಸವಣ್ಣನವರ ಜೀವನ ಚರಿತ್ರೆ, ಸುತ್ತೂರು ಸಂಸ್ಥಾನ ಸೇರಿದಂತೆ ವೀರಶೈವ–ಲಿಂಗಾಯಿತ ಧರ್ಮದ ಮಹತ್ವ ಸಾರುವ ಸುಮಾರು ಹತ್ತಕ್ಕೂ ಹೆಚ್ಚು ಸ್ತಬ್ಧಚಿತ್ರಗಳು ಮೆರವಣಿಗೆಯಲ್ಲಿ ಸಾಗಿ ಗಮನ ಸೆಳೆದವು.

ಜಾನಪದ ಕಲಾತಂಡಗಳ ಹಿಮ್ಮೇಳದೊಂದಿಗೆ ಅಲಂಕೃತ ಆಟೋರಿಕ್ಷಾ, ಗೂಡ್ಸ್ ವಾಹನದಲ್ಲಿ ಬಸವಣ್ಣನವರ ಪುತ್ಥಳಿ, ಭಾವಚಿತ್ರವನ್ನು ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು. ವಿವಿಧ ಭಜನಾ ಮಂಡಳಿ ಸದಸ್ಯರು, ವಿವಿಧ ಬಸವ ಬಳಗಗಳ ಸದಸ್ಯರು ಹಾಗೂ ವೀರಶೈವ–ಲಿಂಗಾಯತ ಒಕ್ಕೂಟಗಳ ಸದಸ್ಯರು ಬಸವಣ್ಣರ ಚಿತ್ರವಿರುವ ಧ್ವಜ ಹಿಡಿದು, ಕೊರಳಿನಲ್ಲಿ ಕೇಸರಿ ಬಣ್ಣದ ಶಲ್ಯ ಧರಿಸಿ ಸಾಗುವ ಮೂಲಕ ಗಮನ ಸೆಳೆದರು.

ಮಳೆಯಲ್ಲೂ ಮೆರವಣಿಗೆ: ಮೈಸೂರಲ್ಲಿ ನಡೆದ ಬಸವ ಜಯಂತಿಯಲ್ಲಿ ಪಾಲ್ಗೊಳ್ಳಲು ಮೈಸೂರು ಜಿಲ್ಲೆಯ ವಿವಿಧ ತಾಲೂಕುಗಳಿಂದ ಬಸ್ ವ್ಯವಸ್ಥೆ ಮಾಡಲಾಗಿತ್ತು. ಹೀಗೆ ಬಂದ ಬಸ್‌ಗಳು ಗನ್‌ಹೌಸ್ ಬಳಿ ಜನರ ಇಳಿಸಿ, ಮಹಾರಾಜ ಕಾಲೇಜು ಮೈದಾನದತ್ತ ತೆರಳಿದವು. ಬಳಿಕ ಬೆಳಗ್ಗೆ 10 ಗಂಟೆ ವೇಳೆಗೆ ಮೆರವಣಿಗೆಗೆ ಸಿದ್ಧತೆ ಮಾಡಿಕೊಳ್ಳಲಾಯಿತು. ಈ ವೇಳೆ ಮಳೆ ಸುರಿಯಿತು. ಮಳೆ ನಿಂತ ಮೇಲೆ ಮೆರವಣಿಗೆ ಆರಂಭವಾಯಿತು. ಮಹಾರಾಜ ಕಾಲೇಜು ಮೈದಾನ ತಲುಪುವ ವೇಳೆ ಎರಡು ಮೂರು ಬಾರಿ ತುಂತುರು ಮಳೆ ಬಂತು. ಆದರೂ ಮೆರವಣಿಗೆಯಲ್ಲಿ ಸಾಗುತ್ತಿದ್ದವರು ವಿಚಲಿತರಾಗದೇ ಮುಂದೆ ಸಾಗಿದರು.

ದಸರಾ ಮಾದರಿ ಮೆರವಣಿಗೆ: ಇಂದು ನಡೆದ ಬಸವ ಜಯಂತಿ ಮೆರವಣಿಗೆ ಜಂಬೂಸವಾರಿ ಮೆರವಣಿಗೆಯಂತೆ ಗೋಚರಿಸಿತು. ಒಂದು ಕಡೆ ಜಾನಪದ ಕಲಾತಂಡಗಳು ಮತ್ತೊಂದು ಕಡೆ ಸ್ತಬ್ಧ ಚಿತ್ರಗಳು ನೋಡುಗರ ಕಣ್ಮನ ಸೆಳೆದರೆ ಕೊನೆಯಲ್ಲಿ ಆನೆ ಹಾಗೂ ನಾಡ ಎತ್ತುಗಳು ಗಮನ ಸೆಳೆದವು. ಇದೇ ಮೊದಲ ಬಾರಿಗೆ ಮೆರವಣಿಗೆಯಲ್ಲಿ ಆನೆ ಸಾಗಿತು. ಹಾಸನದ ಅರಸಿಕೆರೆ ಸಮೀಪದ ನೊಣವಿನಕೆರೆ ಸಿದ್ದೇಶ್ವರ ಮಠದ ಹೆಣ್ಣಾನೆ ಲಕ್ಷ್ಮಿಯನ್ನು ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು. ದಸರಾ ಆನೆಗಳಂತೆ ಲಕ್ಷ್ಮಿಯನ್ನು ಸಿಂಗರಿಸಿ, ಸೊಂಡಿಲಿನ ಮೇಲೆ ಬಸವಣ್ಣರ ಚಿತ್ರ ಬರೆಯಲಾಗಿತ್ತು. ಅಲ್ಲದೆ, ಆನೆ ಮೇಲೆ ಬಸವಣ್ಣ ಪುತ್ಥಳಿ ಇಟ್ಟು ಮೆರವಣಿಗೆ ಮಾಡಲಾಯಿತು. ಮೆರವಣಿಗೆಯಲ್ಲಿ ಭಜನೆ ಹಾಗೂ ಜೈಕಾರದ ಘೋಷಣೆ ಮೊಳಗುತ್ತಿದ್ದ ಹಿನ್ನೆಲೆಯಲ್ಲಿ ಮೆರಗು ಹೆಚ್ಚಿಸಿತು.

ರಾರಾಜಿಸಿದ ಕಟೌಟ್‌ಗಳು: ಬಸವ ಜಯಂತಿ ಅಂಗವಾಗಿ ಗನ್‌ಹೌಸ್‌ನಿಂದ ಮಹಾರಾಜ ಕಾಲೇಜು ಮೈದಾನದವರೆಗೆ ಕಟೌಟ್‌ಗಳು ರಾರಾಜಿಸಿದವು. ಬಸವ ಜಯಂತ್ಯುತ್ಸವ ಸಮಿತಿ ಹಾಗೂ ಸಮುದಾಯ ವಿವಿಧ ಮುಖಂಡರು ಶುಭ ಕೋರುವ ಸಂದೇಶವುಳ್ಳ ಕಟೌಟ್‌ಗಳನ್ನು ಮೆರವಣಿಗೆ ಸಾಗುವ ಮಾರ್ಗ ಹಾಗೂ ಸಮಾವೇಶ ನಡೆಯುವ ಸ್ಥಳದಲ್ಲಿ ಹಾಕಲಾಗಿತ್ತು. ಇದರಿಂದ ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು.



ಪ್ರಧಾನಿಯಾಗಿ ಮೋದಿ ಪ್ರಮಾಣ

ಮೈಸೂರು ಬಿಜೆಪಿ ಕಚೇರಿಯಲ್ಲಿ ಸಂಭ್ರಮಾಚರಣೆ



ನರೇಂದ್ರ ಮೋದಿ ಮೂರನೇ ಬಾರಿ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ವೇಳೆ ಮೈಸೂರಿನ ಬಿಜೆಪಿ ಕಚೇರಿ ಬಳಿ ಸಂಭ್ರಮಿಸಲಾಯಿತು.



ಹೆಚ್‌ಡಿಕೆ ಕೇಂದ್ರ ಸಚಿವರಾದ ಹಿನ್ನೆಲೆ ಮೈಸೂರು ನಗರ ಜೆಡಿಎಸ್ ಮುಖಂಡ ಪ್ರಕಾಶ್ ಪ್ರಿಯದರ್ಶನ್, ಅಂಗೈಯಲ್ಲಿ ಕರ್ಪೂರ ಬೆಳಗಿದರು.

ಮೈಸೂರು, ಜೂ.9(ಎಸ್‌ಬಿಡಿ)– ನರೇಂದ್ರ ಮೋದಿ ಅವರು ಮೂರನೇ ಬಾರಿ ಪ್ರಧಾನ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಹಿನ್ನೆಲೆಯಲ್ಲಿ ಮೈಸೂರಿನ ಬಿಜೆಪಿ ಕಚೇರಿ ಬಳಿ ಸಂಭ್ರಮಾಚರಿಸಲಾಯಿತು.

ಪ್ರಧಾನಿ ಮೋದಿ ಸೇರಿದಂತೆ ಸಂಪುಟ ಸದಸ್ಯರ ಪ್ರಮಾಣ ವಚನ ಸ್ವೀಕಾರ ಸಮಾರಂಭವನ್ನು ಬೃಹತ್ ಪರದೆಯಲ್ಲಿ ವೀಕ್ಷಿಸಿದ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು, ಪಟಾಕಿ ಸಿಡಿಸಿ ಸಂಭ್ರಮಿಸಿದರು. ಮೋದಿ ಅವರು ಪ್ರಮಾಣ ವಚನ ಸ್ವೀಕರಿಸಿದ ವೇಳೆ ಅವರ ಕಟೌಟ್‌ಗಳನ್ನು ಹಿಡಿದು ಜೈಕಾರ ಹಾಕಿದರು. ಸಿಹಿ ಹಂಚಿ ಸಂತಸಪಟ್ಟರು. ಪಕ್ಷದ ಕಚೇರಿಯನ್ನು ವಿದ್ಯುತ್ ದೀಪಾಲಂಕಾರದಿಂದ ಸಿಂಗರಿಸಲಾಗಿತ್ತು.

ಸಂಭ್ರಮಾಚರಣೆಯಲ್ಲಿ ಮಾಜಿ ಮೇಯರ್ ಶಿವಕುಮಾರ್, ಬಿಜೆಪಿ ಮೈಸೂರು ನಗರ ಪ್ರಧಾನ ಕಾರ್ಯದರ್ಶಿಗಳಾದ ಬಿ.ಎಂ.ರಘು, ಕೇಬಲ್ ಮಹೇಶ್, ನಗರ ಉಪಾಧ್ಯಕ್ಷರಾದ ಜೋಗಿ ಮಂಜು, ಟಿ.ರಮೇಶ್, ಹೇಮ ನಂದೀಶ್, ಯುವ ಮೋರ್ಚಾ ನಗರಾಧ್ಯಕ್ಷ ರಾಕೇಶ್ ಗೌಡ, ಮಹಿಳಾ ಮೋರ್ಚಾ ಅಧ್ಯಕ್ಷೆ ರೇಣುಕಾ ರಾಜ್, ಸರ್ವಮಂಗಳಾ, ಎಸ್ಸಿ ಮೋರ್ಚಾ ಅಧ್ಯಕ್ಷ ವಿ.ಶೈಲೇಂದ್ರ, ವಕ್ತಾರ ದೇವರಾಜೇಗೌಡ, ಚಾಮರಾಜ ಕ್ಷೇತ್ರದ ಅಧ್ಯಕ್ಷ ದಿನೇಶ್ ಗೌಡ, ಬಾಲಕೃಷ್ಣ, ಕಾರ್ತಿಕ್, ಶಿವಕುಮಾರ್, ಗಿರೀಶ್ ಗೌಡ ಮತ್ತಿತರರು ಪಾಲ್ಗೊಂಡಿದ್ದರು.

ಹೆಚ್‌ಡಿಕೆ ವಿಶೇಷ ಅಭಿಮಾನಿ: ಕೇಂದ್ರ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಅಭಿಮಾನಿಯೊಬ್ಬರು ಅಂಗೈಯಲ್ಲಿ ಕರ್ಪೂರದಾರತಿ ಮಾಡಿ, ಸಂಭ್ರಮಾಚರಿಸಿದ್ದಾರೆ. ಮೈಸೂರು ನಗರ ಜೆಡಿಎಸ್ ಕಾರ್ಯಾಧ್ಯಕ್ಷ ಪ್ರಕಾಶ್ ಪ್ರಿಯದರ್ಶನ್ ಟಿವಿಯಲ್ಲಿ ಹೆಚ್‌ಡಿಕೆ ಪ್ರಮಾಣ ವಚನ ಸ್ವೀಕಾರದ ದೃಶ್ಯ ಪ್ರಸಾರವಾಗುವ ವೇಳೆ ತಮ್ಮ ಅಂಗೈಯಲ್ಲಿ ಕರ್ಪೂರ ಹಚ್ಚಿ ಆರತಿ ಮಾಡಿದ್ದಾರೆ.

ಕೂದಲೆಳೆ ಅಂತರದಲ್ಲಿ ತಪ್ಪಿದ ವಿಮಾನ ದುರಂತ

ಏಕಕಾಲದಲ್ಲಿ 2 ವಿಮಾನಗಳ ಭೂಸ್ಪರ್ಶ, ಟೇಕಾಫ್

ಮುಂಬೈ, ಜೂ.9– ಮುಂಬೈ ವಿಮಾನ ನಿಲ್ದಾಣದಲ್ಲಿ ಕೂದಲೆಳೆ ಅಂತರದಲ್ಲಿ ಭಾರಿ ಅನಾಹುತವೊಂದು ತಪ್ಪಿದ್ದು, ಎರಡು ವಿಮಾನಗಳು ಪರಸ್ಪರ ಡಿಕ್ಕಿಯಾಗುವುದು ತಪ್ಪಿದೆ. ಮುಂಬೈನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಈ ಘಟನೆ ನಡೆದಿದ್ದು, ಏಕಕಾಲದಲ್ಲಿ 2 ವಿಮಾನಗಳ ಭೂಸ್ಪರ್ಶ, ಟೇಕಾಫ್ ಆಗಿದೆ. ಕೆಲವೇ ಮಿಲಿ ಸೆಕೆಂಡ್‌ಗಳ ಅಂತರದಲ್ಲಿ ಎರಡೂ ವಿಮಾನಗಳ ಡಿಕ್ಕಿ ತಪ್ಪಿದೆ. ಏರ್ ಇಂಡಿಯಾ ಜೆಟ್ ಟೇಕಾಫ್ ಆಗುತ್ತಿದ್ದ ಅದೇ ರನ್ ವೇ ಮೇಲೆ ಇಂಡಿಗೋ ವಿಮಾನವೊಂದು ಭೂಸ್ಪರ್ಶ ಮಾಡಿದ್ದು, ಈ ಸಂದರ್ಭದಲ್ಲಿ ಎರಡೂ ವಿಮಾನಗಳಲ್ಲಿ ನೂರಾರು ಪ್ರಯಾಣಿಕರಿದ್ದರು ಎಂದು ಹೇಳಲಾಗಿದೆ. ಕೆಲವೇ ಸೆಕೆಂಡ್‌ಗಳ ಅಂತರವಿದ್ದ ಕಾರಣ ಉಭಯ ವಿಮಾನಗಳಲ್ಲಿನ ಪ್ರಯಾಣಿಕರು ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ.

ಯಾವುದೇ ಕಾರಣಕ್ಕೂ ಶಕ್ತಿ ಯೋಜನೆ ನಿಲ್ಲಿಸಲ್ಲ

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸ್ಪಷ್ಟನೆ



ಬೆಂಗಳೂರು, ಜೂ.9– ಯಾವುದೇ ಕಾರಣಕ್ಕೂ ಶಕ್ತಿ ಯೋಜನೆಯನ್ನು ನಿಲ್ಲಿಸುವುದಿಲ್ಲ ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ತಿಳಿಸಿದ್ದಾರೆ.

ಶಕ್ತಿ ಯೋಜನೆ ನಿಲ್ಲುತ್ತೆ ಎಂಬ ಆರೋಪಕ್ಕೆ ಸ್ಪಷ್ಟನೆ ನೀಡಿದ ಅವರು, ಕಾಂಗ್ರೆಸ್ ಸರ್ಕಾರ ಗ್ಯಾರಂಟಿಗಳನ್ನು ಮತ ಪಡೆಯುವುದಕ್ಕಾಗಿ ನೀಡಿಲ್ಲ. ಲೋಕಸಭಾ ಚುನಾವಣೆಯವರೆಗೆ ಅಂತ ನಿಗದಿ ಮಾಡಿಲ್ಲ ಎಂದು ಹೇಳಿದ್ದಾರೆ.

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಮಾಡಿದ್ದ ಬೆಲೆ ಏರಿಕೆಯಿಂದ ಜನರು ತತ್ತರಿಸಿದ್ದರು. ಅವರಿಗೆ ಸಹಾಯ ಮಾಡುವುದಕ್ಕೆ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಲಾಗಿತ್ತು. ಇದರಿಂದ ಬಡ, ಮಧ್ಯಮ ವರ್ಗದವರಿಗೆ ಸಹಾಯ ಆಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಶಕ್ತಿ ಯೋಜನೆಗಾಗಿ ಬಜೆಟ್‌ನಲ್ಲಿ ಸುಮಾರು 5,500 ಕೋಟಿ ರೂ. ಮೀಸಲಿಟ್ಟಿದ್ದಾರೆ. ಶಕ್ತಿ ಯೋಜನೆಗೆ ಯಾವುದೇ ಸಮಸ್ಯೆ ಇಲ್ಲ ಎಂದಿದ್ದಾರೆ. ನಮ್ಮ ಕಾಂಗ್ರೆಸ್ ಸರ್ಕಾರ ಇರುವವರೆಗೂ ಶಕ್ತಿ ಯೋಜನೆ ಇರುತ್ತದೆ. ಯಾರಿಗೂ ಅನುಮಾನ ಬೇಡ. ಮುಂದೆಯೂ ಸಹ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲಿದ್ದು, ಆಗಲೂ ಶಕ್ತಿ ಯೋಜನೆ ಇರುತ್ತದೆ ಎಂದು ಸ್ಪಷ್ಟನೆ ನೀಡಿದರು.

ಬಸವಾದಿ ಶರಣರ ತತ್ವಾದರ್ಶಗಳ ಪಸರಿಸಬೇಕು

ಮೈಸೂರು,ಜೂ.9(ಪಿಎಂ)– ಬಸವಾದಿ ಶರಣರ ತತ್ವಾದರ್ಶ ಅಳವಡಿಸಿಕೊಳ್ಳಬೇಕು ಹಾಗೂ ಪಸರಿಸಬೇಕೆಂಬ ಆಶಯ ಬಸವ ಜಯಂತಿ ಸಮಾರೋಪ ಸಮಾರಂಭದಲ್ಲಿ ವ್ಯಕ್ತವಾಯಿತು.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ, ವೀರಶೈವ–ಲಿಂಗಾಯತ ಸಂಘ–ಸಂಸ್ಥೆಗಳು ಹಾಗೂ ಬಸವ ಬಳಗಗಳ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ಭಾನುವಾರ ಸಂಜೆ ನಡೆದ ಬಸವ ಜಯಂತಿ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಸ್ವಾಮೀಜಿಗಳು ಹಾಗೂ ಗಣ್ಯರು ಈ ಆಶಯ ವ್ಯಕ್ತಪಡಿಸಿದರು.

ವಿಧಾನಪರಿಷತ್ ಮಾಜಿ ಸದಸ್ಯ ತೋಂಟದಾರ್ಯ ಮಾತನಾಡಿ, ಸುತ್ತೂರು ಶ್ರೀಗಳ ಮಾರ್ಗದರ್ಶನದಲ್ಲಿ ಬಸವ ಬಳಗಗಳ ಒಕ್ಕೂಟದ ಪರಿಕಲ್ಪನೆ ಜಾರಿಗೆ ಬಂದಿತು. ಆರಂಭದಲ್ಲಿ ಗೊ.ರು.ಪರಮೇಶ್ವರಪ್ಪ ಒಕ್ಕೂಟದ ಅಧ್ಯಕ್ಷರಾಗಿ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಅವರನ್ನು ನೆನೆಯಬೇಕು. ಬಸವ ಬಳಗಗಳ ಒಕ್ಕೂಟದ ಕಲ್ಪನೆಯಿಂದ ಮೈಸೂರು ನಗರದ ವಿವಿಧ ಬಡಾವಣೆಗಳಲ್ಲಿ ಸಂಘ ಸಂಸ್ಥೆಗಳು ಸ್ಥಾಪನೆಯಾಗಿ ಸಕ್ರಿಯವಾಗಿ ಬಸವ ಜಯಂತಿ ಸಂದರ್ಭದಲ್ಲಿ ಕಾರ್ಯಕ್ರಮಗಳನ್ನು ರೂಪಿಸುತ್ತಿವೆ. ಈ ವರ್ಷದ ಬಸವ ಜಯಂತಿ ದೊಡ್ಡ ಪ್ರಮಾಣದಲ್ಲಿ ಆಯೋಜನೆಗೊಂಡಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಒಕ್ಕೂಟದ ಅಧ್ಯಕ್ಷ ಎಂ.ಪ್ರದೀಪ್‌ಕುಮಾರ್ ಹಗಲು–ರಾತ್ರಿ ಶ್ರಮ ವಹಿಸಿ, ಎಲ್ಲರನ್ನು ಸಂಘಟಿಸಿ ಶ್ರೇಷ್ಠತೆಯಿಂದ ಕೂಡಿದ ಬಸವ ಜಯಂತಿ ಆಯೋಜನೆ ಮಾಡಿದ್ದಾರೆ. ಅವರು ಬಹಳ ಹಿಂದೆಯೇ ಬಸವ ಜಯಂತಿಗಾಗಿ ಈ ತಾರೀಖನ್ನು ನಿಗದಿ ಮಾಡಿದ್ದರು. ಆದರೆ ಇಂದು ಯಾರೆಲ್ಲಾ ಬರಬೇಕಿತ್ತೋ ಅವರೆಲ್ಲಾ ಅನಿವಾರ್ಯ ಕಾರಣಗಳಿಂದ ದೆಹಲಿಯಲ್ಲಿದ್ದಾರೆ. ಇಂದು ದೆಹಲಿಯಲ್ಲಿಯೂ ಸಹ ದೇಶದ ದೃಷ್ಟಿಯಿಂದ ಒಂದು ಒಳ್ಳೆಯ ಕಾರ್ಯ ನಡೆಯುತ್ತಿದೆ. ನರೇಂದ್ರ ಮೋದಿಯವರು 3ನೇ ಬಾರಿಗೆ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕಾರ ಮಾಡುತ್ತಿದ್ದಾರೆ. ಆ ಕಾರಣದಿಂದ ಇಂದು ಯಾರೆಲ್ಲಾ ಬರಬೇಕಿತ್ತೋ ಅವರಲ್ಲಿ ಅನೇಕರ ಅನುಪಸ್ಥಿತಿಯಾಗಿದೆ ಎಂದು ತಿಳಿಸಿದರು.



ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಭಾನುವಾರ ಸಂಜೆ ನಡೆದ ಬಸವ ಜಯಂತಿ ಸಮಾರೋಪ ಸಮಾರಂಭದಲ್ಲಿ ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ.ಪ್ರದೀಪ್‌ಕುಮಾರ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಸುತ್ತೂರು ಶ್ರೀಗಳು ಅವರಿಗೆ ಸ್ಮರಣಿಕೆ ನೀಡಿ ಆಶೀರ್ವದಿಸಿದರು.

ವಿಧಾನಪರಿಷತ್ ಮಾಜಿ ಸದಸ್ಯ ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ ಮಾತನಾಡಿ, ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕಾಗಿ ಬಸವಾದಿ ಶರಣರು ಮಹತ್ವದ ಪಾತ್ರ ವಹಿಸಿದರು. ಅವರ ತತ್ವಾದರ್ಶ ಅಳವಡಿಸಿಕೊಳ್ಳುವುದು ಸಮಾಜದ ಹಿತದೃಷ್ಟಿಯಿಂದ ಇಂದಿನ ಅಗತ್ಯವಾಗಿದೆ ಎಂದರು.

ಮಾಜಿ ಶಾಸಕ ನಿರಂಜನ್‌ಕುಮಾರ್ ಮಾತನಾಡಿ, ಬಸವ ಜಯಂತಿ ಮೂಲಕ ಸಮುದಾಯದ ಸಂಘಟನೆ ಮಾಡುವಲ್ಲಿ ಪ್ರದೀಪ್‌ಕುಮಾರ್ ನೇತೃತ್ವದ ತಂಡ ಯಶಸ್ವಿಯಾಗಿದೆ. ನಾವು ಬಸವಾದಿ ಶರಣರ ವಿಚಾರಧಾರೆ ಅನುಸರಣೆ ಮಾಡಿಕೊಂಡು ಹೋಗಬೇಕಿದೆ. ಜೊತೆಗೆ ಸಮುದಾಯದಲ್ಲಿ ಒಡಕು ಮೂಡಿದರೆ ಅದರ ನಷ್ಟವನ್ನು ಸಮುದಾಯವೇ ಎದುರಿಸಬೇಕಾಗುತ್ತದೆ. ಹಾಗಾಗಿ ಪಂಗಡಗಳನ್ನು ಬದಿಗೊತ್ತಿ ಸಮುದಾಯ ಒಗ್ಗೂಡಬೇಕು ಎಂದು ಹೇಳಿದರು.

ಕನಕಪುರದ ಶ್ರೀದೇಗುಲ ಮಠದ ಕಿರಿಯ ಶ್ರೀಗಳಾದ ಶ್ರೀ ಚನ್ನಬಸವ ಸ್ವಾಮೀಜಿ ಮಾತನಾಡಿ, ಬಸವಾದಿ ಶಿವಶರಣರು ಸಮಾನತೆ ಸಮಾಜ ನಿರ್ಮಿಸುವ ಮೂಲಕ ಭೂಮಿಯಲ್ಲೇ ಸ್ವರ್ಗ ಸ್ಥಾಪಿಸಿದರು. ಅಂದು ಭರತಖಂಡದ ಅನೇಕ ಭಾಗಗಳಿಂದ ಹಲವರು ಬಂದು ಶರಣ ಚಳವಳಿಯಲ್ಲಿ ಸೇರ್ಪಡೆಗೊಂಡಿದ್ದರು. ಬಸವಾದಿ ಶರಣರು ನಮಗೆ ಬದುಕಿನ ಬೆಳಕು ತೋರಿದ್ದಾರೆ. ಅವರ ವಿಚಾರಧಾರೆ ಪಸರಿಸಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಇದಕ್ಕೂ ಮುನ್ನ ಒಕ್ಕೂಟದ ಮಹಿಳಾ ಮತ್ತು ಮಕ್ಕಳ ಸಮಿತಿಯಿಂದ ನಡೆದ ವರ್ಣರಂಜಿತ ಸಾಂಸ್ಕೃತಿಕ ಕಾರ್ಯಕ್ರಮಗಳು ಮನಸೂರೆಗೊಂಡವು. ಜಾನಪದ ಕಲಾವಿದರಾದ ಡಾ.ಆರ್.ನಿಂಗರಾಜು, ಸುಂದರೇಶ್ ಮಾರ್ಗದರ್ಶನದಲ್ಲಿ ಒಕ್ಕೂಟದ ಸದಸ್ಯರ ಮಕ್ಕಳು ಪೂಜಾ ಕುಣಿತ ಸೇರಿದಂತೆ ವಿವಿಧ ಜಾನಪದ ನೃತ್ಯಗಳನ್ನು ಪ್ರದರ್ಶಿಸಿ ಸಭಿಕರಿಂದ ಚಪ್ಪಾಳೆ ಗಿಟ್ಟಿಸಿದರು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಹನೂರು ಶಾಸಕ ಎಂ.ಆರ್.ಮಂಜುನಾಥ್, ಚಿತ್ರನಟ ಡಾರ್ಲಿಂಗ್ ಕೃಷ್ಣ ಅತಿಥಿಯಾಗಿ ಪಾಲ್ಗೊಂಡಿದ್ದರು. ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ.ಪ್ರದೀಪ್‌ಕುಮಾರ್, ಕಾರ್ಯದರ್ಶಿ ಕೆ.ಎಂ.ಸ್ವಾಮಿ ಮತ್ತಿತರರು ಹಾಜರಿದ್ದರು.

ಅಮಾಯಕರಿಗೆ ಕಾನೂನು ಪ್ರಕಾರ ರಕ್ಷಣೆ ನೀಡದ ಪೊಲೀಸರು

ತಾಲೂಕು ನಾಯಕರ ಸಂಘದಿಂದ ಸರ್ಕಾರದ ವಿರುದ್ಧ ಆಕ್ರೋಶ



ಪ್ರತಿಭಟನಾ ಸ್ಥಳಕ್ಕೆ ಶಾಸಕ ಡಿ.ರವಿಶಂಕರ್ ಭೇಟಿ ನೀಡಿ ಮಾತುಕತೆ ನಡೆಸಿದರು.

ಕೆ.ಆರ್.ನಗರ, ಜೂ.9– ಚಂದಗಾಲು ಗ್ರಾಮದ ಒಂದೇ ಕುಟುಂಬದ ನಾಲ್ವರು ಆತ್ಮಹತ್ಯೆ ಯತ್ನ ಹಾಗೂ ಮಹದೇವ ನಾಯಕನ ಸಾವಿಗೆ ಕಾರಣರಾದವರ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿ ತಾಲೂಕು ನಾಯಕರ ಸಂಘದಿಂದ ಪಟ್ಟಣದಲ್ಲಿ ಭಾನುವಾರ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಹಾಸನ–ಮೈಸೂರು ರಸ್ತೆಯ ಅಂಬೇಡ್ಕರ್ ಪುತ್ಥಳಿ ಎದುರು ಜಮಾಯಿಸಿದ ಪ್ರತಿಭಟನಾಕಾರರು ರಾಜ್ಯ ಸರ್ಕಾರ, ತಾಲೂಕು ಆಡಳಿತ ಮತ್ತು ಪೊಲೀಸರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಮಾತನಾಡಿದ ವಾಲ್ಮೀಕಿ ನಾಯಕರ ಜಾಗೃತಿ ವೇದಿಕೆಯ ಜಿಲ್ಲಾಧ್ಯಕ್ಷ ಜೆ.ರಾಮನಾಯಕ, ದಲಿತರು ಮತ್ತು ಹಿಂದುಳಿದ ವರ್ಗದವರಿಗೆ ಭದ್ರತೆ ನೀಡುವಲ್ಲಿ ತಾಲೂಕು ಆಡಳಿತ ಮತ್ತು ಪೊಲೀಸರು ವಿಫಲರಾಗಿದ್ದಾರೆ ಎಂದು ಆರೋಪಿಸಿದರು.

ಮಹದೇವನಾಯಕನ ಕುಟುಂಬದವರು ಜೂ.1ರಂದು ಠಾಣೆಗೆ ದೂರು ನೀಡಲು ಬಂದಾಗ ಪೊಲೀಸರು ಕ್ರಮ ಕೈಗೊಂಡಿದ್ದರೆ ಆತ್ಮಹತ್ಯೆ ಯತ್ನ ನಡೆಯುತ್ತಿರಲಿಲ್ಲ ಮತ್ತು ಅಮಾಯಕನ ಜೀವ ಬಲಿಯಾಗುತ್ತಿರಲಿಲ್ಲ. ಇಂತಹ ಕೃತ್ಯಕ್ಕೆ ಕಾರಣರಾಗಿರುವ ಪೊಲೀಸರ ವಿರುದ್ಧ ರಾಜ್ಯ ಸರ್ಕಾರ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.

ಮಹದೇವನಾಯಕನ ಶವವನ್ನು ಕೆ.ಆರ್.ನಗರದ ಮೂಲಕ ಚಂದಗಾಲು ಗ್ರಾಮಕ್ಕೆ ತೆಗೆದುಕೊಂಡು ಹೋಗಲು ಅವಕಾಶ ನೀಡದ ಪೊಲೀಸರು ಅಧಿಕಾರ ದುರ್ಬಳಕೆ ಮಾಡಿಕೊಂಡು ದಬ್ಬಾಳಿಕೆ ಮಾಡಿದ್ದು, ಇದನ್ನು ನಾಯಕ ಸಮಾಜ ಖಂಡಿಸುತ್ತದೆ. ಇಂತಹ ಘಟನೆಗಳು ಮರುಕಳಿಸದಂತೆ ಸರ್ಕಾರ ಕಠಿಣ ಕಾನೂನುಗಳನ್ನು ಜಾರಿಗೆ ತರಬೇಕೆಂದು ಒತ್ತಾಯಿಸಿದರು.

ಈ ವೇಳೆ ಸ್ಥಳಕ್ಕಾಗಮಿಸಿದ ಶಾಸಕ ಡಿ.ರವಿಶಂಕರ್, ತಾಲೂಕು ನಾಯಕ ಸಂಘದ ಪದಾಧಿಕಾರಿಗಳು ಮತ್ತು ಮುಖಂಡರೊಂದಿಗೆ ಮಾತುಕತೆ ನಡೆಸಿದರು.

ಈ ಸಂದರ್ಭ ಮಾತನಾಡಿದ ಶಾಸಕರು, ಘಟನೆ ಸಂಬಂಧ ಈಗಾಗಲೇ ಆರೋಪಿ ಬಂಧಿಸಲಾಗಿದೆ. ಜೊತೆಗೆ ದೂರು ಸ್ವೀಕರಿಸದೇ ನಿರ್ಲಕ್ಷ್ಯ ವಹಿಸಿದ್ದ ಪೊಲೀಸರನ್ನು ಅಮಾನತುಗೊಳಿಸಲಾಗಿದೆ. ಅಲ್ಲದೇ ನೊಂದ ಕುಟುಂಬಕ್ಕೆ ನಾನು ವೈಯಕ್ತಿಕವಾಗಿ 2 ಲಕ್ಷ ರೂ. ಪರಿಹಾರ ನೀಡಿದ್ದು, ಚಿಕಿತ್ಸೆಗೂ ಸಹಾಯ ಮಾಡಿದ್ದೇನೆ ಎಂದರು.

ಪ್ರಕರಣ ಸಂಬಂಧ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಮಹದೇವನಾಯಕನ ಕುಟುಂಬಕ್ಕೆ ಸರ್ಕಾರದಿಂದ ಹೆಚ್ಚಿನ ಪರಿಹಾರ ಕೊಡಿಸುವ ಭರವಸೆ ನೀಡಿದ ಹಿನ್ನೆಲೆಯಲ್ಲಿ ಪ್ರತಿಭಟನಾಕಾರರು ತಮ್ಮ ಹೋರಾಟ ಕೈಬಿಟ್ಟರು.

ಈ ವೇಳೆ ಕೆ.ಆರ್.ನಗರ ತಾಲೂಕು ನಾಯಕರ ಸಂಘದ ಅಧ್ಯಕ್ಷ ನರಸಿಂಹ ನಾಯಕ, ಸಾಲಿಗ್ರಾಮ ತಾಲೂಕು ಘಟಕದ ಅಧ್ಯಕ್ಷ ಮಾದನಾಯಕ, ಗೌರವಾಧ್ಯಕ್ಷ ಎ.ಟಿ.ಶಿವಣ್ಣ, ನಾಯಕ ಸಮಾಜದ ಮುಖಂಡರಾದ ನಾಗರಾಜನಾಯಕ, ಸುಬ್ಬುಕೃಷ್ಣ, ಕೃಷ್ಣನಾಯಕ, ದೇವರಾಜು, ಲೋಹಿತ್, ಬೋರನಾಯಕ, ಬಸವರಾಜು, ಸಿ.ಆರ್.ಮಂಜುನಾಥ್, ರಾಜನಾಯಕ, ಈರಣ್ಣನಾಯಕ, ಚಂದಗಾಲು ರಾಜನಾಯಕ, ತಾಲೂಕು ಒಕ್ಕಲಿಗರ ಸಂಘದ ಉಪಾಧ್ಯಕ್ಷ ಹೆಬ್ಬಾಳು ಪರಶುರಾಮು, ಎಪಿಎಂಸಿ ಮಾಜಿ ನಿರ್ದೇಶಕ ರಾಜಶೇಖರ ಮತ್ತಿತರರು ಉಪಸ್ಥಿತರಿದ್ದರು.

50 ಲಕ್ಷ ಪರಿಹಾರ; ಪೊಲೀಸರ ಮೇಲೆ ದೌರ್ಜನ್ಯ ಕೇಸ್ ದಾಖಲಿಸಲು ಆಗ್ರಹಿಸಿ ಗ್ರಾಮಸ್ಥರ ಪ್ರತಿಭಟನೆ



ಕೆ.ಆರ್.ನಗರದಲ್ಲಿ ಆಂಬುಲೆನ್ಸ್ ನಿಲ್ಲಿಸಿ ಚಂದಗಾಲು ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಕೆ.ಆರ್.ನಗರ, ಜೂ.9– ಚೀರನಹಳ್ಳಿ ಗ್ರಾಮದ ಲೋಕೇಶ್ ಎಂಬಾತನ ಬೆದರಿಕೆಯಿಂದ ಆತ್ಮಹತ್ಯೆಗೆ ಯತ್ನಿಸಿ, ಸಾವನ್ನಪ್ಪಿರುವ ಮಹದೇವನಾಯಕ ಕುಟುಂಬಕ್ಕೆ ರಾಜ್ಯ ಸರ್ಕಾರ 50 ಲಕ್ಷ ರೂ. ಪರಿಹಾರ ನೀಡಬೇಕು. ದೂರು ಸ್ವೀಕರಿಸದೆ ನಿರ್ಲಕ್ಷ್ಯ ವಹಿಸಿದ ಪೊಲೀಸರ ವಿರುದ್ಧವು ಎಸ್‌ಸಿ ಎಸ್‌ಟಿ ದೌರ್ಜನ್ಯ ಕಾಯ್ದೆಯಡಿ ಕೇಸು ದಾಖಲಿಸಬೇಕು ಎಂದು ಒತ್ತಾಯಿಸಿ ಚಂದಗಾಲು ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಪಟ್ಟಣದ ಹೊರ ವಲಯದಲ್ಲಿರುವ ಅರ್ಕೇಶ್ವರ ದೇವಾಲಯದ ಬಳಿ ಹಾಸನ–ಮೈಸೂರು ಮುಖ್ಯರಸ್ತೆಯ ಮಧ್ಯೆ ಮಹದೇವನಾಯಕನ ಶವವಿದ್ದ ತುರ್ತು ವಾಹನವನ್ನು ನಿಲ್ಲಿಸಿ ಆಕ್ರೋಶ ವ್ಯಕ್ತಪಡಿಸಿದ ನೂರಾರು ಗ್ರಾಮಸ್ಥರು ಘಟನೆಯನ್ನು ತೀವ್ರವಾಗಿ ಖಂಡಿಸಿದರು. ರಾಜ್ಯ ನಾಯಕರ ಯುವ ಸೇನೆ ಅಧ್ಯಕ್ಷ ದೇವರಾಜ್ ಟಿ.ಕಾಟೂರು ಮಾತನಾಡಿ, ರಾಜ್ಯ ಸರ್ಕಾರ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು. ಪೊಲೀಸರ ವಿರುದ್ಧ ಪ್ರಕರಣ ದಾಖಲಿಸಬೇಕು ಎಂದು ಆಗ್ರಹಿಸಿದರು.

ಜಿಲ್ಲಾ ಗ್ರಾಮಾಂತರ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಎಲ್.ನಾಗೇಶ್ ಮತ್ತು ಡಾ.ನಂದಿನಿ ಮಾತನಾಡಿ, ಘಟನೆ ಸಂಬಂಧ ಕರ್ತವ್ಯ ಲೋಪ ಎಸಗಿದ ಪೊಲೀಸರ ವಿರುದ್ಧ ತನಿಖೆ ನಡೆಸಿ ವರದಿ ತರಿಸಿಕೊಂಡು ಕ್ರಮ ಕೈಗೊಳ್ಳುವುದರ ಜತೆಗೆ ಸರ್ಕಾರದಿಂದ ದೊರೆಯುವ ಎಲ್ಲಾ ಪರಿಹಾರ ಮತ್ತು ಸವಲತ್ತು ಕೊಡಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇವೆಂದು ಭರವಸೆ ನೀಡಿದ ನಂತರ ಪ್ರತಿಭಟನೆಯನ್ನು ಅಂತ್ಯಗೊಳಿಸಲಾಯಿತು.

ಮಹದೇವನಾಯಕನ ಶವವನ್ನು ರಸ್ತೆ ಮಧ್ಯೆ ಇಟ್ಟು ಒಂದು ಗಂಟೆಗೂ ಹೆಚ್ಚು ಕಾಲ ಪ್ರತಿಭಟನೆ ನಡೆಸಿದ್ದರಿಂದ ವಾಹನ ಸಂಚಾರ ಅಸ್ತವ್ಯಸ್ತವಾಗಿ ಪ್ರಯಾಣಿಕರು ಪರದಾಡಬೇಕಾಯಿತು. ಮುನ್ನೆಚ್ಚರಿಕೆ ಕ್ರಮವಾಗಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ನೀವೆಲ್ಲಾ ಗ್ರಾಮಗಳಿಗೆ ಹೋಗಿ ಜನರ ಸಮಸ್ಯೆ ಆಲಿಸಿ; ಪರಿಹರಿಸಿ

ಟಾಸ್ಕ್‌ಫೋರ್ಸ್ ಸಮಿತಿ ಸಭೆಯಲ್ಲಿ ಅಧಿಕಾರಿಗಳಿಗೆ ಶಾಸಕ ಅನಿಲ್ ಸೂಚನೆ



ಹೆಚ್.ಡಿ.ಕೋಟೆಯಲ್ಲಿ ಟಾಸ್ಕ್‌ಫೋರ್ಸ್ ಸಮಿತಿ ಸಭೆ ಶಾಸಕ ಅನಿಲ್ ಅಧ್ಯಕ್ಷತೆಯಲ್ಲಿ ನಡೆಯಿತು.

ಹೆಚ್.ಡಿ.ಕೋಟೆ, ಜೂ.9– ತಾಲೂಕು ಮಟ್ಟದ ಅಧಿಕಾರಿಗಳು ಗ್ರಾಮಗಳಿಗೆ ಭೇಟಿ ನೀಡಿ ಜನರ ಸಮಸ್ಯೆ ಆಲಿಸುವಂತೆ ಶಾಸಕ ಅನಿಲ್ ಚಿಕ್ಕಮಾದು ಸೂಚನೆ ನೀಡಿದರು.

ಪಟ್ಟಣದ ಮಿನಿವಿಧಾನಸೌಧದ ತಹಸೀಲ್ದಾರ್ ಕಚೇರಿಯಲ್ಲಿ ತಮ್ಮ ಅಧ್ಯಕ್ಷತೆಯಲ್ಲಿ ನಡೆದ ಟಾಸ್ಕ್‌ಫೋರ್ಸ್ ಸಮಿತಿ ಸಭೆಯಲ್ಲಿ ಅಧಿಕಾರಿಗಳಿಂದ ಬರ ಹಿನ್ನೆಲೆಯಲ್ಲಿ ತಾಲೂಕಿಗೆ ಬಿಡುಗಡೆಯಾದ ಅನುದಾನದ ಬಗ್ಗೆ ಮಾಹಿತಿ ಪಡೆದು ಮಾತನಾಡಿದ ಅವರು, ತಾಲೂಕು ಮಟ್ಟದ ಅಧಿಕಾರಿಗಳು ದಿನಕ್ಕೆ ಎರಡು ಗ್ರಾಮಗಳಿಗಾದರೂ ಭೇಟಿ ನೀಡಿ ಜನರ ಸಮಸ್ಯೆ ಆಲಿಸಬೇಕು, ಜೊತೆಗೆ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳಬೇಕು. ಅಲ್ಲದೇ ಜನರ ಹಣ ಜನರಿಗೆ ನೇರವಾಗಿ ತಲುಪುವ ಕೆಲಸ ಮಾಡಬೇಕು ಎಂದ ಅವರು, ಜನರು ನಮಗೆ ಜನಸೇವೆ ಮಾಡಲು ಅವಕಾಶ ನೀಡಿದ್ದಾರೆ. ಅದನ್ನು ನಾವು ಪ್ರಾಮಾಣಿಕವಾಗಿ ಮಾಡಬೇಕು. ಅದಕ್ಕೆ ಅಧಿಕಾರಿಗಳು ಸ್ಪಂದಿಸಿ ಕೆಲಸ ಮಾಡಬೇಕು ಎಂದು ತಿಳಿಸಿದರು.

ತಹಸೀಲ್ದಾರ್ ಶ್ರೀನಿವಾಸ್ ಮಾತನಾಡಿ, ಹೆಚ್.ಡಿ.ಕೋಟೆ ತಾಲೂಕನ್ನು ಬರಪೀಡಿತವೆಂದು ಈಗಾಗಲೇ ಸರ್ಕಾರ ಘೋಷಿಸಿದ್ದು, ಶಾಸಕ ಅನಿಲ್ ಚಿಕ್ಕಮಾದು ಅವರ ಸೂಚನೆ ಮೇರೆಗೆ ಸರ್ಕಾರದಿಂದ ಬಿಡುಗಡೆಯಾದ ಬರ ಪರಿಹಾರದ ಹಣವನ್ನು ರೈತರ ಖಾತೆಗೆ ನೇರವಾಗಿ ಜಮಾ ಮಾಡಿಸುವ ಕೆಲಸ ಮಾಡಲಾಗಿದೆ ಎಂದರು.

ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಕ್ರಮ ವಹಿಸಲಾಗಿದೆ. ಈವರೆಗೆ 365.2 ಮಿಲಿ ಮೀಟರ್ ಮಳೆಯಾಗಿ 72 ಎಕ್ಟರ್ ಬಾಳೆ, 5 ಎಕರೆ ತರಕಾರಿ ಬೆಳೆ ಹಾನಿಯಾಗಿದ್ದು, ಎರಡು ಪ್ರಾಣಿಗಳು ಸಾವನ್ನಪ್ಪಿ, ಎರಡು ಮನೆಗಳಿಗೆ ಹಾನಿಯಾಗಿದೆ. ಎಲ್ಲರಿಗೂ ಸರ್ಕಾರದಿಂದ ಪರಿಹಾರ ನೀಡಲಾಗಿದೆ. ತಾಲೂಕನ್ನು ಬರಪೀಡಿತ ಎಂದು ಘೋಷಿಸಿದ ಹಿನ್ನೆಲೆಯಲ್ಲಿ ತಾಲೂಕಿನ 33,977 ಫಲಾನುಭವಿಗಳ ಖಾತೆಗೆ ನೇರವಾಗಿ ಹಣ ಜಮಾ ಮಾಡಲಾಗಿದೆ ಎಂದರು.

ಮುಂಗಾರು ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ರೈತರಿಗೆ ಯಾವುದೇ ಬಿತ್ತನೆ ಬೀಜ, ರಸಗೊಬ್ಬರ ಕೊರತೆಯಾಗದಂತೆ ಕ್ರಮ ವಹಿಸಬೇಕು ಹಾಗೂ ಪ್ರವಾಹ ಭೀತಿ ಹಿನ್ನೆಲೆಯಲ್ಲಿ ಜಾಗೃತಿ ವಹಿಸಬೇಕು ಎಂದು ಅಧಿಕಾರಿಗಳಿಗೆ ತಿಳಿಸಲಾಗಿದೆ ಎಂದರು. ಶಾಸಕ ಅನಿಲ್ ಮಾತನಾಡಿ, ಕಬಿನಿ ಜಲಾಶಯ ಭರ್ತಿ ಆಗುವುದನ್ನು ನೋಡಿ ತಾರಕ ಜಲಾಶಯಕ್ಕೆ ನೀರು ಲಿಫ್ಟ್ ಮಾಡುವ ಕೆಲಸ ಮಾಡಬೇಕು. ವಿದ್ಯುತ್ ಇಲ್ಲ ಹಣ ಕಟ್ಟಿಲ್ಲ ಎಂಬ ಕಾರಣ ನೀಡಬಾರದು ಎಂದು ತಾರಕ ನೀರಾವರಿ ಇಲಾಖೆ ಇಂಜಿನಿಯರ್ ಅವರಿಗೆ ಶಾಸಕರು ತಾಕೀತು ಮಾಡಿದರು.

> ಸರ್ಕಾರದ ಸೌಲಭ್ಯಗಳು ನೇರವಾಗಿ ಫಲಾನುಭವಿಗಳಿಗೆ ತಲುಪಬೇಕು. ಇದರಲ್ಲಿ ಲೋಪ ಕಂಡು ಬಂದರೆ ಅಂತಹ ಅಧಿಕಾರಿಗಳನ್ನು ಸೇವೆಯಿಂದ ಅಮಾನತು ಮಾಡಲಾಗುತ್ತದೆ.
> – ಅನಿಲ್ ಚಿಕ್ಕಮಾದು, ಶಾಸಕ

ಈ ವೇಳೆ ಪುರಸಭಾ ಮುಖ್ಯಾಧಿಕಾರಿ ಸುರೇಶ್, ಕೃಷಿ ಅಧಿಕಾರಿ ಜಯರಾಂ, ತಾರಕ ಎಇಇ ರಾಮೇಗೌಡ, ಕುಡಿಯುವ ನೀರು ವಿಭಾಗದ ಎಇಇ ಗೋವಿಂದ ನಾಯಕ, ಕಬಿನಿ ಜಲಾಶಯ ಎಇಇ ಗಣೇಶ್, ಜಿಪಂ ಎಇಇ ನಾಗರಾಜು, ಪರಿಶಿಷ್ಟ ಕಲ್ಯಾಣ ವರ್ಗಗಳ ಅಧಿಕಾರಿ ಮಹೇಶ್, ಸಮಾಜ ಕಲ್ಯಾಣ ಅಧಿಕಾರಿ ರಾಮಸ್ವಾಮಿ, ಪಶು ಸಂಗೋಪನ ಡಾ.ಪ್ರಸನ್ನ, ಕೆಇಬಿ ರಾಮರೂಢ, ಪುರಸಭಾ ಸದಸ್ಯ ಹೆಚ್.ಸಿ.ನರಸಿಂಹಮೂರ್ತಿ, ಮೈಮುಲ್ ನಿರ್ದೇಶಕ ಹಿರೇಗೌಡ, ಜಿಪಂ ಮಾಜಿ ಸದಸ್ಯ ಪಿ.ರವಿ ಇನ್ನಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಭಜೆ ವಾಯುವೇಗಂ (ತೆ)	2 ಪ್ರದರ್ಶನಗಳು
ಘಜಿನಿ (ತ)	2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ವೆಪನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕ್ರೂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಡೆವಿಲ್ ಹಂಟರ್ (ತ)	4 ಪ್ರದರ್ಶನಗಳು
ಗಾಯಿತ್ರಿ	
ಜಡ್ಜ್‌ಮೆಂಟ್ (ಕ)	4 ಪ್ರದರ್ಶನಗಳು
ರಾಜಕಮಲ್	
ಇಂಡಿಯನ್ 1 (ತ)	4 ಪ್ರದರ್ಶನಗಳು
ಸಂಗಂ	
ಗರುಡನ್ (ತ)	4 ಪ್ರದರ್ಶನಗಳು
ಲಿಡೋ	
ರಾಬರ್ಟ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಘಜಿನಿ (ತ)	4 ಪ್ರದರ್ಶನಗಳು
ಪ್ರಭಾ	
ಎ (ಕ)	2 ಪ್ರದರ್ಶನಗಳು
ಡೆವಿಲ್ ಹಂಟರ್ (ತ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಬ್ಯಾಡ್ ಬಾಯ್ಸ್ ರೈಡ್ or ಡೈ (ಇ): ಬೆ.11.15ಕ್ಕೆ, ಮ.1.40ಕ್ಕೆ, ರಾ.7.25ಕ್ಕೆ, ರಾ.9.55ಕ್ಕೆ, ಘಜಿನಿ (ತ): ಸಂ.4ಕ್ಕೆ
ಸ್ಕ್ರೀನ್ 2	ಯಂಗ್‌ಮ್ಯಾನ್ (ಕ): ಬೆ.10.40ಕ್ಕೆ, ವೆಪನ್ (ತ): ಮ.1.50ಕ್ಕೆ, ಗರುಡನ್ (ತ): ಸಂ.4.20ಕ್ಕೆ, ಮಿಸ್ಟರ್ ಅಂಡ್ ಮಿಸಸ್ ಮಹಿ (ಹಿಂ): ರಾ.7.05ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 3	ದಿ ಜಡ್ಜ್‌ಮೆಂಟ್ (ಕ): ಬೆ.10.40ಕ್ಕೆ, ಕಂಡೋರ್ ಮನೆ ಕಥೆ (ಕ): ಮ.1.45ಕ್ಕೆ, ಸಹರ (ಕ): ಸಂ.4.10ಕ್ಕೆ, ಸತ್ಯಭಾಮ (ತೆ): ರಾ.7.10ಕ್ಕೆ, ಗೋಲಂ (ಮ): ರಾ.9.55ಕ್ಕೆ.
ಸ್ಕ್ರೀನ್ 4	ಮುಂಜ್ಯಾ (ಹಿಂ): ಬೆ.10.30ಕ್ಕೆ, ರಾ.10.05ಕ್ಕೆ, ಇಂಡಿಯನ್ (ತ): ಸಂ.4.05ಕ್ಕೆ, ರಾ.7.05ಕ್ಕೆ, ಮನಮೆ (ತೆ): ಸಂ.4.05ಕ್ಕೆ, ರಾ.9.50ಕ್ಕೆ

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಮುಂಜ್ಯಾ (ಇಂ): ಬೆ.11ಕ್ಕೆ, ಮ.1.45ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಬ್ಯಾಡ್ ಬಾಯ್ಸ್ ರೈಡ್ or ಡೈ (ಇ): ಬೆ.11.50ಕ್ಕೆ, ಮ.2.30ಕ್ಕೆ, ಸಂ.5.10ಕ್ಕೆ, ರಾ.7.50ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	ಮನಮೆ (ತೆ): ಮ.12.45ಕ್ಕೆ, ರಾ.7ಕ್ಕೆ, ಮಿಸ್ಟರ್ ಅಂಡ್ ಮಿಸಸ್ ಮಹಿ (ಹಿಂ): ಸಂ.4ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 4	ರಾಬರ್ಟ್ (ಕ): ಮ.3.10ಕ್ಕೆ, ಸಹರಾ (ಕ): ಸಂ.6.35ಕ್ಕೆ, ಗರುಡನ್ (ತ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಅರನ್‌ಮನೈ 4 (ತ): ಮ.1.30ಕ್ಕೆ, ರಾ.7.30ಕ್ಕೆ, ಸಹರ (ಕ): ಸಂ.4.30ಕ್ಕೆ.
ಸ್ಕ್ರೀನ್ 2	ಅನರ್ಥ (ಕ): ಸಂ.4.15ಕ್ಕೆ
ಸ್ಕ್ರೀನ್ 3	ಕಂಡೋರ್ ಮನೆ ಕಥೆ (ಕ): ಮ.1.30ಕ್ಕೆ
ಸ್ಕ್ರೀನ್ 4	

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1.15ಕ್ಕೆ, ಮ.3.40ಕ್ಕೆ, ರಾ.7.15ಕ್ಕೆ, ರಾ.10ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10.05ಕ್ಕೆ, ಮ.12ಕ್ಕೆ, ಮ.3.10ಕ್ಕೆ, ಸಂ.6.20ಕ್ಕೆ, ರಾ.9.30ಕ್ಕೆ, ಸ್ಟಾರ್ (ತ): ಮ.1ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, 4N6 (ಕ): ಮ.1.05ಕ್ಕೆ, ಅಂಜನೀಪುತ್ರ (ಕ): ಸಂ.4.15ಕ್ಕೆ, ಕೃಷ್ಣಮ್ಮ (ತೆ): ಸಂ.4.20ಕ್ಕೆ, ರಾ.10.15ಕ್ಕೆ, ಪವರ್ (ಕ): ಸಂ.6.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಶ್ರೀಭಗೀರಥ ಮಹರ್ಷಿಗಳ ತತ್ವಾದರ್ಶ ಮೈಗೂಡಿಸಿಕೊಳ್ಳಿ



ಭಗೀರಥ ಜಯಂತಿಯಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ನಂಜನಗೂಡು, ಜೂ.9– ಅಚಲವಾದ ಶ್ರದ್ಧೆ, ಭಕ್ತಿಯಿಂದ ಗಂಗೆಯನ್ನು ಭೂಮಿಗೆ ಕರೆತಂದ ಶ್ರೀಭಗೀರಥ ಮಹರ್ಷಿಗಳ ತತ್ವಾದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಶಾಸಕ ದರ್ಶನ್ ತಿಳಿಸಿದರು.

ತಾಲೂಕಿನ ಹುಣಸನಾಳು ಗ್ರಾಮದಲ್ಲಿ ಶ್ರೀಭಗಿರಥ ಉಪ್ಪಾರ ಯುವಕರ ಸಂಘದಿಂದ ನಡೆದ ಶ್ರೀಭಗೀರಥ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಮನುಕುಲದ ಉದ್ಧಾರಕ್ಕಾಗಿ ಘೋರ ತಪಸ್ಸು ಮಾಡಿ ಗಂಗೆಯನ್ನು ಭೂಮಿಗೆ ಕರೆತಂದ ಕೀರ್ತಿ ಶ್ರೀಭಗೀರಥ ಮಹರ್ಷಿಗಳಿಗೆ ಸಲ್ಲುತ್ತದೆ. ಅವರ ಶ್ರದ್ಧೆ, ಸಾಧಿಸುವ ಏಕಾಗ್ರತೆಯ ಗುಣಗಳನ್ನು ಪ್ರತಿಯೊಬ್ಬ ವಿದ್ಯಾರ್ಥಿಗಳೂ ಮೈಗೂಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಿ, ಶಾಲಾ ವಿದ್ಯಾರ್ಥಿಗಳಿಗೆ ನೋಟ್ ಬುಕ್ ಮತ್ತು ಲೇಖನ ಸಾಮಗ್ರಿಗಳನ್ನು ವಿತರಿಸುವ ಮೂಲಕ ಅರ್ಥಪೂರ್ಣವಾಗಿ ಜಯಂತಿ ಆಚರಣೆ ನಡೆಸಿರುವುದು ಸಂತಸ ತಂದಿದೆ. ಇಂತಹ ಸೇವಾ ಕಾರ್ಯ ಮುಂದುವರೆಸಿ ಬಡವರಿಗೆ ನೆರವು ನೀಡಿ ಎಂದು ಕರೆ ನೀಡಿದರಲ್ಲದೆ ಮುಂಬರುವ ದಿನಗಳಲ್ಲಿ ತಾಲೂಕಿನ ಎಲ್ಲಾ ಇಲಾಖೆಗಳ ಅಧಿಕಾರಿಗಳ ಜೊತೆಗೂಡಿ ಜನಸಂಪರ್ಕ ಸಭೆ ನಡೆಸಿ ಸ್ಥಳದಲ್ಲೇ ಸಮಸ್ಯೆಗಳನ್ನು ಬಗೆಹರಿಸುವಂತಹ ಕೆಲಸ ಮಾಡುತ್ತೇನೆ ಎಂದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಇದೇ ವೇಳೆ ಶಾಲಾ ವಿದ್ಯಾರ್ಥಿಗಳಿಗೆ ಲೇಖನಿ ಸಾಮಗ್ರಿ ಮತ್ತು ಪುಸ್ತಕಗಳನ್ನು ವಿತರಿಸಲಾಯಿತು. ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಗಿಡ ನೆಡಲಾಯಿತು.

ಇದೇ ಸಂದರ್ಭ ಸಿದ್ದರಾಜು, ಮಹದೇವಶೆಟ್ಟಿ, ಸಿದ್ದಶೆಟ್ಟಿ ಸೇರಿದಂತೆ ಗ್ರಾಮದ ಯಜಮಾನರು, ಉಪ್ಪಾರ ಯುವಕರ ಸಂಘದ ಸದಸ್ಯರು ಇದ್ದರು.

ಇಬ್ಬರು ಮನೆಗಳ್ಳರ ಬಂಧನ



ಮಂಜುನಾಥ್



ಸೂರ್ಯ

ಹುಣಸೂರು, ಜೂ.9– ಇತ್ತೀಚೆಗೆ ತಾಲೂಕಿನ ಧರ್ಮಾಪುರದಲ್ಲಿ ಹಾಡ ಹಗಲೇ ಮನೆಗೆ ನುಗ್ಗಿ ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ಹಾಗೂ ಹಣ ಕಳವು ಮಾಡಿದ್ದ ಇಬ್ಬರು ಮನೆಗಳ್ಳರನ್ನು ಬಂಧಿಸುವಲ್ಲಿ ಬಿಳಿಕೆರೆ ಪೊಲೀಸರು ಯಶಸ್ವಿಯಾಗಿದ್ದಾರೆ.

ತಾಲೂಕಿನ ಉದ್ದೂರು ಗ್ರಾಮದ ನಿವಾಸಿ ಮಂಜುನಾಥ್, ಸೂರ್ಯ ಅಲಿಯಾಸ್ ಸೂರಿ ಬಂಧಿತ ಆರೋಪಿಗಳು. ಇವರಿಂದ 1,27,400 ರೂ. ನಗದು, 1.40 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಹಾಗೂ ಕೃತ್ಯಕ್ಕೆ ಬಳಸಿದ್ದ ಮಹೀಂದ್ರಾ ಜೀತೋ ವಾಹನ ವಶಪಡಿಸಿಕೊಳ್ಳಲಾಗಿದೆ.

ವಿವರ: ಜೂ.7ರಂದು ತಾಲೂಕಿನ ಧರ್ಮಾಪುರ ಗ್ರಾಮದ ನಿವಾಸಿ ರಾಮೇಗೌಡ ಅವರ ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ಗಮನಿಸಿದ ಆರೋಪಿಗಳು ಮನೆಗೆ ನುಗ್ಗಿ 3 ಲಕ್ಷ ಮತ್ತು 35 ಗ್ರಾಂ ತೂಕದ ಚಿನ್ನಾಭರಣ ಕಳ್ಳತನ ಮಾಡಿ, ಪರಾರಿಯಾಗಿದ್ದರು. ಈ ಸಂಬಂಧ ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದ ಮೈಸೂರು ಎಸ್‌ಪಿ ಸೀಮಾ ಲಾಟ್ಕರ್, ಅಡಿಷನಲ್ ಎಸ್‌ಪಿ ನಂದಿನಿ ಹಾಗೂ ನಾಗೇಶ್ ಅವರು ಹುಣಸೂರು ಉಪ ವಿಭಾಗದ ಡಿವೈಎಸ್‌ಪಿ ಗೋಪಾಲಕೃಷ್ಣ ಮಾರ್ಗದರ್ಶನದಲ್ಲಿ ಬಿಳಿಕೆರೆ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಟಿ.ಎಸ್.ಲೋಲಾಕ್ಷಿ ನೇತೃತ್ವದಲ್ಲಿ ತಂಡ ರಚಿಸಿ ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದರು. ಅದರಂತೆ ಜೂ.9ರಂದು ಆರೋಪಿಗಳಾದ ಮಂಜುನಾಥ್, ಸೂರ್ಯ ಅಲಿಯಾಸ್ ಸೂರಿ ಅವರನ್ನು ಬಂಧಿಸಿ, ಹಣ ಹಾಗೂ ಚಿನ್ನಾಭರಣ ವಶಪಡಿಸಿಕೊಂಡು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಮತ್ತೋರ್ವ ಆರೋಪಿ ಉದ್ದೂರು ಗ್ರಾಮದ ಅಜಯ್ ತಲೆ ಮರೆಸಿಕೊಂಡಿದ್ದಾನೆ. ಕಾರ್ಯಾಚರಣೆಯಲ್ಲಿ ಕ್ರೈಂ ಎಸ್‌ಐ ನಾಗೇಶ್.ಎನ್, ಸಿಬ್ಬಂದಿಗಳಾದ ಪ್ರಸಾದ್ ಧರ್ಮಾಪುರ, ಪ್ರತಾಪ್, ಶಿವಕುಮಾರ ಹಾಗೂ ಜೀಪ್ ಚಾಲಕ ಗೋವಿಂದರಾಜು ಭಾಗವಹಿಸಿದ್ದರು.

ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ 187 ಕೋಟಿ ಅವ್ಯವಹಾರ ಪ್ರಕರಣ

ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಒತ್ತಾಯ



ತಿ.ನರಸೀಪುರ, ಜೂ.9– ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ 187 ಕೋಟಿ ರೂ. ಅವ್ಯವಹಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕೈವಾಡವಿದ್ದು, ಕೂಡಲೇ ಮುಖ್ಯಮಂತ್ರಿಗಳು ತಮ್ಮ ಹುದ್ದೆಗೆ ರಾಜೀನಾಮೆ ನೀಡಬೇಕು. ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು ಎಂದು ರಾಜ್ಯ ಜೆಡಿಎಸ್ ಮಾಧ್ಯಮ ವಕ್ತಾರ ಹಾಗೂ ರಾಜ್ಯ ವಾಲ್ಮೀಕಿ ನಾಯಕ ಸಂಘಟನೆಗಳ ಒಕ್ಕೂಟದ ಮೈಸೂರು ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್ ಒತ್ತಾಯಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಾಲ್ಮೀಕಿ ನಿಗಮದಲ್ಲಿ ನಡೆದಿರುವ 187 ಕೋಟಿ ರೂ. ಅವ್ಯವಹಾರ ಪ್ರಕರಣದಲ್ಲಿ ಸಚಿವ ಬಿ.ನಾಗೇಂದ್ರ ರಾಜೀನಾಮೆ ನೀಡಿರುವುದು ದುರದೃಷ್ಟಕರ. ಮುಖ್ಯಮಂತ್ರಿಗಳ ಮೌಖಿಕ ಆದೇಶವಿಲ್ಲದೇ ನಿಗಮದಲ್ಲಿ ಅವ್ಯವಹಾರ ನಡೆಯಲು ಸಾಧ್ಯವಿಲ್ಲ. ಅಲ್ಲದೇ ಹಣ ದುರುಪಯೋಗ ಮಾಡಿಕೊಳ್ಳುವ ಶಕ್ತಿ ಹಾಗೂ ಧೈರ್ಯ ಕೂಡ ಸಚಿವರಿಗಿಲ್ಲ. ಹಾಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಹಗರಣದ ಕೇಂದ್ರಬಿಂದು. ಆದರೆ ಇಲ್ಲಿ ಸಚಿವ ಬಿ.ನಾಗೇಂದ್ರ ತಲೆದಂಡವಾಗಿದೆ ಎಂದು ಕಿಡಿಕಾರಿದರು.

ಈ ಹಿಂದೆ ಪ.ಜಾತಿ ಮತ್ತು ವರ್ಗಗಳಿಗೆ ಮೀಸಲಿಟ್ಟಿದ್ದ 11.144 ಕೋಟಿ ರೂ.ಗಳನ್ನು ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಂಡು ಸಂವಿಧಾನ ಪರವಾದ ಕೆಲಸ ಮಾಡಿದ್ದೇವೆ ಎಂದು ಸಮರ್ಥನೆ ಮಾಡಿಕೊಂಡಿತು. ಆದರೆ ಇದೀಗ ವಾಲ್ಮೀಕಿ ನಿಗಮದಲ್ಲಿ ನಡೆದಿರುವ ಹಣ ದುರುಪಯೋಗ ಪ್ರಕರಣದಲ್ಲಿ ನಾಗೇಂದ್ರ ಅವರಿಂದ ರಾಜೀನಾಮೆ ಪಡೆದಿದ್ದಾರೆ. ಆದರೆ ಇಲ್ಲಿ ರಾಜೀನಾಮೆ ನೀಡಬೇಕಿರುವುದು ಸಚಿವ ನಾಗೇಂದ್ರ ಅಲ್ಲ. ಬದಲಿಗೆ ಮುಖ್ಯಮಂತ್ರಿ ಹಾಗೂ ಸಮಾಜ ಕಲ್ಯಾಣ ಸಚಿವರು ರಾಜೀನಾಮೆ ಕೊಡಬೇಕು ಎಂದು ಆಗ್ರಹಿಸಿದರು.

ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಸಚಿವ ನಾಗೇಂದ್ರ ಅವರಿಂದ ರಾಜೀನಾಮೆ ಪಡೆದಿದ್ದಾರೆ ಎಂದರೆ ಹಗರಣದಲ್ಲಿ ಅವರ ಕೈವಾಡ ಇಲ್ಲದೇ ಇರಲು ಸಾಧ್ಯವಿಲ್ಲ. ಹಾಗಾಗಿ ತಾವೇ ಮಾಡಿದ ತಪ್ಪಿಗೆ ಸಚಿವರ ರಾಜೀನಾಮೆ ಪಡೆಯುವುದು ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನಿಸಿದ ಅವರು ಸರ್ಕಾರಕ್ಕೆ ಮುಜುಗರ ಉಂಟು ಮಾಡಬಾರದೆಂಬ ಕಾರಣಕ್ಕೆ ಮುಖ್ಯಮಂತ್ರಿಗಳ ಆದೇಶದ ಮೇರೆಗೆ ಸಚಿವ ನಾಗೇಂದ್ರ ನೀಡಿರುವ ರಾಜೀನಾಮೆ ಅಂಗೀಕಾರ ಮಾಡದೆ ಮತ್ತೆ ಅವರಿಗೆ ಸಚಿವ ಸ್ಥಾನ ನೀಡಿ ಹಗರಣದ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿಗಳೇ ರಾಜೀನಾಮೆ ನೀಡಿ ಇಡೀ ಹಗರಣದ ತನಿಖೆಯನ್ನು ಸಿಬಿಐಗೆ ನೀಡಬೇಕೆಂದು ಒತ್ತಾಯಿಸಿದರು.

ನಾಗೇಂದ್ರ ತಲೆದಂಡ ಸಣ್ಣ ಸಮುದಾಯಕ್ಕೆ ಮಾಡಿದ ಅನ್ಯಾಯ: ಅಧಿಕಾರಿಗಳ ಸಹಾಯವಿಲ್ಲದೇ ಸಚಿವರು ಮೌಖಿಕ ಆದೇಶ ಮಾಡಿದಾಕ್ಷಣ 187 ಕೋಟಿ ರೂ. ದುರುಪಯೋಗ ಅಸಾಧ್ಯ. ಸಮಾಜ ಕಲ್ಯಾಣ ಇಲಾಖೆ ಅಡಿಯಲ್ಲಿ ಪ.ಪಂಗಡಗಳ ಇಲಾಖೆ ಬರುತ್ತದೆ. ಇದರಲ್ಲಿ ಪ್ರಿನ್ಸಿಪಲ್ ಸೆಕ್ರೆಟರಿ ಮಣಿವಣ್ಣನ್, ಪ.ಪಂಗಡಗಳ ಕಲ್ಯಾಣ ಇಲಾಖೆ ಸಚಿವರ ಪ್ರಧಾನ ಕಾರ್ಯದರ್ಶಿ ಮಂಜುನಾಥ್, ವಾಲ್ಮೀಕಿ ನಿಗಮದ ಪದ್ಮನಾಭ್ ಇದ್ದಾರೆ. ಈ ಅಧಿಕಾರಿಗಳು ಮಾಡಿದ ತಪ್ಪಿಗಾಗಿ ನಮ್ಮ ಸಮುದಾಯದ ನಾಗೇಂದ್ರರ ತಲೆದಂಡವಾಗಿದೆ. ಇದು ಮುಖ್ಯಮಂತ್ರಿ ಸಿದ್ದರಾಮಯ್ಯ ನಮ್ಮ ಸಮುದಾಯಕ್ಕೆ ಮಾಡಿದ ಅನ್ಯಾಯವಾಗಿದ್ದು, ಹಾಗಾಗಿ ಬಿ.ನಾಗೇಂದ್ರರವರ ರಾಜೀನಾಮೆ ಅಂಗೀಕರಿಸದೇ ಮತ್ತೆ ಅವರಿಗೆ ಸಚಿವ ಸ್ಥಾನ ನೀಡಬೇಕು. ಇಲ್ಲದಿದ್ದರೆ ಕಾಂಗ್ರೆಸ್ ಬೆಂಬಲಿಸಿರುವ ನಮ್ಮ ಸಮಾಜ ಪಕ್ಷಾತೀತ, ಜಾತ್ಯಾತೀತವಾಗಿ ನಾಗೇಂದ್ರ ಪರ ಹೋರಾಟ ಮಾಡಬೇಕಾಗುತ್ತದೆ. ಸಣ್ಣ ಸಮುದಾಯ ಎಂಬ ಕಾರಣಕ್ಕೆ ನಮ್ಮ ಸಮಾಜವನ್ನು ಟಾರ್ಗೆಟ್ ಮಾಡುತ್ತಿರುವ ಸಿದ್ದರಾಮಯ್ಯ ನಡೆಯ ವಿರುದ್ಧ ಪ್ರತಿಭಟನೆ ಮಾಡಬೇಕಾದ ಅನಿವಾರ್ಯತೆ ಎದುರಾಗಲಿದೆ ಎಂದು ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಆಲಗೂಡು ಶಿವಕುಮಾರ್, ರಾಜೇಶ್, ರವಿ, ಓಂಗುರು, ರಾಚನಾಯ್ಕ, ವಿಜಯ್ ಹಾಜರಿದ್ದರು.

ಸಚಿವ ಮಹದೇವಪ್ಪ ರಾಜೀನಾಮೆ ಯಾಕಿಲ್ಲ?

ಮುಖ್ಯಮಂತ್ರಿ ಸಿದ್ದರಾಮಯ್ಯ ಅವ್ಯವಹಾರ ನಡೆದಿದೆ ಎಂಬ ಕಾರಣಕ್ಕೆ ಹಿಂದುಳಿದ ವರ್ಗಕ್ಕೆ ಸೇರಿದ ಸಚಿವರಿಂದ ರಾಜೀನಾಮೆ ಪಡೆಯುತ್ತಾರೆ. ಆದರೆ ಪ.ಜಾತಿ/ಪ.ವರ್ಗಕ್ಕೆ ಮೀಸಲಾಗಿಟ್ಟ 11,144 ಕೋಟಿ ರೂ. ಹಿಂಪಡೆದು ಅನ್ಯ ಉದ್ದೇಶಕ್ಕೆ ಬಳಸಿಕೊಂಡು ಸಂವಿಧಾನ ವಿರೋಧಿ ಕೆಲಸ ಮಾಡಿದ ತಮ್ಮ ಆಪ್ತ ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರ ರಾಜೀನಾಮೆ ಕೇಳೋದಿಲ್ಲ ಇದ್ಯಾವ ನ್ಯಾಯ. ಇದೊಂದು ನಿದರ್ಶನ ಅವರಿಗೆ ಹಿಂದುಳಿದ ವರ್ಗಗಳ ಮೇಲಿರುವ ಮಲತಾಯಿ ಧೋರಣೆ ತೋರಿಸುತ್ತದೆ ಎಂದು ತಾಯೂರು ಪ್ರಕಾಶ್ ಕಿಡಿಕಾರಿದರು.

ಮಗಳ ಆಸ್ಪತ್ರೆಗೆ ದಾಖಲಿಸಿರುವ ರೈತನ ಹಣಕಿತ್ತುಕೊಂಡು ಪರಾರಿಯಾದ ಖದೀಮರು

ಪಾಪ, ಜೇಬಿಂದ ತೆಗೆದು ಎಣಿಸುವಾಗಲೇ ಎರಗಿದ ದುಷ್ಕರ್ಮಿಗಳು

ಮೈಸೂರು, ಜೂ.9(ಎಸ್‌ಬಿಡಿ)– ಮಗಳನ್ನು ಆಸ್ಪತ್ರೆಗೆ ದಾಖಲಿಸಿರುವ ರೈತರೊಬ್ಬರು, ತಮ್ಮಲ್ಲಿದ್ದ ಹಣ ಎಣಿಸುವಾಗ ಅದನ್ನು ಇಬ್ಬರು ಖದೀಮರು ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಮೈಸೂರಿನ ಕೆ.ಆರ್.ಆಸ್ಪತ್ರೆ ಬಳಿ ನಡೆದಿದೆ.

ನಂಜನಗೂಡು ತಾಲೂಕು ಅಹಲ್ಯಾ ಗ್ರಾಮದ ರೈತ ಕಾಳನಿಂಗಪ್ಪ ಅವರ 5 ಸಾವಿರ ರೂ. ಕಳ್ಳರ ಪಾಲಾಗಿದೆ. ಇವರು ತಮ್ಮ ಪುತ್ರಿಯನ್ನು ಕೆ.ಆರ್.ಆಸ್ಪತ್ರೆಗೆ ದಾಖಲಿಸಿದ್ದು, ಶನಿವಾರ ಬೆಳಗ್ಗೆ 8 ಗಂಟೆಗೆ ಉಪಾಹಾರ ತರಲೆಂದು ಸಯ್ಯಾಜಿರಾವ್ ರಸ್ತೆ ಫುಟ್‌ಪಾತ್‌ನಲ್ಲಿ ಹೋಟೆಲ್‌ಗೆ ತೆರಳುತ್ತಿದ್ದಾಗ ತಮ್ಮ ಜೇಬಿನಲ್ಲಿದ್ದ ಹಣವನ್ನು ತೆಗೆದು ಎಣಿಸುತ್ತಿದ್ದರು. ಈ ವೇಳೆ ಹಿಂದಿನಿಂದ ಇಬ್ಬರು ಬಂದಿದ್ದು, ಅವರನ್ನು ಗಮನಿಸಿ, ಕಾಳನಿಂಗಪ್ಪ ಎಚ್ಚೆತ್ತುಕೊಳ್ಳುವಷ್ಟರಲ್ಲಿ ಓರ್ವ ಏಕಾಏಕಿ ಹಣ ಕಿತ್ತುಕೊಂಡು ಸಹಚರನೊಂದಿಗೆ ಓಡಿದ್ದಾನೆ. ಆಗ ಕಾಳನಿಂಗಪ್ಪ ಕೂಗಿಕೊಂಡು ಖದೀಮರನ್ನು ಬೆನ್ನತ್ತಿದರಾದರೂ ಅವರು ಡಿವೈಡರ್ ಹಾರಿ ಪರಾರಿಯಾಗಿದ್ದಾರೆ.

ನಂತರ ದೇವರಾಜ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ, ಕಳ್ಳರ ಚಹರೆಯ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದ್ದು, ಪ್ರಕರಣ ದಾಖಲಿಸಿಕೊಂಡು ಕ್ರಮ ಕೈಗೊಳ್ಳಲಾಗಿದೆ.

ಅಮಾಯಕರೇ ಟಾರ್ಗೆಟ್: ಆಸ್ಪತ್ರೆಗೆ ಬರುವ ಅಮಾಯಕರನ್ನೇ ಟಾರ್ಗೆಟ್ ಮಾಡುವ ಖದೀಮರು ಇಂದಿಗೂ ಸಕ್ರಿಯರಾಗಿದ್ದಾರೆ. ಕೆ.ಆರ್.ಆಸ್ಪತ್ರೆಗೆ ಬರುವ ಹಳ್ಳಿಯವರನ್ನು ಯಾವುದಾದರೂ ರೀತಿ ನಂಬಿಸಿ, ವಂಚಿಸುತ್ತಾರೆ. ಕೆಲ ವರ್ಷಗಳ ಹಿಂದೆ ಶಾಸ್ತ್ರ ಹೇಳುವ ನೆಪದಲ್ಲಿ ಹಲವು ಮಹಿಳೆಯರ ಮಾಂಗಲ್ಯ ಸರವನ್ನೇ ಅವರಿಗೆ ಅರಿವಿಲ್ಲದಂತೆ ಲಪಟಾಯಿಸಿದ್ದು, ಚಿನ್ನಾಭರಣವನ್ನು ಗಂಟು ಕಟ್ಟಿಸಿ, ಅವರ ಕಣ್ಣೆದುರೇ ಬೇರೊಂದು ಗಂಟನ್ನು ಅವರಿಗೆ ನೀಡಿ, ದೋಚಿದ ಪ್ರಕರಣಗಳು ನಡೆದಿದ್ದವು. ಸಾಲ ಮಾಡಿ ಚಿಕಿತ್ಸೆಗೆ ಹಣ ಹೊಂದಿಸಿಕೊಂಡು ಬಂದ ಬಡವರನ್ನೇ ದೋಚುವ ಖದೀಮರು ಇನ್ನು ಸಕ್ರಿಯರಾಗಿದ್ದಾರೆ. ಈ ರೀತಿಯ ಕೃತ್ಯಗಳು ನಡೆಯದಂತೆ ಪೊಲೀಸರು ಕ್ರಮ ವಹಿಸಬೇಕು. ಹಾಗೆಯೇ ರಸ್ತೆ, ಫುಟ್‌ಪಾತ್ ಬದಲು ಸುರಕ್ಷಿತ ಸ್ಥಳದಲ್ಲಿ ಹಣ ಎಣಿಸುವುದು ಒಳ್ಳೆಯದು.

ಸಂವಿಧಾನ ರಕ್ಷಣೆಗೆ ಪ್ರಗತಿಪರರ ಆಗ್ರಹ



ಮೈಸೂರು, ಜೂ.9(ಜಿಎ)–ಕೇಂದ್ರದ ನೂತನ ಸರ್ಕಾರ ಸಂವಿಧಾನ ರಕ್ಷಿಸುವಂತೆ ಆಗ್ರಹಿಸಿ ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ನಗರದ ಗಾಂಧಿ ಚೌಕದಲ್ಲಿ 'ಸಂವಿಧಾನ ಪ್ರಸ್ತಾವನೆ ಓದು' ಕಾರ್ಯಕ್ರಮವನ್ನು ಭಾನುವಾರ ಹಮ್ಮಿಕೊಳ್ಳಲಾಗಿತ್ತು.

ಪ್ರಗತಿಪರರು ಸಂವಿಧಾನ ಪೀಠಿಕೆ ಓದಿದ ನಂತರ, ಈ ಹಿಂದೆ 10 ವರ್ಷ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಏಕ ಪಕ್ಷದ ಸರ್ಕಾರವು ಅನೇಕ ಅಸಂವಿಧಾನಾತ್ಮಕ ಕ್ರಮಗಳನ್ನು ಕೈಗೊಂಡು ಸುಪ್ರೀಂಕೋರ್ಟ್‌ನಿಂದ ಛೀಮಾರಿ ಹಾಕಿಸಿಕೊಂಡಿದ್ದು, ಭಾರತೀಯ ಮತದಾರ ಈ ಅಸಂವಿಧಾನಿಕ ನಡೆಗಳನ್ನು ಸಹಿಸುವುದಿಲ್ಲ ಎಂಬುದಕ್ಕೆ ಇತ್ತೀಚೆಗೆ ಹೊರಬಿದ್ದ ಫಲಿತಾಂಶವೇ ಸಾಕ್ಷಿ. ಈಗ ಅಧಿಕಾರದ ಗದ್ದುಗೆ ಏರುತ್ತಿರುವ ಸಮ್ಮಿಶ್ರ ಸರ್ಕಾರ ನಿಜವಾದ ಒಕ್ಕೂಟ ಸರ್ಕಾರವಾಗಿ ಕಾರ್ಯನಿರ್ವಹಿಸಬೇಕು ಎಂಬುದು ನಮ್ಮ ಆಶಯವಾಗಿದೆ ಎಂದು ಕೇಂದ್ರ ಸರ್ಕಾರ ಸಂವಿಧಾನದ ಸಾರ್ವಭೌಮತೆಯನ್ನು ಒಪ್ಪಬೇಕು. ಪ್ರಜಾಪ್ರಭುತ್ವದ ಹಕ್ಕುಗಳ ಮರು ಸ್ಥಾಪನೆ ಮಾಡಲು ಮುಂದಾಗಲಿ, ಜನ ಕೇಂದ್ರಿತ ಅಭಿವೃದ್ಧಿ ಈ ಸರ್ಕಾರದ ನಡೆಯಾಗಲಿ ಎಂದು ಒತ್ತಾಯಿಸಿದರು.

ಈ ವೇಳೆ ಮೇಜರ್ ಜನರಲ್ ಎಸ್.ಜಿ. ಒಂಬತ್ಕೆರೆ, ಲ.ಜಗನ್ನಾಥ್, ಜಗದೀಶ್ ಸೂರ್ಯ, ರತೀರಾವ್, ಸ್ವರ್ಣಮಾಲಾ, ಸಿದ್ದಪ್ಪ ಪಂಡಿತಾರಾಧ್ಯ ಹಿರಿಯ ಪತ್ರಕರ್ತ ಕೃಷ್ಣಪ್ರಸಾದ್, ಶ್ರೀದೇವಿ, ಬಿ.ಎಂ.ಪ್ರವೀಣ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ 45 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

FORM III-A
IN THE HIGH COURT OF KARNATAKA AT BENGALURU
WRIT PETITION NO. 33674/2017 (LR) [NOTICE UNDER RULE 13(A) PROVISO]

PETITIONERS: Sri. G. Dasappa S/o Late Girigowda, Aged about 75 years, R/o Thimakapur Village, Kasaba Hobli, Periyapatna Taluk, Mysuru District-577 002
(By Sri. A Madhusudhana Rao Advocate.)

RESPONDENTS: State of Karnataka, Represented by its Secretary, Department of Revenue, Vidhana Soudha, Bengaluru -01 & others

TO: Respondents: R-4 Sri. Rajanna S/o Late Dasegowda Aged about 78 years,
R-5. Smt. Nagamma W/o Giri Gowda, Aged about 65 years,
R-4 and R-5 Both are Agriculturists, R/o Thimakapur Village, Kasaba Hobli, Periyapatna Taluk, Mysuru District - 577 023

Whereas, a Writ Petition filed by the above named petitioner under Article 226 & 227 of the Constitution of India, as in the copy annexed hereunto, has been registered by this court.

Notice is hereby given to you to appear in this court in person or through an Advocate duly instructed or through some one authorised by law to act for you in this case, on 10.07.2024. at 10.30 AM of the service of this notice to show cause why rule nisi should not be issued.

If you fail so to appear on the said date or any subsequent date to which the matter may be posted as directed by the court, without any further notice, the petition will be dealt with, heard and decided on merits in your absence.

Issued under my hand and the seal of this court on 29.05.2024.

By Order of the Court,
Sd/- ASSISTANT REGISTRAR

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಎಸ್. ಸೋಮಣ್ಣ
ಅಧ್ಯಕ್ಷರು, ದಿ. ಮೈ.ಕೋ.ಆ. ಬ್ಯಾಂಕ್ ನಿ.

ನಮ್ಮ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಸ್. ಸೋಮಣ್ಣ ನವರು, ಈ ದಿನ (ದಿನಾಂಕ 9-6-2024ರಂದು) ನಿಧನರಾಗಿದ್ದು, ಅವರ ಸೇವೆ ನಮ್ಮ ಬ್ಯಾಂಕಿಗೆ ಅಪಾರವಾದದ್ದು, ಇವರ ಸಾವು ನಮ್ಮ ಪಾಲಿಗೆ ತುಂಬಲಾರದ ನಷ್ಟವಾಗಿದೆ. ಭಗವಂತನು ಮೃತರ ಆತ್ಮಕ್ಕೆ ಶಾಂತಿಕೊಟ್ಟು ಅವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ದುಃಖತಪ್ತರು: ದಿ. ಮೈಸೂರು ಕೋ. ಆಪರೇಟಿವ್ ಬ್ಯಾಂಕ್ ನಿ., ಬ್ಯಾಂಕಿನ ಆಡಳಿತ ಮಂಡಳಿ ಮತ್ತು ಸಿಬ್ಬಂದಿವರ್ಗದವರು.

11ನೇ ವರ್ಷದ ಪುಣ್ಯಸ್ಮರಣೆ



ಗೋವಿಂದ ತಿಮ್ಮ
ದುಃಖತಪ್ತರು: ಕಮಲಮ್ಮ, ಮೊಮ್ಮಕ್ಕಳು: ಯಶವಂತ, ಗೌತಮಿ, ಛಾಯ, ಅನ್ವಿತಾ, ಮೋನಿತ್

